ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ರೈನ್‌ಕೋಟ್ ಪ್ರಧಾನಿಗಳು



ಸಂಪುಟ 11 | ಸಂಚಿಕೆ 08 | ಪುಟ 16 | ಫೆಬ್ರವರಿ 13-19, 2017 | ರೂ. 10/-

web: www.janashakthi.co.in | e-mail : js_weekly@yahoo.com





ಹೊಸ ಭಾರತದ ಕನಸು

ನೋಟು ರದ್ಧತಿ



ಜನಸಾಮಾನ್ಯರ ವಿರುದ್ಧ ನಗದು ಸಮರ

ಜನತೆಯ ಮೇಲೆ 'ಕ್ಯಾಶ್‌ವಾರ್'



ಸಮತೆಗಾಗಿ ಸಹಪಯಣ

ಮಧ್ಯಮ ಮಾರ್ಗ ಎಂದರೇನು?

ತಮಿಳುನಾಡಿನಲ್ಲಿ ಹೊಸ ಸಿ.ಎಂ.?

ಮಹಿಳಾ ಮೀಸಲಾತಿ ಎಲ್ಲಿ ?



“ಪ್ರಧಾನಿಗಳ ಬಳಿ ಉತ್ತರವಿಲ್ಲ, ಇರುವುದು ಒಣ ಮಾತುಗಾರಿಕೆ ಮಾತ್ರ”

ಇದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚೂರಿಯವರು ಫೆಬ್ರುವರಿ ೮ರಂದು ಪ್ರಧಾನ ಮಂತ್ರಿಗಳು ರಾಜ್ಯಸಭೆಯಲ್ಲಿ ಮಾತನಾಡಿದ ವೈಖರಿಯ ಬಗ್ಗೆ ಮಾಡಿರುವ ಟಿಪ್ಪಣಿ.

ಅವರ ಬಳಿ ಉತ್ತರವಿಲ್ಲ. ಅವರು ಸಹ–ಸಂಸದರನ್ನು ಅವಮಾನ, ಕುಹಕ ಮತ್ತು ಬೈಗುಳಗಳ ಮೂಲಕ ಹೊಡೆದೋಡಿಸುತ್ತಾರೆ.ರಾಷ್ಟ್ರಪತಿಗಳ ಭಾಷಣಕ್ಕೆ ವಂದನೆಯ ಠರಾವಿನ ಮೇಲೆ ನಡೆದ ಶ್ರೀಮಂತ ಚರ್ಚೆಗೆ ಉತ್ತರವಾಗಬೇಕಿದ್ದ ಭಾಷಣವನ್ನು ಒಂದು ಬೀದಿ ಬದಿಯ ಪ್ರಹಸನದ ಮಟ್ಟಕ್ಕೆ ಇಳಿಸಿದ್ದಾರೆ. ನಾವು ಸದನದಲ್ಲಿ ಎತ್ತಿದ ಗಂಭೀರ ಪ್ರಶ್ನೆಗಳಿಗೆ ಮೋದಿಯವರ ಬಳಿಯಿರುವ ಒಂದೇ ಉತ್ತರವೆಂದರೆ ಹಿರಿಯ ಪ್ರತಿಪಕ್ಷಗಳ ಮುಖಂಡರಿಗೆ, ಒಬ್ಬ ಗೌರವಾನ್ವಿತ ಮಾಜಿ ಪ್ರಧಾನಿಗಳಿಗೂ ವೈಯಕ್ತಿಕ ಅವಮಾನಗಳು ಮಾತ್ರ ಎಂದು ಅವರು ಖೇದ ವ್ಯಕ್ತಡಿಸಿದ್ದಾರೆ.

ಇದೊಂದು ಸ್ವಾತಂತ್ರ್ಯದ ನಂತರ ನಾವು ಕಂಡಿರುವ ಅತ್ಯಂತ ನಿರ್ದಯ, ನಿರ್ಲಕ್ಷ್ಯದ ಸರಕಾರ, ನೋಟುರದ್ಧತಿಯಿಂದಾಗಿ ಲಕ್ಷಾಂತರ ಜನಗಳ ಜೀವನಾಧಾರ ಧ್ವಂಸಗೊಂಡಿದ್ದಲ್ಲದೆ, ಬ್ಯಾಂಕುಗಳ ಮುಂದಿನ ಸಾಲುಗಳಲ್ಲಿ ಕಾಯುತ್ತ ನೂರಕ್ಕೂ ಹೆಚ್ಚು ಮಂದಿ ಸತ್ತಿದ್ದಾರೆ. ಆದರೂ ಸತ್ತವರ ಬಗ್ಗೆ ಸಂತಾಪ ನಿರ್ಣಯವಿರಲಿ, ಈ ಸಾವುಗಳ ಪ್ರಸ್ತಾಪವೂ ಮೋದಿಯವರಿಂದ ಬಂದಿಲ್ಲ.

ಮೋದಿಯವರ ಕಣ್ಗಾವಲಿನಲ್ಲಿ ರೈತರ ಆತ್ಮಹತ್ಯೆಗಳು ಹಲವು ಪಟ್ಟು ಏರಿವೆ. ಭಾರತೀಯ ಆರ್ಥಿಕ ವ್ಯವಸ್ಥೆ ಮುಳುಗುತ್ತಿದೆ, ನೋಟುಹರಣದ ತುಘ್ಲಕ್ ಫರ್ಮಾನುಗಳಿಂದಾಗಿ ತಳ ಕಚ್ಚುತ್ತಿದೆ. ಭಾರತೀಯರ ಸಂಕಟಗಳಿಗೆ ಯಾವುದೇ ಕ್ರಿಯಾಯೋಜನೆಯಿಲ್ಲದೆ, ಪ್ರಧಾನ ಮಂತ್ರಿಗಳ ಸ್ಥಾನ ಅಂತಿರಲಿ, ಒಬ್ಬ ಸಂಸದನ ಸ್ಥಾನಕ್ಕೂ ತಕ್ಕುದಲ್ಲದ ಅಗ್ಗದ ಹಾವಭಾವಗಳ ಮಟ್ಟಕ್ಕೆ ಮೋದಿಯವರು ಇಳಿದಿದ್ದಾರೆ.

ಚರ್ಚೆಯಲ್ಲಿ ಎತ್ತಿದ ಒಂದೇ ಒಂದು ಅಂಶಕ್ಕೆ ಉತ್ತರ ನೀಡದೆ ಮೋದಿ ಸಂಸತ್ತಿಗೆ, ಜನತೆಗೆ ತಮ್ಮ ಹೊಣೆಗಾರಿಕೆಯನ್ನು ಧ್ವಂಸ ಮಾಡಿದ್ದಾರೆ. ಫ್ಯಾಸಿಸ್ಟ್ ಮಾದರಿಯ ಒಣ ಮಾತುಗಾರಿಕೆ ಜವಾಬುದಾರಿಕೆಯ ಸ್ಥಾನ ಪಡೆಯಲಾರದು ಎಂದ ಯೆಚೂರಿಯವರು ಒರಟುತನ ದುರ್ಬಲ ವ್ಯಕ್ತಿಯ ಶಕ್ತಿಯ ಸೋಗು ಎಂದು ನೆನಪಿಸುತ್ತ ಮೋದಿ ಸಂಸದೀಯ ಪ್ರಜಾಪ್ರಭುತ್ವವನ್ನು ಹೊಲಸು ಮಟ್ಟಗಳ ಸಮೀಪಕ್ಕೆ ಇಳಿಸಿದ್ದಾರೆ ಎಂದಿದ್ದಾರೆ.

ಮೋದಿ ಮತ್ತು ಅವರ ಸರಕಾರದ ಟೊಳ್ಳುತನ, ಅಹಂಕಾರ ಪ್ರತಿದಿನ ಅದರ ವಂಚನೆಯ, ಕಾಲಹರಣದ ಮತ್ತು ಛಿದ್ರಕಾರಿ ಅಜೆಂಡಾವನ್ನು ತೋರಿಸುತ್ತಿದೆ. ನಾವು ಈ ಸರಕಾರದ ಕುಟಿಲ ಅಜೆಂಡಾವನ್ನು ಸಂಸತ್ತಿನ ಒಳಗೂ, ಹೊರಗೂ ಬಯಲಿಗೆಳೆಯುವುದನ್ನು ಮುಂದುವರೆಸುತ್ತೇವೆ ಎಂದು ಯೆಚೂರಿ ಹೇಳಿದ್ದಾರೆ.

ಮಾತೆಂದರೆ ಇದು

ನವ–ಉದಾರವಾದಿ ಪ್ರಜಾಪ್ರಭುತ್ವ ನಾಗರಿಕರ ಬದಲು ಗ್ರಾಹಕರನ್ನು, ಸಮುದಾಯಗಳ ಬದಲು ಶಾಪಿಂಗ್ ಮಾಲುಗಳನ್ನು ತಯಾರಿಸುತ್ತದೆ. ಹತಾಶರಾದ ಸಾಮಾಜಿಕವಾಗಿ ಶಕ್ತಿಹೀನರಾದ ಯಾರೊಂದಿಗೂ ಸಂಬಂಧ ಹೊಂದಿರದ ವ್ಯಕ್ತಿಗಳ ಅಣುವಿನಂತಹ ಸಮಾಜ ಇದರ ಒಟ್ಟು ಪರಿಣಾಮ. ಆದ್ದರಿಂದ ನವ–ಉದಾರವಾದ ಪಾಲ್ಗೊಳ್ಳುವಿಕೆ ಇರುವ ನಿಜವಾದ ಪ್ರಜಾಪ್ರಭುತ್ವಕ್ಕೆ ತಕ್ಷಣದ ಮತ್ತು ಪರಮ ವೈರಿಯಾಗಿರುತ್ತದೆ.

– ನೋಮ್ ಚೋಮ್ಸ್ಕಿ

ರಾಷ್ಟ್ರೀಯ ಸಂಪತ್ತಾಗಿರುವ ರೈಲ್ವೆಯ ಖಾಸಗೀಕರಣದ ಪ್ರಕ್ರಿಯೆ ಆರಂಭವಾಗುತ್ತಿದೆ, ಅದನ್ನು ಪ್ರತಿರೋಧಿಸಬೇಕು : ದೇಶಪ್ರೇಮಿ ಜನಗಳಿಗೆ ಸಿಐಟಿಯು ಕರೆ

ಕಾಲ್ಕ ಮತ್ತು ಶಿಮ್ಲಾ, ಸಿಲಿಗುರಿ ಮತ್ತು ದಾರ್ಜಿಲಿಂಗ್, ನೀಲಗಿರಿ ಬೆಟ್ಟಗಳು ಮತ್ತು ತಪ್ಪಲು ಪ್ರದೇಶ ಹಾಗೂ ನೇರಳ್ ಮತ್ತು ಮಾಥೇರಾನ್ ನಡುವಿನ ರೈಲುಗಳನ್ನು ಮತ್ತು ಕಾಂಗ್ರ ಕಣಿವೆಯ ರೈಲು ಮಾರ್ಗವನ್ನು ಖಾಸಗಿಯವರಿಗೆ, ಅದರಲ್ಲೂ ವಿದೇಶೀ ಕಂಪನಿಗಳಿಗೆ ವಹಿಸಿ ಕೊಡುವ ಯೋಚನೆಯನ್ನು ಸರಕಾರ ಮಾಡುತ್ತಿದೆ ಎಂದು ಇಕನಾಮಿಕ್ ಟೈಮ್ಸ್ ವರದಿ ಮಾಡಿದೆ.

ಈ ಕಂಪನಿಗಳು ಈ ಸುಪ್ರಸಿದ್ಧ ಪ್ರವಾಸೀ ಆಕರ್ಷಣೆಯ ಮಾರ್ಗಗಳಲ್ಲಿ ರೈಲುಗಳನ್ನು ಓಡಿಸುವುದಷ್ಟೇ ಅಲ್ಲ, ಅವುಗಳ ಉಸ್ತುವಾರಿಯ, ಒಡೆತನದ ಹಕ್ಕನ್ನೂ ಪಡೆಯುತ್ತವೆ ಎಂದು ಹೇಳಲಾಗಿದೆ. ಪ್ರಯಾಣದರಗಳನ್ನು ನಿರ್ಧರಿಸುವ ಹಕ್ಕು ಕೂಡ ಅವುಗಳಿಗೆ ಇರುತ್ತದೆಯಂತೆ. ಒಂದು ರೈಲ್ವೆ ಅಭಿವೃದ್ಧಿ ಪ್ರಾಧಿಕಾರವನ್ನು ರಚಿಸಲಾಗುವುದು, ಅದರ ಅದರ ಮಂಜೂರಾತಿ ಪಡದರೆ ಸಾಕು.

ಇದು ಭಾರತದಲ್ಲಿ ಕೋಟ್ಯಂತರ ಬಡ ಮತ್ತು ಸಾಮಾನ್ಯ ಪ್ರಯಾಣಿಕರಿಗೆ ಒಂದು ಕೈಗೆಟಕುವ ಸಾರಿಗೆಯನ್ನು ಒದಗಿಸುವ ಜವಾಬ್ದಾರಿಯಿಂದ ಸರಕಾರ ನುಣುಚಿಕೊಂಡು, ರೈಲು ವ್ಯವಸ್ಥೆಯನ್ನು ನಿರ್ವಹಿಸುವಲ್ಲಿ ಕಾರ್ಪೊರೇಟ್ ಭಾಗವಹಿಸುವಿಕೆಯ ಮೊದಲ ಹೆಜ್ಜೆ ಎಂದು ಹೇಳಲಾಗಿದೆ. ಅಂ–ದರೆ ಸಾಮಾನ್ಯ ಪ್ರಯಾಣಿಕರು ಇನ್ನು ಮುಂದೆ ಪ್ರಯಾಣ ದರಗಳ ವಿಚಾರದಲ್ಲೂ, ಸುರಕ್ಷಿತತೆಯ ವಿಚಾರದಲ್ಲೂ ಮಾರುಕಟ್ಟೆ ಶಕ್ತಿಗಳ ಮರ್ಜಿಗೆ ಒಳಗಾಗ ಬೇಕಾಗುತ್ತದೆ.

ಕಳೆದ ಮೂರೇ ತಿಂಗಳಲ್ಲಿ 200 ಮಂದಿ ರೈಲು ಅಪಘಾತಗಳಲ್ಲಿ ಬಲಿಯಾಗಿದ್ದಾರೆ. ಆದರೂ ಸುರಕ್ಷಿತತೆಯ ಕ್ರಮಗಳನ್ನು ಉತ್ತಮಪಡಿಸುವ ಬದಲು, ನಷ್ಟವಾಗುತ್ತಿದೆ, ನಿರ್ವಹಣೆಯ ಖರ್ಚು ಭರಿಸುವುದಾಗುತ್ತಿಲ್ಲ ಎಂದು ನೆವವೊಡ್ಡಿ ಖಾಸಗೀಕರಣದ ಮಾರ್ಗ ಹಿಡಿಯಲು ಸರಕಾರ ನಿರ್ಧರಿಸಿದೆ.

ಇದನ್ನು ಸಿಐಟಿಯು ಬಲವಾಗಿ ಖಂಡಿಸಿದೆ. ಖಾಸಗಿಯವರಿಗೆ ಸಾಮಾನ್ಯ ಜನರ ಸುರಕ್ಷಿತತೆ–ಯ ಪರಿವೆಯೇ ಇಲ್ಲ ಎಂಬುದನ್ನು ಇತ್ತೀಚಿನ ಈಸ್ಟರ್ನ್ ಕೋಲ್‌ಫೀಲ್ಡ್ಸ್‌ನ ಭೀಕರ ಅಪಘಾತ ಮತ್ತೊಮ್ಮೆ ನೆನಪಿಸಿದೆ ಎಂದಿರುವ ಸಿಐಟಿಯು ಪ್ರಧಾನ ಮಂತ್ರಿಗಳು ಮತ್ತು ರೈಲ್ವೆ ಮಂತ್ರಿಗಳು ರೈಲ್ವೆಯ ಖಾಸಗೀಕರಣ ಮಾಡುವುದಿಲ್ಲ, ಹಾಗೆ ಹೇಳುತ್ತಿರುವವರು ಸುಳ್ಳುಗಳನ್ನು ಹರಡುತ್ತಿದ್ದಾರೆ ಎಂದು ಇದುವರೆಗೂ ಹೇಳುತ್ತ ಬಂದಿರುವುದನ್ನು ಕೂಡ ನೆನಪಿಸಿದೆ.

ಇದನ್ನು ತಕ್ಷಣ ನಿಲ್ಲಿಸಬೇಕು, ಯಾವುದೇ ಸ್ವರೂಪದ ಖಾಸಗೀಕರಣವನ್ನು ರೈಲ್ವೆ ನೌಕರರು ಮಾತ್ರವೇ ಅಲ್ಲ, ಸಮಸ್ತ ಕಾರ್ಮಿಕ ವರ್ಗ ಪ್ರತಿರೋಧಿಸಬೇಕು ಎಂದು ಸಿಐಟಿಯು ಕರೆ ನೀಡಿದೆ.

ರೈಲು ವ್ಯವಸ್ಥೆ ನಮ್ಮ ರಾಷ್ಟ್ರೀಯ ಸಂಪತ್ತು, ಅದನ್ನು ಖಾಸಗಿಯುವರಿಗೆ, ಅದರಲ್ಲೂ ವಿದೇಶೀಯರಿಗೆ ಯಾವುದೇ ಸ್ವರೂಪದಲ್ಲಿ ವಹಿಸಿಕೊಡಬಾರದು ಎಂದು ದೇಶಪ್ರೇಮಿ ಜನತೆ ಕೂಡ ಪ್ರತಿರೋಧಿಸಬೇಕು ಎಂದು ಅದು ಕರೆ ನೀಡಿದೆ.

ಎರಡೂವರೆ ವರ್ಷಗಳಾದರೂ ಮಹಿಳಾ ಮೀಸಲಾತಿ ಮಸೂದೆ ಪಾಸಾಗಿಲ್ಲ ಏಕೆ? ಇನ್ನಷ್ಟು ವಿಳಂಬವಿಲ್ಲದೆ ಪಾಸು ಮಾಡಲು ಮಹಿಳಾ ಸಂಘಟನೆಗಳ ಆಗ್ರಹ

ದೇಶದ ಮಹಿಳಾ ಸಂಘಟನೆಗಳು ಕಳೆದ ಎರಡು ದಶಕಗಳಿಂದ ಸತತವಾಗಿ ಹೋರಾಟ ನಡೆಸುತ್ತಿದ್ದರೂ, ಇನ್ನೂ ಶಾಸನ ಸಭೆಗಳಲ್ಲಿ ಮಹಿಳೆಯರಿಗೆ ಮೀಸಲಾತಿ ಇನ್ನೂ ಮಸೂದೆಯ ಮಟ್ಟದಲ್ಲೇ ಉಳಿದಿದೆ, ಎನ್‌ಡಿಎ ಸರಕಾರ ಇನ್ನೂ ಅದನ್ನು ಸಂಸತ್ತಿನ ಅಜೆಂಡಾಕ್ಕೆ ತರಲು ಹಿಂದೆ–ಮುಂದೆ ನೋಡುತ್ತಿದೆ ಎಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘ(ಎಐಡಿಡಬ್ಲ್ಯುಎ) ಮತ್ತು ಭಾರತೀಯ ಮಹಿಳೆಯರ ರಾಷ್ಟ್ರೀಯ ಒಕ್ಕೂಟ(ಎನ್‌ಎಫ್‌ಐಡಬ್ಲ್ಯು) ತೀವ್ರ ನಿರಾಸೆಯನ್ನು ವ್ಯಕ್ತಪಡಿಸಿವೆ.

ದೀರ್ಘಕಾಲದ ಹೋರಾಟದ ಒತ್ತಡದಿಂದಾಗಿ ಈಗಿನ ಆಳುವ ಪಕ್ಷ ಕೂಡ ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ಈ ಬಗ್ಗೆ ಭರವಸೆ ಕೊಟ್ಟಿತ್ತು. ಈ ಭರವಸೆ ಈಡೇರುವುದು ಎಂದು ದೇಶದ ಜನತೆ , ವಿಶೇಷವಾಗಿ ಮಹಿಳೆಯರು ಎರಡೂವರೆ ವರ್ಷ ಕಾದಿದ್ದಾರೆ. ರಾಷ್ಟ್ರೀಯ ಮಹಿಳಾ ಸಂಘಟನೆಗಳು ಮತ್ತೆ–ಮತ್ತೆ ಲೋಕಸಭಾಧ್ಯಕ್ಷರನ್ನು, ಸಂಬಂಧಪಟ್ಟ ಮಂತ್ರಿಗಳನ್ನು ಭೇಟಿಯಾಗಿದ್ದಾರೆ. ಆದರೂ, ಅಗತ್ಯ ಬಹುಮತ ಇದ್ದರೂ ಸರಕಾರ ಈ ನಿಟ್ಟಿನಲ್ಲಿ ಅಗತ್ಯ ಕ್ರಮಗಳನ್ನು ಕೈಗೊಳ್ಳುವಲ್ಲಿ ವಿಫಲವಾಗಿದೆ.

ಅದು ಮಹಿಳೆಯರ ಸಬಲೀಕರಣದ ಬಗ್ಗೆ ಬಹಳವಾಗಿ ಮಾತಾಡುತ್ತಿದೆ, ಆದರೆ ನಿರ್ಣಯ ಕೈಗೊಳ್ಳುವ ಉನ್ನತ ಸಂಸ್ಥೆಗಳಲ್ಲಿ ಮಹಿಳೆಯರ ರಾಜಕೀಯ ಭಾಗವಹಿಸುವಿಕೆಯನ್ನು ಹೆಚ್ಚಿಸುವಲ್ಲಿ ಮಾತ್ರ ನಿಷ್ಕ್ರಿಯವಾಗಿದೆ. ಈ ಗೋಸುಂಬೆ ನಿಲುವು ಈ ಸರಕಾರ ಅನುಸರಿಸುತ್ತಿರುವ ಧೋರಣೆಗಳಿಗೆ ಅನುರೂಪವೇ ಆಗಿರುವಂತೆ ಕಾಣುತ್ತಿದೆ. ಏಕೆಂದರೆ ‘ಅಚ್ಛೇ ದಿನ್’ ರಾಗ ಹಾಡುತ್ತಿದ್ದರೂ, ಪ್ರತಿಯೊಂದು ಹಂತದಲ್ಲೂ ಮಹಿಳೆಯರ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಮೊಟಕು ಮಾಡಲಾಗುತ್ತಿದೆ ಎಂದು ಈ ಎರಡು ಸಂಘಟನೆಗಳು ಪತ್ರಿಕಾ ಹೇಳಿಕೆಯೊಂದರಲ್ಲಿ ಅಭಿಪ್ರಾಯ ಪಟ್ಟಿವೆ.

ಈ ಕೇಂದ್ರ ಸರಕಾರದ ಹಿಂಜರಿಕೆಯ, ವಿಳಂಬದ ತಂತ್ರಗಳಿಗೆ ತಮ್ಮ ಎರಡು ಸಂಘಟನೆಗಳು ಮತ್ತು ಪ್ರಜಾಪ್ರಭುತ್ವವಾದಿ ಗುಂಪುಗಳು ಬಲಿ ಬೀಳುವುದಿಲ್ಲ ಎಂದು ಎಚ್ಚರಿಸಿರುವ ಈ ಹೇಳಿಕೆ ತಮ್ಮ ಸಂಘಟನೆಗಳು ಸಂಸತ್ತಿನ ಒಳಗೂ, ಹೊರಗೂ ಎಲ್ಲ ವಿಚಾರವಂತ ವಿಭಾಗಗಳನ್ನು ಅಣಿನೆರೆಸಿ ಈ ಸರಕಾರ ಇನ್ನಷ್ಟು ವಿಳಂಬ ಮಾಡದೆ ಸರಕಾರ ಈ ಮಸೂದೆಯನ್ನು ಮಂಡಿಸಿ ಅಂಗೀಕಾರ ಗೊಳ್ಳುವಂತೆ ಮಾಡಲು ಒತ್ತಡ ತರಲು ದೃಢನಿರ್ಧಾರ ಮಾಡಿವೆ ಎಂದು ಎಐಡಿಡಬ್ಲ್ಯುಎ ಅಧ್ಯಕ್ಷರಾದ ಮಾಲಿನಿ ಭಟ್ಟಾಚಾರ್ಯ, ಪ್ರಧಾನ ಕಾರ್ಯದರ್ಶಿ ಮರಿಯಮ್ ಧವಳೆ, ಎನ್‌ಎಫ್‌ಐಡಬ್ಲ್ಯು ಅಧ್ಯಕ್ಷರಾದ ಅರುಣಾ ರಾಯ್ ಹಾಗೂ ಪ್ರಧಾನ ಕಾರ್ಯದರ್ಶಿ ಅನ್ನೀ ರಾಜಾ ಹೇಳಿದ್ದಾರೆ.

ನಾಗಾಲ್ಯಾಂಡಿನಲ್ಲಿ ಪ್ರತಿರೋಧ–ಸರಕಾರ ಸಂವಾದ ನಡೆಸಬೇಕೆಂದು ಆಗ್ರಹ

ನಾಗಾಲ್ಯಾಂಡಿನಲ್ಲೂ ೧16 ವರ್ಷಗಳ ದೀರ್ಘ ಅಂತರಾಳದ ನಂತರ ನಡೆಯುತ್ತಿರುವ 33 ನಗರ ಸ್ಥಳೀಯ ಸಂಸ್ಥೆಗಳಿಗೆ ನಡೆಯಲಿರುವ ಚುನಾವಣೆಗಳಲ್ಲಿ 33ಶೇ. ಮೀಸಲಾತಿಯನ್ನು ಜಾರಿಗೊಳಿಸುವುದಕ್ಕೆ ಕೆಲವು ಬುಡಕಟ್ಟು ಗುಂಪುಗಳು ಪ್ರತಿರೋಧ ಒಡ್ಡುತ್ತಿರುವುದು ದುರದೃಷ್ಟಕರ ಎಂದು ಎಐಡಿಡಬ್ಲ್ಯುಎ ಹೇಳಿದೆ.

ನಾಮಪತ್ರ ಸಲ್ಲಿಸಿದ ಮಹಿಳೆಯರು ತಮ್ಮ ನಾಮಪತ್ರಗಳನ್ನು ಹಿಂತೆಗೆದುಕೊಳ್ಳುವಂತೆ ಮಾಡಲಾಗಿದೆ ಮತ್ತು ಚುನಾವಣೆಯನ್ನು ಬಹಿಷ್ಕರಿಸುವ ಕರೆ ನೀಡಲಾಗಿದೆ. ಬುಡಕಟ್ಟುಗಳ ಪಾರಂಪರಿಕ ಕಾನೂನುಗಳನ್ನು ಕಾಪಾಡಿಕೊಳ್ಳುವ ಹೆಸರಿನಲ್ಲಿ ಇವನ್ನು ಮಾಡಲಾಗುತ್ತಿದೆ. ಹಿಂಸಾಚಾರದ ಹಿನ್ನೆಲೆಯಲ್ಲಿ ಪೊಲೀಸ್ ಗೋಲೀಬಾರಿನಲ್ಲಿ ಇಬ್ಬರು ಸತ್ತಿದ್ದಾರೆ.

ಈ ಬಗ್ಗೆ ಆಘಾತ ವ್ಯಕ್ತಪಡಿಸಿರುವ ಎಐಡಿಡಬ್ಲ್ಯುಎ, ಲಿಂಗಸಮಾನತೆಯ ವಿಚಾರವನ್ನು ಪಾರಂಪರಿಕ ಕಾನೂನುಗಳ ಎದುರು ನಿಲ್ಲಿಸಲಾಗಿರುವುದು ಖೇದಕರ ಸಂಗತಿ ಎಂದಿದೆ. ಸಂವಿಧಾನದ ಮಹಿಳಾ ಮೀಸಲಾತಿ ಅಂಶವನ್ನು ಪ್ರತಿರೋಧಿಸಿ ಮಹಿಳೆಯರ ಹಕ್ಕನ್ನು ನಿರಾಕರಿಸಿರುವುದು ದೂಷಣೀಯ ಸಂಗತಿ ಮತ್ತು ಅದೇ ರೀತಿಯಲ್ಲಿ ಪರಿಸ್ಥಿತಿಯನ್ನು ಎದುರಿಸಲು ಸರಕಾರ ಅನುಸರಿಸಿರುವ ಪೋಲೀಸ್ ಕ್ರಮ ಕೂಡ ಖಂಡನೀಯ ಎಂದಿರುವ ಎಐಡಿಡಬ್ಲ್ಯುಎ ಮಹಿಳಾ ಹಕ್ಕುಗಳಿಗಾಗಿ ಹೋರಾಡುತ್ತಿರುವ ನಾಗಾಲ್ಯಾಂಡಿನ ಮಹಿಳೆಯರಿಗೆ ಮತ್ತು ಅವರ ಸಂಘಟನೆಗಳಿಗೆ ಬೆಂಬಲ ವ್ಯಕ್ತಪಡಿಸಿದೆ ಹಾಗೂ ರಾಜ್ಯ ಸರಕಾರ ಮಹಿಳಾ ಮೀಸಲಾತಿಯನ್ನು ವಿರೋಧಿಸುವವರೊಂದಿಗೆ ಸಂವಾದ ಆರಂಭಿಸಬೇಕೆಂದು ಆಗ್ರಹಿಸಿದೆ.

ಖಾಸಗಿ ಇಂಜಿನಿಯರಿಂಗ್, ಮೆಡಿಕಲ್ ಕೋಚಿಂಗ್ ಕೇಂದ್ರಗಳ ನಿಯಂತ್ರಣದ ಬಗ್ಗೆ ಎಸ್‌ಎಫ್‌ಐನ ಪಿಐಎಲ್: ಕಟ್ಟುನಿಟ್ಟಾದ ಮಿತಿಗಳನ್ನು ಹಾಕಲು ಸುಪ್ರಿಂ ಕೋರ್ಟ್ ನಿರ್ದೇಶನ

ಕೇಂದ್ರ ಸರಕಾರ ಖಾಸಗಿ ಇಂಜಿನಿಯರಿಂಗ್ ಮತ್ತು ಮೆಡಿಕಲ್ ಪ್ರವೇಶದ ಕೋಚಿಂಗ್ ಕೇಂದ್ರಗಳ ಮೇಲೆ ಕಟ್ಟುನಿಟ್ಟಾದ ಹತೋಟಿಗಳನ್ನು ಹಾಕಬೇಕು ಎಂದು ದೇಶದ ಸರ್ವೋಚ್ಚ ನ್ಯಾಯಾಲಯ ನಿರ್ದೇಶನ ನೀಡಿದೆ. ಪ್ರವೇಶಕ್ಕೆ ಪ್ರವೇಶ ಪರೀಕ್ಷೆಗಳನ್ನೇ ಏಕೈಕ ಮಾನದಂಡವಾಗಿ ಪರಿಗಣಿಸುವುದು ದೋಷಪೂರ್ಣ ಕ್ರಮ ಎಂದೂ ಅದು ಅಭಿಪ್ರಾಯ ಪಟ್ಟಿದೆ.

2014ರಲ್ಲಿ ಎಸ್‌ಎಫ್‌ಐ ನಾಯಿಕೊಡೆಗಳಂತೆ ಹರಡುತ್ತಿರುವ ‘ಮಾನ್ಯತೆ ಪಡೆಯದ’ ಖಾಸಗಿ ಕೋಚಿಂಗ್ ಸಂಸ್ಥೆಗಳು ಶಿಕ್ಷಣದ ಹಕ್ಕು ಕಾಯ್ದೆಯ ಮಾರ್ಗದರ್ಶಕ ನಿಯಮಗಳ ಉಲ್ಲಂಘನೆ ಎಂದು ಸಾರ್ವಜನಿಕ ಹಿತಾಸಕ್ತಿ ಅಪೀಲು (ಪಿಐಎಲ್) ಸಲ್ಲಿಸಿತ್ತು. ಇದಕ್ಕೆ ಸ್ಪಂದಿಸುತ್ತ ಸುಪ್ರಿಂಕೋರ್ಟ್ ಈ ನಿರ್ದೇಶನ ನೀಡಿದೆ.

ಬಹಳಷ್ಟು ವಿದ್ಯಾರ್ಥಿಗಳು ಇಂತಹ ಕೇಂದ್ರಗಳನ್ನು ಅವಲಂಬಿಸಿರುವುದರಿಂದ ಇವನ್ನು ಸಂಪೂರ್ಣವಾಗಿ ನಿಷೇಧಿಸುವುದು ಕಾರ್ಯಸಾಧ್ಯವಲ್ಲ. ಆದರೆ ಇವು ಶೋಷಣೆಯ ಕೇಂದ್ರಗಳಾಗದಂತೆ ನೋಡಿಕೊಳ್ಳುವುದು ಸರಕಾರದ ಹೊಣೆಗಾರಿಕೆ ಎಂದಿರುವ ಸರ್ವೋಚ್ಚ ನ್ಯಾಯಾಲಯ ಇದರ ಮೇಲೆ ಹತೋಟಿಯಿಡುವ ಒಂದು ರಚನೆಯನ್ನು ರೂಪಿಸಬೇಕು ಎಂದು ಆದೇಶಿಸಿದೆ. ಶಿಕ್ಷಣದ ಪಕ್ಕಾ ವ್ಯಾಪಾರೀಕರಣ ಸಲ್ಲದು, ಹನ್ನೆರಡನೇ ತರಗತಿಯ ಗ್ರೇಡ್‌ಗಳನ್ನೂ ಪ್ರವೇಶ ಮುಂತಾದವುಗಳಿಗೆ ಪರಿಗಣಿಸಬೇಕು ಎಂದು ಅದು ಅಭಿಪ್ರಾಯ ಪಟ್ಟಿದೆ.

ಈ ಕೋಚಿಂಗ್ ಸಂಸ್ಥೆಗಳು ವರ್ಷಕ್ಕೆ 40ಸಾವಿರ ಕೋಟಿ ರೂ.ಗಳಷ್ಟು ಗಳಿಕೆ ಮಾಡುತ್ತಿವೆ. ಇದ–ರಿಂದಾಗಿ ಹಲವಾರು ಪಾಲಕರು ಸಾಲಶೂಲದಲ್ಲಿ ಸಿಲುಕಿಕೊಂಡಿದ್ದಾರೆ. ಇಂತಹ ಕೋಚಿಂಗ್ ಪಡೆಯಲಾರದವರು ಮಾನಸಿಕ ವೇದನೆ ಅನುಭವಿಸುವಂತಾಗಿದೆ. ಆದ್ದರಿಂದ ಕೇಂದ್ರ ಸರಕಾರ ಇಂತಹ ಸಂಸ್ಥೆಗಳ ಮೇಲೆ ಹತೋಟಿಗಳನ್ನು ತರುವಂತೆ ಸರಕಾರಕ್ಕೆ ನಿರ್ದೇಶನ ನೀಡಬೇಕು ಎಂದು ಎಸ್‌ಎಫ್‌ಐ ಕೋರಿತ್ತು. ದೀಪಕ್ ಪ್ರಕಾಶ್ ಎಸ್‌ಎಫ್‌ಐ ಪರವಾಗಿ ವಾದಿಸಿದ್ದರು.

ಗೊತ್ತುಗುರಿಯಿಲ್ಲದ ರಾಜ್ಯಪಾಲರ ಭಾಷಣ

ಸಂಪಾದಕೀಯ

ಇದೇ ಸೋಮವಾರ (ಫೆಬ್ರುವರಿ 6) ರಾಜ್ಯದ ಉಭಯ ಸದನಗಳ ಜಂಟಿ ಅಧಿವೇಶನ ಆರಂಭವಾಗಿದೆ. ಕೇವಲ ಐದು ದಿನಗಳ ಅಧಿವೇಶನ ಕರೆಯಲಾಗಿತ್ತು. ರಾಜ್ಯಪಾಲರು ಜಂಟಿ ಅಧಿವೇಶನವನ್ನು ಉದ್ದೇಶಿಸಿ ಸರಕಾರದ ವರ್ಷದ ಕೆಲಸಗಳ ಮುನ್ನೋಟ ದಿಕ್ಕುದೆಸೆಗಳನ್ನು ಘೋಷಿಸುವುದು ವಾಡಿಕೆ. ಆದರೆ ರಾಜ್ಯ ಸರಕಾರದ ಪರವಾಗಿ ಮಾಡಲಾದ ರಾಜ್ಯಪಾಲರ ಭಾಷಣದಲ್ಲಿ ಈ ರೀತಿಯ ಯಾವುದೇ ಅಂಶಗಳು ಕಂಡು ಬರಲಿಲ್ಲ. ಬರಿಯ ಕಳೆದ ವರ್ಷದ ಕೆಲಸಗಳ ಪ್ರಗತಿಯ ವರದಿ ಬಿಟ್ಟರೆ ಯಾವುದೇ ಹೊಸ ಯೋಚನೆ–ಯೋಜನೆಗಳನ್ನು ಮುಂದಿಡಲಿಲ್ಲ. ಮುಂದಿನ ಆರ್ಥಿಕ ವರ್ಷದಲ್ಲಿ ಘೋಷಿಸಲಾದ ಮೂರೂ ಅಂಶಗಳು – ಆಸ್ಪತ್ರೆ ರೋಗಿಗಳಿಗೆ ರಿಯಾಯಿತಿ ದರದಲ್ಲಿ ಕ್ಯಾಂಟೀನ್, ವಸತಿರಹಿತರಿಗೆ 6 ಲಕ್ಷ ಮನೆ ನಿರ್ಮಾಣ, 3 ಸಾವಿರ ಗ್ರಾಮಗಳು ಬಯಲು–ಬಹಿರ್ದೆಸೆ–ಮುಕ್ತ – ಈಗಿರುವ ಯೋಜನೆಗಳ ವಿಸ್ತಾರವಷ್ಟೇ ಆಗಿದ್ದವು

ಮುಂಗಾರು ಮತ್ತು ಹಿಂಗಾರು ವಿಫಲತೆಯಿಂದಾಗಿ ರಾಜ್ಯದ 160ಕ್ಕೂ ಹೆಚ್ಚು ತಾಲೂಕುಗಳನ್ನು ಬಾಧಿಸುತ್ತಿರುವ ಸರಣಿ ಬರ ಪರಿಸ್ಥಿತಿ–ಪರಿಹಾರಗಳ ಬಗ್ಗೆ ಗಂಭೀರ ಪ್ರಸ್ತಾವಗಳಿಲ್ಲದೆ ಇದ್ದಿದ್ದು ಅತಿ ದೊಡ್ಡ ಕೊರತೆ. ಕಳೆದ ಎಪ್ರಿಲ್ ನಿಂದ ಈ ವರೆಗೆ ರೂ. 1195 ಕೋಟಿ ರೂ. ಬಿಡುಗಡೆ ಮಾಡಿ "ಬರ ನಿರ್ವಹಣೆಗೆ ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗಿದೆ" ಎಂದು ಹೇಳಿದ್ದಕ್ಕಿಂತ ಸತ್ಯಕ್ಕೆ ದೂರವಾದ್ದು ಬೇರೊಂದು ಇರಲಿಕ್ಕಿಲ್ಲ. ಬರದ ಹಿನ್ನೆಲೆಯಲ್ಲಿ ಕೃಷಿ ಸಾಲದ ಅಸಲು ಮರುಪಾವತಿ ಮಾಡಿದರೆ ಬಾಕಿ ಇರುವ ಬಡ್ಡಿಯನ್ನು ಮನ್ನಾ ಮಾಡಲಾಗುವುದು ಎಂಬ ಹಾಸ್ಯಾಸ್ಪದ ಪ್ರಸ್ತಾವ ಮಾಡಲಾಗಿದೆ. ಬರ ನಿರ್ವಹಣೆಯ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಈ ನೀರಸ ಪ್ರತಿಕ್ರಿಯೆ ಬಗ್ಗೆ ಅಧಿವೇಶನದಲ್ಲಿ ಚರ್ಚೆಯಾಗಬಹುದು ಎಂಬ ನಿರೀಕ್ಷೆಯೂ ಹುಸಿಯಾಗಿದೆ. ಅಧಿವೇಶನದಲ್ಲಿ ಕೋರಂ ಕೊರತೆಯಾಗುವಷ್ಟು ಆಡಳಿತ ಮತ್ತು ವಿರೋಧ ಪಕ್ಷಗಳ ಶಾಸಕರ ಗೈರುಹಾಜರಿಯಿತ್ತು. ಬರ ಪೀಡಿತ ತಾಲೂಕುಗಳ ಪ್ರತಿನಿಧಿಗಳು ತಮ್ಮ ಕ್ಷೇತ್ರದ ಬರ ಪರಿಹಾರ ನಿರ್ವಹಣೆಯನ್ನೂ ಗಂಭೀರವಾಗಿ ತೆಗೆದುಕೊಂಡಿಲ್ಲ ಎಂಬುದಕ್ಕೆ ಇದಕ್ಕಿಂತ ಹೆಚ್ಚಿನ ನೇರ ಪುರಾವೆ ಬೇಕೆ? ಚರ್ಚೆಯಾದಾಗಲೂ ಯಥಾ ಪ್ರಕಾರ ಕೇಂದ್ರದ ಬಿಜೆಪಿ ಮತ್ತು ರಾಜ್ಯ ಕಾಂಗ್ರೆಸ್ ಸರಕಾರಗಳನ್ನು ಪರಸ್ಪರ ದೂಷಿಸುತ್ತಾ ಎರಡೂ ಪಕ್ಷದವರು ತಮ್ಮ ಹೊಣೆಯಿಂದ ತಪ್ಪಿಸಿಕೊಳ್ಳುವ ಪ್ರಯತ್ನ ಮಾಡಿದರು. ರಾಜಕೀಯ ಕೆಸರಾಟ ಬಿಟ್ಟರೆ ಅದಕ್ಕಿಂತ ಹೆಚ್ಚಿನ ಆಸಕ್ತಿ ತಮಗಿಲ್ಲ ಎಂದು ಢಾಳಾಗಿ ಪ್ರದರ್ಶಿಸಿದರು.

ಭ್ರಷ್ಟಾಚಾರ ನಿಗ್ರಹ ದಳದ ಸಾಧನೆಗಳ ಬಗ್ಗೆ ಹೇಳುವಾಗ ಲೋಕಾಯುಕ್ತದ ಅಧಿಕಾರಗಳನ್ನು ಕಿತ್ತುಕೊಂಡದ್ದರ ಮತ್ತು ಅದು ಹೆಚ್ಚು ಕಡಿಮೆ ನಿಷ್ಕ್ರಿಯವಾದದ್ದರ ಬಗ್ಗೆ ಭಾಷಣದಲ್ಲಿ ಸುದ್ದಿಯಿಲ್ಲ. ಈ ಕ್ರಮಗಳು ಭ್ರಷ್ಟಾಚಾರ ವಿರೋಧಿ ವ್ಯವಸ್ಥೆಯ ಮೇಲೆ ಯಾವ ಪರಿಣಾಮ ಬೀರಿತು? ಅದು ದುರ್ಬಲವಾಗಲಿಲ್ಲವೇ ಎಂಬುದರ ಬಗ್ಗೆ ಚಕಾರವೆತ್ತಿಲ್ಲ. ಇದೇ ರೀತಿ ಕಾನೂನು–ವ್ಯವಸ್ಥೆಯನ್ನು ಯಶಸ್ವಿಯಾಗಿ ನಿಭಾಯಿಸಿದೆ ಎಂಬ ಹೇಳಿಕೆ ಸಹ ಅತಿಶಯೋಕ್ತಿ. ಈ ಬಗ್ಗೆ ಪ್ರಸ್ತಾಪ ಮಾಡುವಾಗ ಮಹದಾಯಿ–ಕಾವೇರಿ ಹೋರಾಟದ ಸಂದರ್ಭದಲ್ಲಿ ನಡೆದ ಕಾನೂನು ಭಂಗಗಳ ಬಗ್ಗೆ ಹೇಳಲಾಗಿದೆ. ಆದರೆ ರಾಜ್ಯದ ಎಲ್ಲೆಡೆ (ಅದರಲ್ಲೂ ಕರಾವಳಿ ಪ್ರದೇಶದಲ್ಲಿ ವಿಶೇಷವಾಗಿ) ಸತತವಾಗಿ ಕೋಮು ದಾಳಿಗಳು, ಗಲಭೆ–ದಂಗೆಗಳನ್ನು ಹುಟ್ಟು ಹಾಕುವ ಮೂಲಕ ಕೋಮುವಾದಿ ಸಂಘಟನೆಗಳು ಕಾನೂನು–ವ್ಯವಸ್ಥೆಗೆ ಹಾಕುತ್ತಿರುವ ಸವಾಲುಗಳ ಬಗೆಗೂ ಚಕಾರವೆತ್ತಿಲ್ಲ. ಚಕಾರವೆತ್ತದಿದ್ದ ಮೇಲೆ ಈ ಬಗೆಗ ಇಂತಹ ಕಾನೂನು ಭಂಗ ಮುಂದೆ ನಡೆಯದಂತೆ ಕೈಗೊಳ್ಳುವ ಕ್ರಮಗಳ ಬಗೆಗೂ ಹೇಳಬೇಕಾಗಿಲ್ಲವಲ್ಲ. ಇಂತಹುದೇ ಜಾಣ ಮೌನಗಳು, ಕಾಟಾಚಾರದ ಹೇಳಿಕೆಗಳು ಇತರ ವಿಷಯಗಳಾದ ನೀರಾವರಿ ಯೋಜನೆಗಳು, ಕಾವೇರಿ–ಮಹದಾಯಿ ವಿವಾದ ನಿರ್ವಹಣೆ, ಹೈದರಾಬಾದ್ ಕರ್ನಾಟಕದ ಪ್ರದೇಶಗಳ ಅಭಿವೃದ್ಧಿ, ಕೃಷಿ–ಗ್ರಾಮೀಣಾಭಿವೃದ್ಧಿಗಳ ಬಗೆಗೂ ರಾಜ್ಯಪಾಲರ ಭಾಷಣದಲ್ಲಿ ಇವೆ. ಒಟ್ಟಾರೆಯಾಗಿ ಹೇಳುವುದಾದರೆ ರಾಜ್ಯಪಾಲರ ಭಾಷಣ ಗೊತ್ತುಗುರಿಯಿಲ್ಲದ, ಯಾವುದೇ ಸಮಗ್ರ ಮುನ್ನೋಟ ದಿಕ್ಕುದೆಸೆಗಳನ್ನು ಸೂಚಿಸದ ನೀರಸ ಕಾಟಾಚಾರಗಳ ಹೇಳಿಕೆಗಳ ಗೊಂಚಲಾಗಿದೆ. ರಾಜ್ಯಪಾಲರ ಭಾಷಣ ತಮ್ಮ ಭಾಷಣವನ್ನು ಹಿಂದಿಯಲ್ಲಿ ಓದಿದ್ದೂ ಟೀಕೆ, ವಿವಾದಕ್ಕೆ ಕಾರಣವಾಗಿದೆ.



ಕೃಪೆ : ಪಿ. ಮಹಮ್ಮದ್, ವಿಜಯ ಕರ್ನಾಟಕ

ಉಭಯ ಸದನಗಳ ಅಧಿವೇಶನದ ಅವಧಿ, ಅದರಲ್ಲಿ ಶಾಸಕರ ಹಾಜರಾತಿ ಕಡಿಮೆಯಾಗುತ್ತಿರುವುದೂ ಪ್ರಜಾಪ್ರಭುತ್ವಕ್ಕೆ ಗಂಡಾಂತರಿಯಾದ ಗಂಭೀರ ಬೆಳವಣಿಗೆ. ಈ ವರ್ಷದ ಮೊದಲ ಅಧಿವೇಶನವನ್ನು ಕೇವಲ ಐದು ದಿನಗಳಿಗೆ ಕರೆಯಲಾಗಿತ್ತು. ಈ ಬಗ್ಗೆ ತೀವ್ರ ಟೀಕೆಗಳು ಬಂದ ಮೇಲೆ ಇನ್ನೆರಡು ದಿನಗಳಿಗಷ್ಟೇ ವಿಸ್ತರಿಸಲಾಗಿದೆ. ಫೆ. 14ರಂದು ಈ ಅಧಿವೇಶನ ಮುಗಿಯಲಿದ್ದು ರಾಜ್ಯಪಾಲರ ಭಾಷಣದ ಬಗೆಗೆ ವಂದನಾ ನಿರ್ಣಯದ ಮೇಲಿನ ಚರ್ಚೆಗೆ ಮುಖ್ಯಮಂತ್ರಿ ಉತ್ತರಿಸಲಿದ್ದಾರೆ.

2005ರಲ್ಲಿ ಸರಕಾರವೇ ತಂದ ನಿಯಮಗಳ ಪ್ರಕಾರ ಆರಂಭದ ಅಧಿವೇಶನ 15 ದಿನ, ಬಜೆಟ್ ಅಧಿವೇಶನ 20 ದಿನ, ಮಳೆಗಾಲ 15 ದಿನ ಮತ್ತು ಚಳಿಗಾಲದ ಅಧಿವೇಶನ 10 ದಿನ ಸೇರಿ ಒಟ್ಟು ಕನಿಷ್ಠ 60 ದಿನಗಳ ಕಾಲ ಸದನದ ಕಲಾಪ ನಡೆಯಬೇಕು. ಆದರೆ ಕಳೆದ ವರ್ಷ ಕೇವಲ 34ದಿನಗಳ ಸದನದ ಕಲಾಪ ನಡೆದಿದೆ. 1985ರ ನಂತರ ವರ್ಷಕ್ಕೆ 60 ದಿನಗಳ ಕಲಾಪ ನಡೆದೇ ಇಲ್ಲವಂತೆ. ಇದು ಪ್ರಜಾಪ್ರಭುತ್ವದ ಒಂದು ಪ್ರಮುಖ ಅಂಗವಾದ ಶಾಸಕಾಂಗವನ್ನು ದುರ್ಬಲಗೊಳಿಸಲಾಗುತ್ತಿರುವುದರ ಸೂಚನೆಯೇ?

ಫೆಬ್ರುವರಿ 17: ಬರಗಾಲ ಪರಿಹಾರಕ್ಕಾಗಿ ರಾಜ್ಯದಾದ್ಯಂತ ಹೆದ್ದಾರಿ ತಡೆ ಚಳುವಳಿ

ಕರ್ನಾಟಕ ರಾಜ್ಯ ಸತತ ಕಳೆದ ನಾಲ್ಕೈದು ವರ್ಷಗಳಿಂದ ಸತತ ಮಳೆಯ ಕೊರತೆಯಿಂದಾಗಿ ನಿರಂತರ ಬರಗಾಲವನ್ನು ಅನುಭವಿಸುತ್ತಿದೆ. ಈ ವರ್ಷ ಒಂದೆಡೆ ಮಳೆಯ ಕೊರತೆ ಮತ್ತು ಇನ್ನೊಂದೆಡೆ ವ್ಯಾಪಕ ಮಳೆ (ಅತಿವೃಷ್ಠಿ)ಯಿಂದಾಗಿ ಉಂಟಾದ ಬರಗಾಲವನ್ನು ಕಳೆದ 30 ವರ್ಷಗಳಲ್ಲಿ ಕಾಣದ ಬರಗಾಲವೆಂದು ಬಣ್ಣಿಸಿ ಅದರ ತೀವ್ರತೆಯನ್ನು ಹೇಳಲಾಗಿದೆ.

ರಾಜ್ಯವು ಸತತ ಬರಗಾಲವನ್ನನುಭವಿಸಿದರೂ, ಕೇಂದ್ರ ಹಾಗೂ ರಾಜ್ಯ ಸರಕಾರಗಳು ಬರಪರಿಹಾರವನ್ನು ಗಂಭೀರವಾಗಿ ತೆಗೆದುಕೊಂಡಿಲ್ಲ. ಈಗಲೂ ಗಂಭೀರವಾಗಿ ವರ್ತಿಸುತ್ತಿಲ್ಲ. ಬದಲಿಗೆ ಪರಸ್ಪರರು ಆರೋಪ ಪ್ರತ್ಯಾರೋಪಗಳಲ್ಲಿ ಮೇಲೆ ತೊಡಗಿದ್ದಾರೆ. ಗ್ರಾಮೀಣ ಬಡವರು ಮತ್ತು ರೈತರ ಇದ್ದ ಬದ್ದ ಸಣ್ಣ ಪುಟ್ಟ ಆಸ್ತಿಗಳು, ಒಡವೆಗಳನ್ನು, ಭೂಮಾಲಕರ ಹಾಗೂ ಗ್ರಾಮೀಣ ಶ್ರೀಮಂತರ ಪಾಲಾಗಲು ಬಿಡುತ್ತಿದ್ದಾರೆ. ಬ್ಯಾಂಕುಗಳು ಖಾಸಗೀ ಸಂಸ್ಥೆಗಳ ಸಾಲ ವಸೂಲಿಯ ದಬ್ಬಾಳಿಕೆಯನ್ನು ನಡೆಸಲು ಬಿಡಲಾಗಿದೆ. ಪರಿಣಾಮವಾಗಿ ದಲಿತರು, ಮಹಿಳೆಯರ ಮೇಲೆ ದೌರ್ಜನ್ಯಗಳು ಹೆಚ್ಚುತ್ತಿವೆ.

ಆದ್ದರಿಂದ, ಕೇಂದ್ರ ಹಾಗೂ ರಾಜ್ಯ ಸರಕಾರಗಳ ಉದಾಸೀನತೆ ಮತ್ತು ನಿರ್ಲಕ್ಷ್ಯವನ್ನು ಖಂಡಿಸಿ, ಬರಪರಿಹಾರದ ಹಕ್ಕೊತ್ತಾಯಗಳಿಗಾಗಿ, ರೈತರ–ಕೂಲಿಕಾರರ–ಸ್ತ್ರೀ ಶಕ್ತಿ ಸಂಘಗಳ ಎಲ್ಲಾ ರೀತಿಯ ಸಾಲ ಮನ್ನಾಕ್ಕಾಗಿ, ರಾಜ್ಯದಾದ್ಯಂತ ಎಲ್ಲೆಡೆ ಹೆದ್ದಾರಿ ತಡೆ ಚಳುವಳಿಯನ್ನು ಸಂಘಟಿಸಲು ಕರ್ನಾಟಕ ಪ್ರಾಂತ್ಯ ರೈತ ಸಂಘ, ಇತರ ಸಾಮೂಹಿಕ ಸಂಘಟನೆಗಳ ಜತೆ ಸೇರಿ ಕರೆ ಕೊಟ್ಟಿದೆ. ಆ ಮೂಲಕ ಮೂಲಕ ಕೇಂದ್ರ ಹಾಗೂ ರಾಜ್ಯ ಸರಕಾರಗಳ ವಿರುದ್ಧ ತೀವ್ರ ರೀತಿಯಲ್ಲಿ ಪ್ರತಿಭಟನೆ ನಡೆಸಲು ಕರೆ ನೀಡಿವೆ. ಎಲ್ಲಾ ರೈತರು, ಕೂಲಿಕಾರರು ಮತ್ತು ಕಸುಬುದಾರರು, ಕಾರ್ಮಿಕರು, ನಾಗರೀಕರು ಈ ಪ್ರತಿಭಟನೆಯಲ್ಲಿ ಪಾಲ್ಗೊಂಡು ಯಶಸ್ವಿಗೊಳಿಸಲು ವಿನಂತಿಸಿವೆ.

ಬರ ಪರಿಹಾರದ ಹಕ್ಕೊತ್ತಾಯಗಳು :

1. ರೈತರ/ ಕೂಲಿಕಾರರ ಮತ್ತು ಕಸುಬುದಾರರ ಎಲ್ಲಾ ರೀತಿಯ ಸಹಕಾರ ಸಂಘ/ಬ್ಯಾಂಕುಗಳ ಮತ್ತು ಖಾಸಗಿಯಾದ ಎಲ್ಲಾ ಸಾಲವನ್ನು ತಕ್ಷಣವೇ ಮನ್ನಾ ಮಾಡಬೇಕು. ಎಲ್ಲಾ, ಸ್ತ್ರೀಶಕ್ತಿ ಹಾಗೂ ಸ್ವ ಸಹಾಯ ಸಂಘಗಳ ಸಾಲವನ್ನು ಮನ್ನಾ ಮಾಡಬೇಕು. ಪರಿಶಿಷ್ಠ ಜಾತಿ ಹಾಗೂ ಪರಿಶಿಷ್ಠ ಪಂಗಡ, ಹಿಂದುಳಿದ ಮತ್ತು ಅಲ್ಪಸಂಖ್ಯಾತ ಇಲಾಖೆಗಳ ಮೂಲಕ ಹಾಗೂ ದೇವದಾಸಿ ಪುನರ್‌ವಸತಿ ಹಾಗೂ ಮಹಿಳಾ ಅಭಿವೃದ್ಧಿ ನಿಗಮದ ಮೂಲಕ ನೀಡಲಾದ ಎಲ್ಲಾ ಸಾಲಗಳನ್ನು ಮನ್ನಾ ಮಾಡಬೇಕು. ಸಾರ್ವಜನಿಕ ಹಾಗೂ ಖಾಸಗೀ ಸಾಲ ನೀಡುವ ಸಂಸ್ಥೆಗಳು ಜನತೆಯ ಮೇಲೆ ಸಾಲ ವಸೂಲಿಗೆ ಒತ್ತಾಯಿಸುವುದನ್ನು ನಿಷೇಧಿಸಬೇಕು. ಅದೇ ರೀತಿ, ಮುಂದಿನ ಸಾಲಿಗೆ ಈ ಎಲ್ಲರಿಗೂ ಅಗತ್ಯವಾದಷ್ಟು ಸಾಲವನ್ನು ಒದಗಿಸಲು ಕ್ರಮವಹಿಸಬೇಕು.
2. ತಕ್ಷಣವೇ ಅಗತ್ಯ ಬೆಳೆ ವಿಮೆಯನ್ನು ನೀಡಲು ಕ್ರಮವಹಿಸಬೇಕು ಮತ್ತು ಬೆಳೆ ಪರಿಹಾರವಾಗಿ ಪ್ರತಿ ಎಕರೆಗೆ ಕನಿಷ್ಠ 50 ಸಾವಿರ ರೂಗಳ ಪರಿಹಾರವನ್ನು ಗೇಣಿದಾರರು ಸೇರಿದಂತೆ ಎಲ್ಲಾ ರೈತರಿಗೂ ವಿತರಿಸಬೇಕು. ಕೃಷಿಕೂಲಿಕಾರರಿಗೆ ಹಾಗೂ ಕಸುಬುದಾರರಿಗೆ ಉದ್ಯೋಗ ಪರಿಹಾರವಾಗಿ ತಲಾ ಕುಟುಂಬಕ್ಕೆ ಕನಿಷ್ಠ 25,000 ರೂಗಳನ್ನು ನೀಡಬೇಕು.
3. ಉದ್ಯೋಗ ಖಾತ್ರಿ ಕೆಲಸವನ್ನು 200 ದಿನಗಳಿಗೆ ವಿಸ್ತರಿಸಬೇಕು. ಪಟ್ಟಣ/ ನಗರ ಪ್ರದೇಶಗಳಿಗೂ ವಿಸ್ತರಿಸಬೇಕು. ಕೂಲಿಯನ್ನು 600 ರೂ. ಗಳಿಗೆ ಹೆಚ್ಚಿಸಬೇಕು.
4. ಎಲ್ಲಾ ಬಡವರಿಗೆ ಉಚಿತವಾಗಿ ಅಗತ್ಯವಾದ ಎಲ್ಲಾ ಪಡಿತರವಿರುವ ರೇಷನ್ ಸರಬರಾಜು ಮಾಡಬೇಕು. ನಗದು ವರ್ಗಾವಣೆ ಅಥವಾ ಕೂಪನ್ ಪದ್ಧತಿಯನ್ನು ಕೈಬಿಡಬೇಕು. ಆಧಾರ್ ಕಾರ್ಡ ಕಡ್ಡಾಯವಾಗಿ ಪಡೆಯುವ ಪದ್ಧತಿಯನ್ನು ಕೈಬಿಡಬೇಕು. ವಿದ್ಯಾರ್ಥಿ/ ಮಕ್ಕಳಿಗೆ ಶಾಲೆ/ಅಂಗನವಾಡಿಗಳಲ್ಲಿ ರಾತ್ರಿ ಊಟಕ್ಕೆ ಕ್ರಮವಹಿಸಬೇಕು.
5. ಪ್ರತಿ ಗ್ರಾಮ ಪಂಚಾಯ್ತಿಯಲ್ಲಿ ಮೇವಿನ ಬ್ಯಾಂಕ್ ತೆರೆಯಬೇಕು.
6. ಗ್ರಾಮ, ಪಟ್ಟಣ ಹಾಗೂ ನಗರಗಳ ಕುಡಿಯುವ ನೀರಿನ ಸಮಸ್ಯೆಯನ್ನು ಪರಿಹರಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು.
7. ಮುಂದಿನ ಬೆಳೆಗೆ ಅಗತ್ಯವಾದ ಬೀಜ, ಗೊಬ್ಬರ, ಕ್ರಿಮಿನಾಶಕಗಳನ್ನು ಉಚಿತವಾಗಿ ಒದಗಿಸಬೇಕು.
8. ಮಹದಾಯಿ ನದಿ ನೀರಿನ ವಿವಾಧವನ್ನು ತ್ವರಿತವಾಗಿ ಪರಿಹರಿಸಲು ಅಗತ್ಯ ಕ್ರಮಕೈಗೊಳ್ಳಬೇಕು. ಬಯಲು ಸೀಮೆ ಜಿಲ್ಲೆಗಳ ಬರವನ್ನು ಪರಿಹರಿಸಲು ಡಾ.ಪರಮಶಿವಯ್ಯನವರ ವರದಿಯಂತೆ ತ್ವರಿತ ಕ್ರಮವಹಿಸಬೇಕು. ಅದೇ ರೀತಿ, ಇತರೇ ಬರಪೀಡಿತ ಪ್ರದೇಶದ ನೀರಾವರಿ ಯೋಜನೆಗಳ ಅನುಷ್ಠಾನಕ್ಕೆ ಅಗತ್ಯ ಕ್ರಮವಹಿಸಬೇಕು.
9. ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್ ಒದಗಿಸಬೇಕು. ಸಾರ್ವಜನಿಕ ಹಾಗೂ ಖಾಸಗೀ ಶಿಕ್ಷಣ ಸಂಸ್ಥೆಗಳಲ್ಲಿ ಮುಂದಿನ ವರ್ಷದ ಎಲ್ಲಾ ಶಾಲಾ, ಕಾಲೇಜು ಹಾಗೂ ಉನ್ನತ ಹಂತದ ಶಿಕ್ಷಣ ಶುಲ್ಕವನ್ನು ಮನ್ನಾ ಮಾಡಬೇಕು
10. ಆತ್ಮಹತ್ಯೆ ಮಾಡಿಕೊಂಡ ರೈತ ಕುಟುಂಬಗಳಿಗೆ ತಲಾ 10 ಲಕ್ಷ ರೂ. ಪರಿಹಾರವನ್ನು ನೀಡಬೇಕು. ●

ಕರಾವಳಿ ಕರೆ

ವರದಿ – ವಾ.ಉ.

ಉಡುಪಿಯಲ್ಲಿ ಕೋಮುವಾದ ವಿರೋಧಿ ಸಮಾವೇಶ



ರಾಜ್ಯದಲ್ಲಿ ಕೋಮುವಾದಿ ಶಕ್ತಿಗಳು ತಮ್ಮ ಪ್ರಭಾವವನ್ನು ವಿಸ್ತರಿಸುವುದನ್ನು ತಡೆಗಟ್ಟುವಲ್ಲಿ ರಾಜ್ಯ ಸರಕಾರ ವಿಫಲವಾಗಿದೆ. ಎಡ ಪ್ರಜಾಪ್ರಭುತ್ವ ಶಕ್ತಿಗಳು ಒಂದುಗೂಡಿ ಕೋಮುವಾದಿ ಶಕ್ತಿಗಳನ್ನು ಎದುರಿಸಬೇಕಾಗಿದೆ ಎಂಬುದಾಗಿ ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ ಕಾರ್ಯದರ್ಶಿ ಜಿ.ವಿ.ಶ್ರೀರಾಮರೆಡ್ಡಿ ಹೇಳಿದರು.

ಅವರು ಸಿಪಿಐ(ಎಂ) ಉಡುಪಿ ಜಿಲ್ಲಾ ಸಮಿತಿ ಉಡುಪಿ ನಗರದಲ್ಲಿ ಫೆಬ್ರವರಿ 5, 6 ರಂದು ಏರ್ಪಡಿಸಿದ್ದ ಕೋಮುವಾದ ವಿರೋಧಿ ಸಮಾವೇಶವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ಕರಾವಳಿಯ ಉಡುಪಿ ಮತ್ತು ದ.ಕ. ಜಿಲ್ಲೆಗಳನ್ನು ಸಂಘಪರಿವಾರವು ಹಿಂದೂತ್ವದ ಪ್ರಯೋಗಶಾಲೆಯಾಗಿ ಮಾಡಿಕೊಂಡಿದೆ. ನಾಲ್ಕು ವರ್ಷಗಳಿಂದ ಕಾಂಗ್ರೆಸ್ ಪಕ್ಷದ ನೇತೃತ್ವದಲ್ಲಿ ಸಿದ್ಧರಾಮಯ್ಯ ಸರಕಾರ ಆಡಳಿತ ನಡೆಸುತ್ತಿದ್ದರೂ, ಬಲಪಂಥೀಯ ಶಕ್ತಿಗಳನ್ನು ತಡೆಹಿಡಿಯುವಲ್ಲಿ ಏನೇನೂ ಅವರು ಮಾಡಿಲ್ಲ. ಈ ಪ್ರದೇಶದ ಒಬ್ಬ ಸಂಸದರಂತೂ ಜಿಲ್ಲೆಗೇ ಬೆಂಕಿ ಹಚ್ಚುವ ಬೆದರಿಕೆಯನ್ನೊಡ್ಡುತ್ತಿದ್ದಾರೆ. ಇನ್ನೊಬ್ಬ ಸಂಸದ ಕಾರ್ಯನಿರತ ಸರಕಾರೀ ವೈದ್ಯರ ಮೇಲೆಯೇ ಹಲ್ಲೆ ನಡೆಸುತ್ತಿದ್ದಾರೆ. ಹಿಂದೂತ್ವದ ಪ್ರಚಾರದ ಅಬ್ಬರ ಕೇವಲ ಕರಾವಳಿ ಜಿಲ್ಲೆಗಳಿಗೆ ಮಾತ್ರ ಸೀಮಿತವಾಗಿಲ್ಲ. ಚಿಕ್ಕಮಗಳೂರು ಜಿಲ್ಲೆಯಲ್ಲಿ ಸಂಘಪರಿವಾರವು ದತ್ತಮಾಲಾ ಅಭಿಯಾನ ನಡೆಸುತ್ತಿದೆ. ರಾಯಚೂರು, ಕೊಪ್ಪಳ ಮತ್ತು ಬಳ್ಳಾರಿ ಜಿಲ್ಲೆಗಳ ಬುಡಕಟ್ಟು ಜನರನ್ನು ಸೆಳೆಯಲು ಹನುಮಾನ್ ಮಾಲಾವನ್ನು ಯಾತ್ರೆಗಿಳಿಸಲಾಗಿದೆ. ಸಂಗೊಳ್ಳಿ ರಾಯಣ್ಣ ಬ್ರಿಗೇಡ್ ಹೆಸರಲ್ಲಿ ಬಿಜೆಪಿ ಮುಖಂಡರಾದ ಯಡಿಯೂರಪ್ಪ ಮತ್ತು ಈಶ್ವರಪ್ಪ ನಡುವಿನ ತಕರಾರು ನಿಜವಾಗಿ ನಡೆದಿರುವುದು ಕುರುಬ ಜಾತಿಯ ಮತ ಸೆಳೆಯುವುದಕ್ಕಾಗಿ ಎಂದು ಶ್ರೀರಾಮರೆಡ್ಡಿ ವಿಶ್ಲೇಷಿಸಿದರು.

ಕೇಂದ್ರದಲ್ಲಿ ನರೇಂದ್ರಮೋದಿ ಸರಕಾರ ಬಂದಂದಿನಿಂದ ದಲಿತರು ಮತ್ತು ಅಲ್ಪಸಂಖ್ಯಾತ ಸಮುದಾಯಗಳ ಮೇಲೆ ದೇಶಾದ್ಯಂತ ಹಲ್ಲೆ, ಅತ್ಯಾಚಾರಗಳು ಹೆಚ್ಚುತ್ತಿವೆ. ಕೋಮುವಾದಿ ಶಕ್ತಿಗಳು ರಾಜಕೀಯ ಅನುಕೂಲಕ್ಕಾಗಿ ಇತಿಹಾಸವನ್ನು ಪುರಾಣ ಮಾಡುವ ಮತ್ತು ಪುರಾಣವನ್ನು ಇತಿಹಾಸವಾಗಿ ತಿರುಚುವ ಕೆಲಸ ಮಾಡುತ್ತಿವೆ. ಇಂತಹ ಶಕ್ತಿಗಳ ವಿರುದ್ಧ ರಾಜಿಯಿಲ್ಲದ ಹೋರಾಟ ನಡೆಸಬೇಕು. ಕೇವಲ ಮೆರವಣಿಗೆ ಪ್ರತಿಭಟನೆಗೆ ಮಾತ್ರವಲ್ಲ ಬೀದಿ ಹೋರಾಟಕ್ಕೂ ಸಿದ್ಧರಾಗಬೇಕು ಎಂದವರು ಕರೆ ನೀಡಿದರು.

ಬಹುಸಂಸ್ಕೃತಿ, ನಾಗರಿಕತೆ, ಧರ್ಮ, ಭಾಷೆಗಳನ್ನು ಬೆಳೆಸಿದ್ದ ನಮ್ಮ ದೇಶ ಇಡೀ ಜಗತ್ತಿಗೆ ಮಾದರಿಯಾಗಿತ್ತು. ಬೌದ್ಧ, ಜೈನ ಧರ್ಮಗಳು ಇಲ್ಲಿ ಹುಟ್ಟಿವೆ. ಅನೇಕ ಧರ್ಮಗಳು ಇಲ್ಲಿ ಬೆಳೆದಿವೆ. ಈಗಿನ ಪರಿಸ್ಥಿತಿ ಹೇಗಿದೆ ಎಂದರೆ ಅಪ್ರಾಮಾಣಿಕ ಇತಿಹಾಸದ ಕಾಲಘಟ್ಟದಲ್ಲಿ ನಾವಿದ್ದೇವೆ. ಐದು ಸಾವಿರ ವರ್ಷಗಳಿಂದ ದೇಶವನ್ನು ಕಟ್ಟಿ ಬೆಳೆಸಿ ಉಳಿಸಲಾಗಿತ್ತು. ಆ ಎಲ್ಲವನ್ನೂ ಸರ್ವನಾಶ ಮಾಡುವ ಅಪಾಯಕಾರಿ ಪರಿಸ್ಥಿತಿಯಲ್ಲಿದ್ದೇವೆ. ಎಲ್ಲ ಧರ್ಮದವರೂ ಕಟ್ಟಿ ಬೆಳೆಸಿದ ದೇಶ ಇಂದು ಆರೆಸ್ಸೆಸ್ ಹಾಗೂ ಸಂಘಪರಿವಾರದ ಸಂಘಟನೆಗಳಿಂದಾಗಿ ನಾಶದ ಸ್ಥಿತಿ ತಲುಪಿದೆ. ಬಹುಧರ್ಮ, ಸಂಸ್ಕೃತಿ, ಭಾಷೆ ನಾಶವಾಗಬೇಕು ಎಂಬುದು ಅವರ ಕಾರ್ಯಸೂಚಿಯಾಗಿದೆ ಎಂದು ಅವರು ದೂರಿದರು.

ಕೋಮುವಾದದ ವಿರುದ್ಧ ರಾಜಿ ಇಲ್ಲದೆ ಹೋರಾಟ ಮಾಡುವ ಕಮ್ಯೂನಿಸ್ಟರನ್ನು ಸಂಘಪರಿವಾರದವರು ಗುರಿಯಾಗಿಸಿಕೊಂಡಿದ್ದಾರೆ. ಕಮ್ಯೂನಿಸ್ಟರು ದೇವರು ಮತ್ತು ಧರ್ಮದ ವಿರೋಧಿಗಳು ಎಂದು ಅಪಪ್ರಚಾರ ಮಾಡುತ್ತಾರೆ. ತಮ್ಮ ಸೈದ್ಧಾಂತಿಕ ವಿರೋಧಿಗಳು ಎಂದು ಅವರು ಹೇಳುವುದಿಲ್ಲ. ನಾವು ದೇವರು ಮತ್ತು ಧರ್ಮವನ್ನು ವೈಯುಕ್ತಿಕ ವಿಚಾರ ಎಂದು ಭಾವಿಸುತ್ತೇವೆ ಮತ್ತು ಅದರೊಳಗೆ ರಾಜಕೀಯ ಪ್ರವೇಶ ಮಾಡಬಾರದು ಎಂಬುದು ನಮ್ಮ ನಿಲುವಾಗಿದೆ ಎಂದು ಜಿ.ವಿ.ಶ್ರೀರಾಮರೆಡ್ಡಿ ವಿವರಿಸಿದರು.

ಸುರೇಶ್ ಮಿನ್ನಿ ಅವರು ಬರೆದಿರುವ 'ನರಕದ ಗರ್ಭಗುಡಿಯೊಳಗೆ' ಪುಸ್ತಕವನ್ನು ಖ್ಯಾತ ಚಿಂತಕ ಜಿ.ರಾಜಶೇಖರ್ ಬಿಡುಗಡೆ ಮಾಡಿದರು. ಅವರು ಮಾತನಾಡುತ್ತಾ, ಉಡುಪಿ ತಾಲೂಕಿನ ಕೆಂಜೂರಿನಲ್ಲಿ ಗೋಸಾಗಾಟ ಮಾಡಿದ್ದಕ್ಕಾಗಿ ಬಿಜೆಪಿ ಕಾರ್ಯಕರ್ತ ಪ್ರವೀಣ್ ಪೂಜಾರಿಯನ್ನು ಕೊಲೆ ಮಾಡಿರುವ ಘಟನೆಯು ಕರಾವಳಿಯಲ್ಲಿನ ಹಿಂದೂತ್ವದ ಭಯಾನಕತೆಯ ಗಂಭೀರತೆಯನ್ನು ಕಾಣಿಸಿಕೊಡುತ್ತದೆ. ಪುಟ್ಟದಾದ ದನದ ಕೊಟ್ಟಿಗೆ ಕಟ್ಟಿಸಿಕೊಂಡಿರುವ ಕರಾವಳಿಯ ದನ ಸಾಕಾಣಿ–ಕೆದಾರರು, ಹೊಸ ದನ ಕೊಂಡಾಗ ಇರುವ ಮುದಿ ದನವನ್ನು ಮಾರಲೇ ಬೇಕಾಗಿದೆ. ಸಂಘಪರಿವಾರ ಜನರ ಸಂಕಷ್ಟಗಳನ್ನು ಒಂದಿಷ್ಟೂ ಅರ್ಥಮಾಡುತ್ತಿಲ್ಲ. ಅಲ್ಲದೆ ಹಿಂದೂ ಸಮಾಜದೊಳಗಿರುವ ಅಸಮಾನತೆಯನ್ನು ನಿವಾರಿಸುವುದೂ ಅವರಿಗೆ ಬೇಕಾಗಿಲ್ಲ. ಅವರಿಗೆ ಹಿಂದೂಗಳ ಒಗ್ಗಟ್ಟು ಬೇಕಾಗಿರುವುದು ಅಲ್ಪಸಂಖ್ಯಾತರ ಮೇಲೆ ಹಲ್ಲೆ ಮಾಡುವುದಕ್ಕಾಗಿ ಮಾತ್ರ ಎಂದವರು ಹೇಳಿದರು. ಕರಾವಳಿಯಲ್ಲಿ ಕೋಮುವಾದಿ ಶಕ್ತಿಗಳ ಜೊತೆಗೆ ಪೋಲೀಸರು, ಮಾಧ್ಯಮಗಳು ಶಾಮೀಲಾಗಿವೆ. ಆದ್ದರಿಂದ ಯಾವುದೇ ಸರಕಾರ ಬಂದರೂ ಆಡಳಿತ ನಡೆಸುವುದು ಮಾತ್ರ ಕೋಮುವಾದಿಗಳೇ ಎಂದು ಕಳವಳ ವ್ಯಕ್ತಪಡಿಸಿದರು.

ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಕೆ.ಶಂಕರ್, ಉಡುಪಿ ಜಿಲ್ಲಾ ಸಮಿತಿ ಕಾರ್ಯದರ್ಶಿ ಬಾಲಕೃಷ್ಣ ಶೆಟ್ಟಿ, ಸಿಐಟಿಯು ಉಡುಪಿ ಜಿಲ್ಲಾಧ್ಯಕ್ಷ ಪಿ.ವಿಶ್ವನಾಥ ರೈ ಸಮಾವೇಶದಲ್ಲಿ ಪಾಲ್ಗೊಂಡಿದ್ದರು. ●

ಸಿಪಿಐ(ಎಂ) ಪಾಲಿಕೆ ಸದಸ್ಯ ದಯಾನಂದ ಶೆಟ್ಟಿ ಮೇಲೆ ರಸ್ತೆ ತಡೆ ನಡೆಸಿದುದಕ್ಕಾಗಿ ಪ್ರಕರಣ ದಾಖಲು:

ಹಲ್ಲೆಗೊಳಗಾಗಿ ಗಾಯಗೊಂಡಿದ್ದ ಬೆಂಗರೆ ಮಹಮ್ಮದ್ ಎಂಬುವವರ ಕುಟುಂಬದ ಸದಸ್ಯರನ್ನು ಪಣಂಬೂರು ಪೋಲೀಸರು ನಡುರಸ್ತೆಯಲ್ಲಿ ಇಳಿಸಿ ಹೋದ ವಿದ್ಯಾಮಾನವನ್ನು ವಿರೋಧಿಸಿ, ಡಿವೈಎಫ್ಐ ಮುಖಂಡರು ಜಿಲ್ಲಾ ಅಧ್ಯಕ್ಷ ಹಾಗೂ ಹಾಲಿ ಮಂಗಳೂರು ನಗರ ಪಾಲಿಕೆ ಸದಸ್ಯ ದಯಾನಂದ ಶೆಟ್ಟಿ ನೇತೃತ್ವದಲ್ಲಿ ಫೆಬ್ರವರಿ 7 ರಂದು ರಾಷ್ಟ್ರೀಯ ಹೆದ್ದಾರಿ ತಡೆ ನಡೆಸಿ ಪ್ರತಿಭಟನೆ ನಡೆಸಿದರು.

ಕಾವೂರು ಪೋಲೀಸರು ತಮ್ಮ ಪ್ರಮಾದವನ್ನು ಸರಿಪಡಿಸುವುದರ ಬದಲು ಪ್ರತಿಭಟನಾಕಾರರ ಮೇಲೆ ಕಾವೂರು ಠಾಣೆ ಸಬ್‌ಇನ್ಸ್‌ಪೆಕ್ಟರ್ ನೀಡಿದ ದೂರನ್ನು ದಾಖಲಿಸಿ, ಮುಖಂಡರಾದ ದಯಾನಂದ ಶೆಟ್ಟಿ, ಜಿಲ್ಲಾ ಉಪಾಧ್ಯಕ್ಷ ಬಿ.ಕೆ.ಇಮ್ತಿಯಾಜ್, ನೌಷದ್ ಬೆಂಗರೆ ಸೇರಿ 15 ಜನರ ವಿರುದ್ಧ ಪ್ರಕರಣ ದಾಖಲು ಮಾಡಿರುತ್ತಾರೆ. ●

ಫೇಸ್ ಬುಕ್‌ನಿಂದ

ನಾಗಪುರದಿಂದ > ಹಲೋ, ನಮಸ್ತೆ ಜೀ, ನಾನು ನಾಗಪುರದ ಗರ್ಭಗುಡಿಯಿಂದ ಮಾತಾಡ್ತಾಯಿದ್ದೀನಿ.

ಪಿಎಂಒದಿಂದ > ನಮಸ್ತೇಜಿ.

ನಾಗಪುರದಿಂದ > ನಮ್ಮ ಗರ್ಭಗುಡಿಯಿಂದ ಎರಡು ಭಾಷಣ ಬರೆದುಕೊಟ್ಟಿದ್ದೆವು. ಒಂದು ಉತ್ತರ ಪ್ರದೇಶದ ಚುನಾವಣೆಯ ಬಹಿರಂಗ ಸಭೆಯಲ್ಲಿ ಭಾಷಣ ಮಾಡಲು, ಮತ್ತೊಂದು ಭಾಷಣ ಲೋಕಸಭೆಯಲ್ಲಿ ವಿರೋಧ ಪಕ್ಷಗಳ ಪ್ರಶ್ನೆಗಳಿಗೆ ಉತ್ತರ ಕೊಡಲು. ನೆನ್ನೆ ಮೋದೀಜಿ ಪಾರ್ಲಿಮೆಂಟನಲ್ಲಿ ಭಾಷಣ ಮಾಡಿದ್ದು ಚುನಾವಣೆಗಾಗಿ ಬರೆದುಕೊಟ್ಟಿದ್ದ ಭಾಷಣ.

ಪಿಎಂಒದಿಂದ > ನಾವು ಎರಡೂ ಭಾಷಣದ ಪ್ರತಿಗಳನ್ನು ಮೋದೀಜಿಗೆ ಕೊಟ್ಟಿದ್ದೆವು ಸಾರ್. ಅವರು ಎರಡೂ ಭಾಷಣಗಳನ್ನು ಬಾಯಿಪಾಠ ಮಾಡಿಕೊಂಡಿದ್ದರು. ಪಾರ್ಲಿಮೆಂಟ್ ಭಾಷಣವನ್ನು ಬಹಳಷ್ಟು ಟಿವಿ ಮಾಧ್ಯಮಗಳು ನೇರ ಪ್ರಸಾರ ಮಾಡಲು ಸಿದ್ಧತೆ ಮಾಡಿಕೊಂಡ ಮಾಹಿತಿ ತಿಳಿದ ಮೋದೀಜಿಯವರು ಚುನಾವಣಾ ಭಾಷಣವನ್ನೇ ಆಯ್ದುಕೊಂಡರು. ಚುನಾವಣೆ ನಡೆಯುತ್ತಿರುವ ಐದೂ ರಾಜ್ಯಗಳ ಚುನಾವಣಾ ಪ್ರಚಾರ ಏಕ ಕಾಲದಲ್ಲಿ ಮಾಡಿ ಯಶಸ್ವಿಯಾದರು ಸಾರ್.

ನಾಗಪುರದಿಂದ > ಹಾಗಿದ್ರೆ ಪಾರ್ಲಿಮೆಂಟಿಗಾಗಿ ಬರೆದುಕೊಟ್ಟಿದ್ದ ಭಾಷಣದ ಪ್ರತಿಯನ್ನು ಹಿಂತಿರುಗಿಸಿ.

ಪಿಎಂಒದಿಂದ > ಆ ಭಾಷಣವನ್ನು ಚುನಾವಣಾ ಪ್ರಚಾರದಲ್ಲಿ ಮಾಡುತ್ತಾರೆ ಸಾರ್. ಮೋದೀಜಿ ಯಾವಾಗಲೂ ಮಾಡೋದೆ ಹೀಗೆ ಅಲ್ಲವೆ?

ನಾಗಪುರದಿಂದ > ನಾವು ಬರೆದುಕೊಟ್ಟ ಎರಡೂ ಭಾಷಣದಲ್ಲಿ ಮೋದಿಜಿ ಹೇಳಿದ 'ಭೂಕಂಪದ ಕತೆ' ಇರಲಿಲ್ಲವಲ್ಲಾ?

ಪಿಎಂಒದಿಂದ > ಮೋದೀಜಿಯವರ ಮನಸ್ಥಿತಿಯೇ ಹಾಗೆ ಸಾರ್. ಮತ್ತೊಬ್ಬರು ನರಳುವ ವಿಷಯವನ್ನು ಹಾಸ್ಯವಾಗಿ ಮಾತನಾಡುತ್ತಾ ವಿಕೃತ ಸಂತೋಷಪಡುತ್ತಿರುತ್ತಾರೆ. ಏಟಿಎಂ ಮುಂದೆ ನಿಂತು ಹಣಕ್ಕಾಗಿ ಪರದಾಡುತ್ತಿದ್ದ ಜನರ ಬಗ್ಗೆಯೂ ವಿದೇಶದ ನೆಲೆಯಲ್ಲಿ ನಿಂತು ಇದೇ ರೀತಿ ಅಪಹಾಸ್ಯ ಮಾಡಿ ಖುಷಿಪಟ್ಟಿದ್ದರು.


– ಸಿದ್ದಯ್ಯ ಚಿಕ್ಕಮಾದೇಗೌಡ

ದಂತ ಆರೋಗ್ಯಕ್ಕೆ ಐದು ಸುವರ್ಣ ಸೂತ್ರಗಳು

– ಡಾ॥ ದೀಕ್ಷಾ ಹೆಜಮಾಡಿ ಕೋಡಿ

ದಲಿತ ಹಕ್ಕುಗಳ ಸಮಿತಿ, ಜನವಾದಿ ಮಹಿಳಾ ಸಂಘಟನೆ, ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಫೆಡರೇಶನ್, ಪೇಜಾವರ ಘಟಕದ ಜಂಟಿ ನೇತೃತ್ವದಲ್ಲಿ ದಿನಾಂಕ 05–02–2017 ರಂದು ಪೊರ್ಕೋಡಿ, ಕೆಂಜಾರಿನ ಜಿಲ್ಲಾ ಪಂಚಾಯತ್ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಎ. ಬಿ. ಶೆಟ್ಟಿ ಸ್ಮಾರಕ ದಂತ ಮಹಾ ವಿದ್ಯಾಲಯ, ನಿಟ್ಟೆ ವಿಶ್ವವಿದ್ಯಾಲಯ ಮಂಗಳೂರು ಇಲ್ಲಿಯ ದಂತ ವೈದ್ಯರಿಂದ ಉಚಿತ ದಂತ ಚಿಕಿತ್ಸಾ ಶಿಬಿರವು ಯಶಸ್ವಿಯಾಗಿ ಜರುಗಿತು.

ದಂತ ವೈದ್ಯ ಡಾ॥ ದೀಕ್ಷಾ ಹೆಜಮಾಡಿ ಕೋಡಿರವರು ಶಿಬಿರವನ್ನು ಉದ್ದೇಶಿಸಿ ಮಾತನಾಡುತ್ತಾ, ದಂತ ಆರೋಗ್ಯಕ್ಕೆ 'ಪೌಷ್ಟಿಕ ಆಹಾರಗಳ ಸೇವನೆ, ಸಿಹಿ ಅಂಟು ಪದಾರ್ಥಗಳ ನಿಷೇಧ, ದಿನಕ್ಕೆ ಎರಡು ಬಾರಿ ಬ್ರಶ್ ಮಾಡಬೇಕು ಹಾಗೂ ಮೂರು ತಿಂಗಳಿಗೊಮ್ಮೆ ಹಲ್ಲುಗಳ ಬ್ರಶ್ ಬದಲಾಯಿಸಬೇಕು, ಆರು ತಿಂಗಳಿಗೊಮ್ಮೆ ದಂತ ವೈದ್ಯರನ್ನು ಭೇಟಿ ಮಾಡುವುದು, ತಂಬಾಕು ಸಂಪೂರ್ಣವಾಗಿ ನಿಷೇಧಿಸುವುದು' ಎಂದು ಐದು ಸುವರ್ಣ ಸೂತ್ರಗಳನ್ನು ತಿಳಿಸಿದರು.



ದಲಿತ ಹಕ್ಕುಗಳ ಸಮಿತಿ ನಗರ ಅಧ್ಯಕ್ಷರಾದ ಲಿಂಗಪ್ಪ ನಂತೂರು, ಕಿಶೋರ್ ಪೊರ್ಕೋಡಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಭಾಗವಹಿಸಿದ ಶಿಬಿರಾರ್ಥಿಗಳು ದಂತ ಸಂಬಂಧದ ಸಮಸ್ಯೆಗಳಿಗೆ ಸೂಕ್ತ ವೈದ್ಯಕೀಯ ಪರಿಹಾರಗಳನ್ನು ಪಡೆದು–ಕೊಂಡರು.

ವೇದಿಕೆಯಲ್ಲಿ ಹರೀಶ್, ಅಲಿಮಮ್ಮ ಉಪಸ್ಥಿತರಿದ್ದರು. ಸುಮಾರು 100ಕ್ಕೂ ಮಿಕ್ಕಿ ಈ ದಂತ ಚಿಕಿತ್ಸಾ ಶಿಬಿರದಲ್ಲಿ ಭಾಗವಹಿಸಿದ್ದರು. ಪ್ರಾರಂಭದಲ್ಲಿ ಕಿಶೋರ್ ಪೊರ್ಕೋಡಿಯವರು ಸ್ವಾಗತಿಸಿ ಕೊನೆಯಲ್ಲಿ ಧನ್ಯವಾದ ನೀಡಿದರು. ●

ವಿಜಯಪುರ : ದಲಿತ ಹಕ್ಕುಗಳ ಸಮಿತಿ ಜಿಲ್ಲಾ ಮಟ್ಟದ ಸಮಾವೇಶ
ರಾಜ್ಯದಲ್ಲಿ ದಲಿತರ ಮೇಲೆ ದೌರ್ಜನ್ಯಗಳು ಹೆಚ್ಚುತ್ತಿದೆ

ದೇಶ ಹಾಗೂ ರಾಜ್ಯದಲ್ಲಿ ದಲಿತರ ಮೇಲೆ ದೌರ್ಜನ್ಯ ಮಾರಣಾಂತಿಕ ಹಲ್ಲೆಗಳಂತಹ ಕೃತ್ಯಗಳು ನಿತ್ಯ ನಡೆಯುತ್ತಿದ್ದರು, ಕೇಂದ್ರ ರಾಜ್ಯ ಸರ್ಕಾರಗಳು ಮಾತ್ರ ದಲಿತರಿಗೆ ರಕ್ಷಣೆ ನೀಡುತ್ತಿಲ್ಲ ಎಂದು ದಲಿತ ಹಕ್ಕುಗಳ ಸಮಿತಿ ರಾಜ್ಯ ಸಂಚಾಲಕರಾದ ಗೋಪಾಲಕೃಷ್ಣ ಅರಳಹಳ್ಳಿ ಹೇಳಿದರು.



ನಗರದ ಡಾ. ಬಿ.ಆರ್. ಅಂಬೇಡ್ಕರ ಭವನದಲ್ಲಿ ದಲಿತ ಹಕ್ಕುಗಳ ಜಿಲ್ಲಾ ಸಮಿತಿ ಹಮ್ಮಿಕೊಂಡ ಜಿಲ್ಲಾ ಮಟ್ಟದ ಸಮಾವೇಶವನ್ನು ಡಾ. ಬಾಬಾ ಸಾಹೇಬ ಅಂಬೇಡ್ಕರವರ ಭಾವ ಚಿತ್ರ–ಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.

ದಲಿತ ಹುಡುಗರು ಸರ್ವಣಿಯ ಹುಡಿಗಿಯರನ್ನು ಪ್ರೀತಿಮಾಡಿದ ತಕ್ಷಣ ಹುಡುಗರ ಕುಟುಂಬದವನ್ನು ಥಳಿಸಿ ಬಹಿಷ್ಕರಿಸುವುದು, ಹುಡುಗನ ಮೇಲೆ ಮಾರಣಾಂತಿಕ ಹಲ್ಲೆ ಮಾಡುವುದು ನಡೆಯುತ್ತಲೇ ಇದೆ. ಇವರಿಗೆ ಪ್ರೀತಿ ಪ್ರೇಮದ ಬೆಲೆಯೆ ತಿಳಿಯದಂತಾಗಿದೆ. ಇಂತಹ ಘಟನೆಗಳು ಮೇಲಿಂದ ಮೇಲೆ ಹೆಚ್ಚಾಗುತ್ತಿರುವುದು ದುರಂತ ಎಂದರು.

ಹಾಸನದಲ್ಲಿ ಒಬ್ಬ ದಲಿತ ಕೂಲಿ ಕೇಳಿದಕ್ಕಾಗಿ ಆತನನ್ನು ಗುಂಡಹಾರಿಸಿ ಕೊಲ್ಲಲಾಗಿದೆ ಇದು ಖಂಡನೀಯ. ದಲಿತರನ್ನು ಕೂಲಿಗೆ ಹಚ್ಚಿ ಅವರ ಮೇಲೆ ಚಾಕ್ರಿ ಮಾಡುವ ಸವರ್ಣಿಯರು ಕನಿಷ್ಠ ಪಕ್ಷ ಅವರಿಗೆ ಕೂಲಿಯಾದರು ನೀಡಬೇಕು. ಕೂಲಿ ಕೇಳಿದ್ದನ್ನೇ ನೆಪ ಮಾಡಿ ಅವರನ್ನು ಹತ್ಯಮಾಡುವುದು ಯಾವ ನ್ಯಾಯವೆಂದು ಪ್ರಶ್ನಿಸಿದರು. ಉಡುಪಿಯಲ್ಲಿ ಫಂಕ್ತಿಭೇಧ, ಮಡಿಸ್ನಾನದ ಕುರಿತು ನಮ್ಮ ಸಂಘಟನೆ ಈ ಹಿಂದೆ ಹೋರಾಟ ಹಮ್ಮಿಕೊಂಡಿತ್ತು. ಈಗಲೂ ದಲಿತರ ಮೇಲಿನ ದೌರ್ಜನ್ಯ ಸೇರಿದಂತೆ ಸಮಾಜಿಕ ಸಮಸ್ಯೆಗಳ ವಿರುದ್ಧ ನಮ್ಮ ಸಂಘಟನೆ ಹೋರಾಟ ಮಾಡುತ್ತದೆ ಎಂದು ಹೇಳಿದರು.

ಇತ್ತೀಚಿಗೆ ಹರಿಯಾಣದಲ್ಲಿಯೂ ದಲಿತರಿಬ್ಬರನ್ನು ಹತ್ಯೆಮಾಡಲಾಯಿತು ಅದರಂತೆ ಉತ್ತರ ಪ್ರದೇಶದಲ್ಲಿಯೂ ಕೂಡ ಪ್ರೇಮ ಪ್ರಕರಣದಲ್ಲಿ ದಲಿತನೊಬ್ಬನನ್ನು ಹತ್ಯಮಾಡಲಾಗಿದೆ. ರಾಜ್ಯ ಸೇರಿದಂತೆ ದೇಶದಲ್ಲಿಯೇ ಇಂತಹ ಕೃತ್ಯಗಳು ನಡೆ–ಯುತ್ತಿದ್ದರು ಬಿಜೆಪಿ, ಕಾಂಗ್ರೆಸ್ ಸರ್ಕಾರಗಳು ದಲಿತರ ರಕ್ಷಣೆಗೆ ಮುಂದಾಗುತ್ತಿಲ್ಲ ಎಂದು ದೂರಿದರು.

ಅರಳು ಪ್ರಶಸ್ತಿ ಪುರಸ್ಕೃತ, ಪತ್ರಕರ್ತ ಪರಶುರಾಮ ಶಿವಶರಣ ಮಾತನಾಡಿ, ದಲಿತರು ಮನುಷ್ಯರಾಗಿದ್ದರೂ ಇತರೇ ಮನುಷ್ಯರು ದಲಿತರನ್ನು ಮನುಷ್ಯರಂತೆ ಕಾಣುತ್ತಿಲ್ಲ. ದಲಿತರ ಮೇಲೆ ಇಂದಿಗೂ ಶೋಷಣೆ, ದೌರ್ಜನ್ಯ ನಡೆಸುತ್ತಲೇ ಬರುತ್ತಿದ್ದಾರೆ. ಇದರ ಕಡಿವಾಣಕ್ಕಾಗಿ ದಲಿತರು ಜಾಗೃತರಾಗಿ, ಜ್ಞಾನವಂತರಾಗಬೇಕು. ಈ ಜ್ಞಾನಕ್ಕೆ ಮೂಲ ದಾರಿ ಶಿಕ್ಷಣ. ಈ ನಿಟ್ಟಿನಲ್ಲಿ ದಲಿತರು ಶಿಕ್ಷಣವಂತರಾಗಿ, ಅಧ್ಯಯನ ಶೀಲರಾಗಿ, ತಮ್ಮ ಜ್ಞಾನಶಕ್ತಿಯಿಂದ ಶೋಷಣೆ ಮಾಡುವವರಲ್ಲಿ ಭಯ ಹುಟ್ಟಿಸಬೇಕು. ಇದಕ್ಕೆ ಜೀವಂತ ಉದಾಹರಣೆ ಬುದ್ಧ, ಬಸವ, ಅಂಬೇಡ್ಕರ. ಈ ಮಹಾತ್ಮರು ತಮ್ಮ ಕೈಯಲ್ಲಿ ಯಾವುದೇ ಆಯುಧ ಹಿಡಿಯದೇ, ತಮ್ಮ ಜ್ಞಾನ ಹಾಗೂ ವಿದ್ವತ್ವದಿಂದ ಜಗತ್ತನೇ ಹೆದರಿಸಿದವರು. ಒಂದು ವೇಳೆ ಅವರೇನಾದರೂ ತಮ್ಮ ಕೈಯಲ್ಲಿ ಆಯುಧಗಳನ್ನು ಹಿಡಿದುಕೊಂಡಿದ್ದೇ ಆದರೆ ಜಗತ್ತು ಇಂದು ಹೀಗೆ ಇರುತ್ತಿರಲಿಲ್ಲ. ಜಗತ್ತೆ ರಣರಂಗವಾಗಿ ಮಾರ್ಪಡುತ್ತಿತ್ತು. ಅವರು ಸತ್ಯ,ಶಾಂತಿ, ಅಹಿಂಸೆಯನ್ನು ಭೋದಿಸಿ, ಮನುಕುಲಕ್ಕೆ ದಾರಿದೀಪವಾಗಿದ್ದಾರೆ. ಅವರಂತಹ ತತ್ವಾದರ್ಶಗಳನ್ನು ಪ್ರತಿಯೊಬ್ಬರು ಅಳವಡಿಸಿಕೊಳ್ಳಬೇಕು. ದಲಿತರು ತಮ್ಮ ಜೀವನಮಟ್ಟವನ್ನು ಸುಧಾರಿಸಿಕೊಂಡು ಸಮಾಜದ ಮುಖ್ಯವಾಹಿನಿಯಲ್ಲಿ ಬದುಕಬೇಕು ಎಂದರು.

ಪ್ರಾಂತ ರೈತ ಸಂಘದ ರಾಜ್ಯ ಉಪಾಧ್ಯಕ್ಷ ಭೀಮಶಿ ಕಲಾದಗಿ ಮಾತನಾಡಿ, ನಮ್ಮ ದೇಶಕ್ಕೆ ಸ್ವಾತಂತ್ರ ಸಿಕ್ಕು 70 ವರ್ಷಗಳು ಆದವು. ಸಂವಿಧಾನ ಆಶಯದಂತೆ ದಲಿತರಿಗೆ ಇಲ್ಲಿಯವರೆಗೂ ಯಾವುದೇ ರೀತಿಯ ಹಕ್ಕುಗಳು ಸಿಕ್ಕಿಲ್ಲ. ಕನಿಷ್ಠ ವಾಸಿಸಲು ಮನೆಯಿಲ್ಲ, ದುಡಿದು ತಿನ್ನಲು ಜಮೀನುಗಳಿಲ್ಲ, ಅಭದ್ರತೆಯಲ್ಲಿಯೇ ದಲಿತರು ಜೀವನ ನಡೆಸುತ್ತಿದ್ದಾರೆ. ಸರ್ಕಾರ ದಲಿತರ ನೆರವಿಗೆ ಬಂದು ದಲಿತರಿಗೆ ಜಮೀನು ಒದಗಿಸಬೇಕು ಎಂದರು.

ವಿಜಯಪುರ ಜಿಲ್ಲೆಯ ಮುದ್ದೇಬಿಹಾಳ ತಾಲೂಕಿನ ಲಕ್ಕುಂಡಿ ಗ್ರಾಮದ ದಲಿತರ ಮನೆಗಳನ್ನು ಕೆಡವಿದ್ದು ಹಾಗೂ ಕೋಳೂರ ಗ್ರಾಮದ ದಲಿತರಿಗೆ ಬಹಿಷ್ಕಾರ ಹಾಕಿದ್ದು, ಕಡಕೋಳ ಗ್ರಾಮದ ದಲಿತರು, ಕೆರೆಯ ನೀರು ಮುಟ್ಟಿದರು ಎಂಬಕಾರಣಕ್ಕೆ ಬಹಿಷ್ಕಾರ ಇವೆಲ್ಲ ನೋಡಿದರೆ ದಲಿತರ ಮೇಲಿನ ದೌರ್ಜನ್ಯದ ನಿದರ್ಶನ ಕಂಡುಬರುತ್ತದೆ ಎಂದರು.

ರಾಜ್ಯ ಸಹ ಸಂಚಾಲಕರಾದ ಯು. ಬಸವರಾಜ, ವಕೀಲರಾದ ಮಲ್ಲಿಕಾರ್ಜುನ ಭೃಂಗಿಮಠ ಮಾತನಾಡಿ, ಶೋಷಿತರ ಧ್ವನಿಯಾದ ಬಾಬಾಸಾಹೇಬ ಅಂಬೇಡ್ಕರವರು ದೇಶದ ಮಹಾಪುರುಷರಾಗಿದ್ದಾರೆ. ಸಮಾಜದಲ್ಲಿ ಸಮಾನತೆ ತರಲು ತಮ್ಮ ಜೀವನ ಪೂರ್ತಿ ಹೋರಾಟ ನಡೆಸಿದ ಧೀಮಂತ ನಾಯಕ. ಅವರ ಆದರ್ಶವನ್ನು ಪ್ರತಿಯೊಬ್ಬರು ಅಳವಡಿಸಿಕೊಳ್ಳಬೇಕೆಂದು ಹೇಳಿದರು.

ನಿವೃತ್ತ ಕೃಷಿ ಮಾರುಕಟ್ಟೆ ಅಧಿಕಾರಿ ಜಿ.ಎಸ್. ಇಂಗಳಗಿ ಅಧ್ಯಕ್ಷತೆ ವಹಿಸಿದ್ದರು. ಪ್ರಾಂತ ರೈತ ಸಂಘದ ಜಿಲ್ಲಾಧ್ಯಕ್ಷ ಅಣ್ಣರಾಯ ಈಳಗೇರ, ಜನವಾದಿ ಮಹಿಳಾ ಸಂಘದ ಸುರೇಖಾ ರಜಪೂತ, ಯಶವಂತ ರಣದೇವಿ, ರಾಜು ಜಾಧವ, ರಾಮಣ್ಣ ಶಿರೇಗೋಳ, ಸಿದ್ರಾಮ ಬಂಗಾರಿ, ಸುಮಿತ್ರ ಘೊಣಸಗಿ, ಈರಾಬಾಯಿ ಹಜೇರಿ, ಸಂತೋಷ ಕಾಂಬಳೆ, ಬಸಯ್ಯ ಗೋಳಸಂಗಿಮಠ, ಸುರೇಶ ಹಂಚನಾಳ, ಕಾಶಿನಾಥ ಧೇವಕುಳ್ಳಿ ಮುಂತಾದ ನೂರಾರು ದಲಿತರ ಹಕ್ಕುಗಳ ಸಮಿತಿಯ ಪದಾದಿಕಾರಿಗಳು ಉಪಸ್ಥಿತರಿದ್ದರು.

ಕಾರ್ಯಕ್ರಮ ಮುನ್ನ ರಘುನಾಥ ಬಾಣಿಕೋಲ ಕ್ರಾಂತಿಗೀತೆ ಹಾಡಿದರು. ಸಂಗಪ್ಪ ಎಸ್. ನಾಲ್ಕಮಾನ ಸ್ವಾಗತಿಸಿದರು. ಅನೀಲ ಚಲವಾದಿ ನಿರೂಪಿಸಿದರು. ಚಿದಾನಂದ ಬೆಳೆನವರ ನಿರೂಪಿಸಿದರು.

ಕಾರ್ಯಕ್ರಮ ಮುನ್ನ ನಗರದ ಪ್ರಮುಖ ರಸ್ತೆಗಳಲ್ಲಿ ಮೆರವಣಿಗೆ ನಡೆಸಿ ಆನಂತರ ಸಮಾವೇಶ ನಡೆಯಿತು.

: ಸಂಚಾಲಕ ಸಮಿತಿ ಕಮಿಟಿ :

ಜಿಲ್ಲಾ ಸಂಚಾಲಕರಾಗಿ ಎಸ್. ಎಸ್.ನಾಲ್ಕಮನ್ ಅವರನ್ನು ಆಯ್ಕೆಮಾಡಲಾಯಿತು. ಸಹ ಸಂಚಾಲಕರನ್ನಾಗಿ ಯಲಗೂರಪ್ಪ ಎಸ್. ಚಲವಾದಿ, ಯಶವಂತ ರಣದೇವಿ, ದಶರಥ ಐಹೊಳ್ಳಿ, ಮಳಸಿದ್ದ ನಾಯ್ಕೋಡಿ, ಚಿದಾನಂದ ಬೆಳ್ಳೆಣ್ಣನವರ, ಸತೀಶ ಗುಡಿಮನಿ, ಉಮೇಶ ಶಿವಶರಣ, ಸುರೇಶ ಬರಗಲ, ಸಾಯಬಣ್ಣ ದೊಡಮನಿ, ಶಾಂತಪ್ಪ ಮಾದರ, ಅನೀಲ ಚಲವಾದಿ, ನಿಂಗಪ್ಪ ಮಾದರ, ಚಂದ್ರಕಾಂತ ಬೆಳ್ಳೆನವರ, ಸುಮಿತ್ರಾ ಗೊಣಸಗಿ, ಎಲ್ಲವ್ವ ಕತ್ನಳ್ಳಿ, ಸಿದ್ದು ಚಲವಾದಿ, ಪರಶು ತಳಕೇರಿ, ಭೀಮಬಾಯಿ ಬಾಣಿ, ಶ್ರೀಶೈಲ ಮಾದರ ಮುಂತಾದವರನ್ನು ಆಯ್ಕೆಗೊಳಿಸಲಾಯಿತು.

: ನಿರ್ಣಯಗಳು :

1) ದಲಿತರಿಗೆ ದಬ್ಬಾಳಿಕೆ ದೌರ್ಜನ್ಯ ನಡೆ–ಯುತ್ತಿದ್ದು, ಬಹಿಷ್ಕಾರ, ನೀರು ಕುಡಿಯಲು ಬಹಿಷ್ಕಾರ, ಗುಡಿ ಗುಂಡಾರ ಹೋಗುವಲ್ಲಿ ಬಹಿಷ್ಕಾರಗೊಳಿಸುವವರ ವಿರುದ್ಧ ಕಠಿಣ ಕಾನೂನು ಕ್ರಮ ತೆಗೆದುಕೊಳ್ಳಬೇಕು.

2) ನಮ್ಮ ಕರ್ನಾಟಕ ರಾಜ್ಯದಲ್ಲಿ ಪರಿಸ್ಥಿತಿ ಭಿನ್ನವಾಗೇನು ಇಲ್ಲ. ರಾಜ್ಯದ 6.11 ಕೋಟಿ ಜನಸಂಖ್ಯೆಯಲ್ಲಿ ಪರಿಶಿಷ್ಟ ಜಾತಿ ಶೆ.17.3 ರಷ್ಟು ಪರಿಶಿಷ್ಟ ಪಂಗಡ ಶೆ. 7.2 ರಷ್ಟು ಒಟ್ಟು 1.60 ಕೋಟಿ ಜನರಿದ್ದಾರೆ. ಇವರಲ್ಲಿ ಬಹುಸಂಖ್ಯಾತರಿಗೆ ಭೂಮಿಗಳಾಗಲಿ ಮನೆಗಳಾಗಲಿ ಇಲ್ಲ. ಇನ್ನಿತರ ಸೌಲಭ್ಯಗಳು ಸಿಕ್ಕಿಲ್ಲ. ಅವು ಎಲ್ಲರಿಗೂ ಸಿಗಬೇಕು.

3) ಕೇಂದ್ರ ಹಾಗೂ ರಾಜ್ಯಗಳು ದಲಿತರಿಗಾಗಿಯೇ ಪ್ರತ್ಯೇಕ ಬಜೆಟ್ ಅನುಧಾನ ಕೊಡಬೇಕು. ಮೀಸಲಾತಿ ಜಾರಿಮಾಡಬೇಕು.

4) ಈ ಸರ್ಕಾರದಲ್ಲಿ ಮೀಸಲಾತಿ 84 ಕೋಟಿ ರುಪಾಯಿ ಇರುತ್ತದೆ. ಆ ಹಣದಲ್ಲಿ ದಲಿತರಿಗೆ 5 ಎಕರೆ ಜಮೀನು ಕೊಡಲಿಕ್ಕೆ ಅರ್ಜಿಗಳು ಹಾಕಬೇಕು. ಹಾಕುವಂತೆ ತಿರ್ಮಾನ ಕೈಗೊಳ್ಳಲಾಯಿತು.

5) ಫೆ. 17 ರಂದು ಇಡೀ ರಾಜ್ಯಾದ್ಯಾಂತ ಹೆದ್ದಾರಿಯನ್ನು 1 ಗಂಟೆಗೆ ರಸ್ತೆ ತಡೆದು ಪ್ರತಿಭಟಿಸಲಾಗುವುದು. 28ನೇ ತಾರಿಕಿಗೆ ರಾಜ್ಯಾದ್ಯಂತ ಎಲ್ಲ ತಾಲೂಕು ಕೇಂದ್ರಗಳಲ್ಲಿ ತಹಶೀಲ್ದಾರ ಕಚೇರಿ ಮುಂದೆ ಧರಣಿ ನಡೆಸಲಾಗುವುದು.

6) ಎಪ್ರಿಲ್ ಕೊನೆ ತಿಂಗಳಲ್ಲಿ 10,000 ಜನರನ್ನು ಬೆಂಗಳೂರಿನಲ್ಲಿ ಸೇರಿಸಿ ದಲಿತರ ವಿವಿಧ ಬೇಡಿಕೆಗಳನ್ನು ಈಡೇರಿಸಲು ಹೋರಾಟ ಕೈಗೊಳ್ಳಲು ತಿರ್ಮಾನಿಸಲಾಯಿತು.

ಸಂಗಪ್ಪ ಎಸ್. ನಾಲ್ಕಮಾನ



ಬೆಂಗಳೂರಿನ ನಾಗನಾಥಪುರ ಮೈಕೋ ಸಾರ್ವಜನಿಕ ಉದ್ಯಮದಲ್ಲಿ ನಡೆದ ಕಾರ್ಮಿಕ ಸಂಘದ ಚುನಾವಣೆಯಲ್ಲಿ #CITU ಎಲ್ಲ ಪದಾಧಿಕಾರಿಗಳು ಜಯಶೀಲರಾಗಿದ್ದಾರೆ. ಕೆ.ಎನ್ ಉಮೇಶ್ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ.

ಫೆಬ್ರವರಿ 14 ರಿಂದ ಪೌರ ಕಾರ್ಮಿಕರ 'ಅಮರಣಾಂತ ಉಪವಾಸ ಸತ್ಯಾಗ್ರಹ'



ಹಾಸನ ನಗರಸಭೆಯ ಅಧ್ಯಕ್ಷರು, ಪೌರಾಯುಕ್ತರು ಹಾಗೂ ಗುತ್ತಿಗೆದಾರು ಹಾಸನ ನಗರಸಭೆಯಲ್ಲಿ ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿರುವ ಬಡ ಹಾಗೂ ದಲಿತ ಪೌರಕಾರ್ಮಿಕರ ಮೇಲಿನ ದೌರ್ಜನ್ಯವನ್ನು ವಿರೋಧಿಸಿ ಹಾಗೂ ಕೆಲಸ ನಿರಾಕರಿಸಲ್ಪಟ್ಟಿರುವ ಕಾರ್ಮಿಕರಿಗೆ ಬಾಕಿ ವೇತನ ಸಹಿತ ಕೆಲಸ ನೀಡುವಂತೆ ಮತ್ತು ಪೌರಕರ್ಮಿಕರ ಬೇಡಿಕೆಗಳ ಈಡೇರಿಕೆಗಾಗಿ ದಿನಾಂಕ: 14/02/2017 ರಿಂದ ಹಾಸನ ಜಿಲ್ಲಾಧಿಕಾರಿಗಳ ಕಚೇರಿ ಮುಂದೆ ದೌರ್ಜನ್ಯಕ್ಕೊಳಗಾದ ಕಾರ್ಮಿಕರು 'ಅಮರಣಾಂತ ಉಪವಾಸ ಸತ್ಯಾಗ್ರಹ' ನಡೆಸಲಿದ್ದಾರೆ.

ಹಾಸನ ನಗರಸಭೆಯ ಅ ಧ್ಯಕ್ಷರಾದ ಎಚ್.ಎಸ್. ಅನಿಲ್‌ಕುಮಾರ್ ರವರು ಸರ್ವಾಧಿಕಾರಿಯಂತೆ ಹಾಗೂ ದಲಿತ ವಿರೋಧಿಯಾಗಿ ವರ್ತಿಸುತ್ತಿದ್ದಾರೆ. ನಗರಸಭೆಯ ಪೌರಾಯುಕ್ತರಾದ ನಾಗಭೂಷಣ್‌ರವರು ಅ ಧ್ಯಕ್ಷರ ಕೈಗೊಂಬೆಯಾಗಿದ್ದಾರೆ. ಅಧ್ಯಕ್ಷರು ನಗರಸಭೆಯ ಎಲ್ಲಾ ಕೆಲಸಗಳನ್ನು ತಾವೊಬ್ಬರೇ ಮಾಡುತ್ತಿರುವಂತೆ ಭ್ರಮೆಯಲ್ಲಿದ್ದಾರೆ. ಶಾಸಕರಾದ ಎಚ್.ಎಸ್. ಪ್ರಕಾಶ್‌ರವರು ತಮ್ಮ ಸಹೋದರನೇ ಅಧ್ಯಕ್ಷರಾಗಿರುವುದರಿಂದ ಎಲ್ಲದಕ್ಕೂ ಬೆಂಬಲವಾಗಿ ನಿಂತಿದ್ದಾರೆ.

ಕಾರ್ಮಿಕರ ಸಂಘ ಕಟ್ಟದಂತೆ, ಸಂಘದ ಚಟುವಟಿಕೆಗಳಿಗೆ ಭಾಗವಹಿಸದಂತೆ ನಿರ್ಬಂದ ಹೇರಲಾಗುತ್ತಿದೆ. ಕೆಲಸದ ಸ್ಥಳಗಳಲ್ಲಿ ಕಾರ್ಮಿಕರನ್ನು ಬೇಕಾಬಿಟ್ಟಿ ದುಡಿಸಿಕೊಳ್ಳಲಾಗುತ್ತಿದೆ. ಕಾರ್ಮಿಕರಿಗೆ ಕನಿಷ್ಟ ಸೌಲಭ್ಯಗಳನ್ನೂ ಒದಗಿಸುತ್ತಿಲ್ಲ. ಕಾರ್ಮಿಕರನ್ನು ಪ್ರತಿದಿನ ಏಕಾಏಕಿಯಾಗಿ ಕೆಲಸದಿಂದ ತೆಗೆಯುವುದು ಬೇಕಾದವರನ್ನು ಕೆಲಸಕ್ಕೆ ಸೇರಿಕೊಳ್ಳುವುದು ಮಾಡಲಾಗುತ್ತಿದೆ. ಕಾರ್ಮಿಕರು ಸಂಘ ಕಟ್ಟಿದರೆ ಅವರನ್ನು ಕೆಲಸದಿಂದ ತೆಗೆದು ಹಾಕುವ ಹಾಗೂ ಅವರನ್ನು ಖಾಯಂ ಆಗದಂತೆ ತಡೆಯುವ ಬೆದರಿ–ಕೆ ಹಾಕಲಾಗುತ್ತಿದೆ. ಅತ್ಯಂತ ತಳ ಸಮುದಾಯದ ದಲಿತರಲ್ಲೇ ದಲಿತರಾಗಿರುವ ಇಂತಹ ಕಾರ್ಮಿಕರ ಮೇಲೆ ದಬ್ಬಾಳಿಕೆ ನಡೆಸಲಾಗುತ್ತಿದೆ. ನಗರಸಭೆಯ ಖಾಯಂ ಕಾರ್ಮಿಕರ ಮೇಲೂ ದಬ್ಬಾಳಿಕೆ ನಡೆ–ಯುತ್ತಿದೆ.

ದಲಿತ ವಿಭಾಗಕ್ಕೆ ಸೇರಿದ ಪೌರಕಾರ್ಮಿಕರು ತಮ್ಮ ಹೋರಾಟದ ಮುಖಾಂತರ ತಮ್ಮ ವೇತನವನ್ನು 14 ಸಾವಿರ ರೂಪಾಯಿಯನ್ನು ಪಡೆದುಕೊಳ್ಳುತ್ತಿರುವುದು ನಗರಸಭೆಯ ಅಧ್ಯಕ್ಷರು ಹಾಗೂ ಗುತ್ತಿಗೆದಾರರ ಅಸಮಾಧಾನಕ್ಕೆ ಕಾರಣವಾಗಿದೆ. ಹಾಗೂ ವಸತಿ ರಹಿತ ಗುತ್ತಿಗೆ ಪೌರಕಾರ್ಮಿಕರು ಇತರೆ ವಸತಿ ರಹಿತರೊಂದಿಗೆ ಸೇರಿ ತಮಗೆ ಮನೆ, ನಿವೇಶ ನೀಡಬೇಕೆಂದು ಹೋರಾಟ ನಡೆಸಿದ್ದನ್ನು ಅ ಧ್ಯಕ್ಷರು ವಯಕ್ತಿಕವಾಗಿ ತೆಗೆದುಕೊಂಡಿದ್ದಾರೆ. ಕಷ್ಟಪಟ್ಟು ತಮ್ಮ ಆರೋಗ್ಯವನ್ನೂ ಲೆಕ್ಕಿಸದೆ ದುಡಿಮೆ

ಪುಟ 15 ಕ್ಕೆ

ಅತಿಥಿ ಅಂಕಣ



ಮಧ್ಯಮಮಾರ್ಗ ಎಂದರೇನು?

ಪ್ರೊ. ವಿ.ಎನ್.ಲಕ್ಷ್ಮೀನಾರಾಯಣ

ಎಡ-ಬಲಗಳ ನಡುವೆ ಸಂವಾದ, ಸಂಧಾನ, ಸಮನ್ವಯ ಸಾಧಿಸಿ ಎಡಬಲಗಳು ಎರಡೂ ಅಲ್ಲದ ತಾತ್ವಿಕತೆಗಳಿಗಾಗಿ ಪ್ರಯತ್ನಿಸುವವರು ಉಳಿದಂತೆ ಎಷ್ಟೇ ಮುತ್ಸದ್ದಿಗಳಾಗಿಬಹುದಾದರೂ, ಸಮಾಜದ ಸಂಘಟನೆ ಮತ್ತು ನಿಯಂತ್ರಣದ ಬಗೆಗಿನ ರಾಜಕೀಯ ಅರಿವಿನ ವಿಷಯದಲ್ಲಿ ನಿರಕ್ಷರಕುಕ್ಷಿಗಳು. ಅವರು ಬಯಸುವ ಸಂವಾದ ಗೊತ್ತಿದ್ದೋ ಗೊತ್ತಿಲ್ಲದೆಯೋ ಬಂಡವಾಳವಾದದ ಸಮರ್ಥನೆಯಾಗಿ, ಎಡಪಂಥದ ಅಸಹನೆಯಾಗಿ, ಮುಗ್ಧ ಜನರನ್ನು ದಾರಿ ತಪ್ಪಿಸುವ ಮೂಢ ಪ್ರಯತ್ನವಾಗಿ, ಹೇಗಾದರೂ ಸರಿ ಲಾಭವಾಗಲಿ ಎಂದು ಬಯಸುವ ದುರಾಸೆಯ ಸಮಯಸಾಧಕ ಪ್ರಯತ್ನವಾಗಿ ಅಥವಾ, ಜೊತೆಗೆ ಬಂಡವಾಳವಾದದ ವ್ಯವಸ್ಥಿತ ಜಾಲದ ಫಲಾನುಭವಿಯಾಗಿ ಇಲ್ಲವೆ ಬಲಿಪಶುವಾಗಿಯೂ ಇರಬಹುದು.

ಭಾರತದಲ್ಲಿ, ನಿರ್ದಿಷ್ಟವಾಗಿ ಕರ್ನಾಟಕದಲ್ಲಿ ಖಾಸಗಿಯಾಗಿ ಸಂಘಟಿಸುವ ಸಾಹಿತ್ಯೋತ್ಸವಗಳಲ್ಲಿ ಎಡ-ಬಲಗಳ ನಡುವೆ ಸಂಘರ್ಷದ ಬದಲು ಸಂವಾದ ನಡೆಸುವ ಮೂಲಕ ಎರಡೂ ಅಲ್ಲದ ಮಧ್ಯಮ ಮಾರ್ಗವೊಂದನ್ನು ಕಂಡುಕೊಳ್ಳುವ ಅಗತ್ಯದ ಬಗ್ಗೆ ಕೂಗೆದ್ದಿದೆ. ಈ ಸಂದರ್ಭದಲ್ಲೇ ಎಡ ಯಾವುದು? ಬಲ ಎಂದರೇನು? ಇವುಗಳ ಉಗಮ, ಚಾರಿತ್ರಿಕ ಹಿನ್ನೆಲೆ, ಸಾಮಾಜಿಕ ಸಂದರ್ಭ ಮತ್ತು ಸಂಬಂಧಿಸಿದ ರಾಜಕೀಯ ದೃಷ್ಟಿಕೋನಗಳ ಬಗ್ಗೆ ಚರ್ಚೆ ನಡೆಯುತ್ತಿದೆ.

ಹಿಂದೂ ನಂಬಿಕೆಯಂತೆ ಈಶ್ವರನ ಎಡಭಾಗ ಹೆಣ್ಣು, ಬಲಭಾಗ ಗಂಡು. ಮಲಗುವುದು ಎಡಮಗ್ಗುಲಿಗೆ ನಿದ್ರೆಯಿಂದ ಏಳುವಾಗ ಬಲಮಗ್ಗುಲಿಗೆ. ಊಟಕ್ಕೆ ಬಲಗೈ, ಶೌಚಕ್ಕೆ ಎಡಗೈ. ಒಳ್ಳೆಯದನ್ನು ಬಹಿರಂಗವಾಗಿ ಆಚರಿಸುವ ವಿಧಿಗಳು 'ಬಲಾಚಾರ'ವೆನಿಸದಿದ್ದರೂ ತೊಂದರೆ ಕೊಡಲೆಂದು ಗುಪ್ತವಾಗಿ ಆಚರಿಸುವ ವಿಧಿ ವಿಧಾನಗಳು ವಾಮಾಚಾರ. ಲೈಂಗಿಕ ಸುಖದ ನಿರಾಕರಣೆಯ ಅಧ್ಯಾತ್ಮವನ್ನು ಬಲಮಾರ್ಗವೆಂದು ಕರೆಯದಿದ್ದರೂ ಅದನ್ನು ಪುರಸ್ಕರಿಸಿ ಆರಾಧಿಸುವ ಅಧ್ಯಾತ್ಮ ಸಾಧನೆ ವಾಮಮಾರ್ಗ. ಪೂಜೆಗೆ, ಪುರಸ್ಕಾರಕ್ಕೆ, ದಾನಕ್ಕೆ ಬಲಗೈ ಮುಂದು. ತಿರಸ್ಕಾರಕ್ಕೆ ಎಡಗೈ. ದಲಿತರಲ್ಲೇ 'ಒಂದು ಸ್ತರದ ದಲಿತರು' ಬಲಗೈ. 'ಇನ್ನೊಂದು ಸ್ತರದ ದಲಿತರು' ಎಡಗೈ.

ಆದರೆ ನಮಸ್ಕಾರಕ್ಕೆ, ದಾನ ಸ್ವೀಕಾರಕ್ಕೆ, ಉದ್ಘಾಟನೆಯ ದೀಪ ಬೆಳಗಿಸಲು ಎರಡೂ ಕೈ.

ಚಾರಿತ್ರಿಕವಾಗಿ ರಾಜಕೀಯ ಪರಿಭಾಷೆಯಾಗಿ ಎಡ-ಬಲಗಳ ನಿರ್ವಚನೆ ಬಳಕೆಗೆ ಬಂದಿದ್ದು ಸಹ ಕೈಗಳ ಮೂಲಕವೇ. 1789 ರ ಫ್ರೆಂಚ್ ಕ್ರಾಂತಿಯ ನಂತರ ಫ್ರಾನ್ಸ್ ಶಾಸನ ಸಭೆಯಲ್ಲಿ ಸಭಾಧ್ಯಕ್ಷರ ಎಡಪಕ್ಕ ಕುಳಿತ ರಾಜಪ್ರಭುತ್ವ ವಿರೋಧಿಗಳು ಎಡ ಪಕ್ಷವಾದರು. ಬಲ ಪಕ್ಕ ಕುಳಿತ ರಾಜಪ್ರಭುತ್ವ-ಪರವಾಗಿರುವವರು ಬಲ ಪಕ್ಷವಾದರು. ಆದರೆ ಎಡ-ಬಲಗಳು ಪ್ರಗತಿಪರ-ಸಾಂಪ್ರದಾಯಿಕ, ಜನಪರ-ಜನವಿರೋಧಿ, ಕಾರ್ಮಿಕರ ಪರ-ಬಂಡವಳಿಗರ ಪರ ಎಂದೆಲ್ಲಾ ರಾಜಕೀಯ ದೃಷ್ಟಿಕೋನ ಮತ್ತು ವಿರುದ್ಧ ತಾತ್ವಿಕತೆಗಳ ಸ್ಪಷ್ಟ ಆಯಾಮವನ್ನು ಪಡೆದು-ಕೊಂಡಿದ್ದು **ಜಾಗತಿಕ ರಾಜಕಾರಣಕ್ಕೆ ಮಾರ್ಕ್ಸ್‌ವಾದದ ಪ್ರವೇಶ ಆದಮೇಲೆ.**

ಮಧ್ಯಮಮಾರ್ಗ ಯಾರ ಪರವಾಗಿರುತ್ತದೆ?

21ನೇ ಶತಮಾನದಲ್ಲಿ ಎಡಪಂಥ ಎಂದರೆ ನಿರ್ದಿಷ್ಟವಾಗಿ ಮಾರ್ಕ್ಸ್‌ವಾದವೇ. ಎಡಪಂಥೀಯರು ಎಂದರೆ ಕಮ್ಯೂನಿಸ್ಟರು ಎಂಬುದು ಎಲ್ಲರಿಗೂ ಗೊತ್ತು. ಎಡಪಂಥದ ವಿರೋಧವೆಂದರೆ ಮಾರ್ಕ್ಸ್‌ವಾದದ ವಿರೋಧ. ಕಮ್ಯುನಿಸ್ಟರ ವಿರೋಧ. ಸಮಾಜವಾದದ ತಾತ್ವಿಕತೆಯ ವಿರೋಧ. ದುಡಿಯುವವರ ಪರವಾದ ರಾಜಕೀಯದ ವಿರೋಧ. ವಿರೋಧಿಸುವವರು ಯಾರು? ಒಂದೇ ಮಾತಿನಲ್ಲಿ ಹೇಳುವುದಾದರೆ ಬಂಡವಳಿಗರು. ಅವರ ಪರವಾದ ರಾಜಕೀಯ ತಾತ್ವಿಕತೆ. ಇಬ್ಬರ ನಡುವೆ ಸಂಘರ್ಷ ಬೇಡ, ಸಂವಾದ ಬೇಕು ಎಂದರೆ ಏನರ್ಥ? ಇವೆರಡರ ನಡುವಿನ ಸಂವಾದದಲ್ಲಿ ಇವೆರಡೂ ಅಲ್ಲದ ಮೂರನೆಯ ತಾತ್ವಿಕತೆ ಹುಟ್ಟಬಹುದೆ? ಇವೆರಡರ ನಡುವೆ ಸಮನ್ವಯ ಸಾಧ್ಯವಾಗಬಹುದೆ? ಅಥವಾ ಇವೆರಡೂ ಅಲ್ಲದ, ಇವೆರಡರ ನಡುವೆ ಮಧ್ಯಮಮಾರ್ಗ ಎಂಬುದಿದೆಯೆ? ಇದ್ದರೆ ಅಂಥ ಮಧ್ಯಮಮಾರ್ಗ ಯಾರ ಪರವಾಗಿರುತ್ತದೆ?

ಬಂಡವಳಿಗರು ತಮ್ಮ ಹಿತಾಸಕ್ತಿಯನ್ನು ರಕ್ಷಿಸುವ, ಸರಿಯೆಂದು ನಂಬುವ, ಅದನ್ನು ಉಳಿಸಿಕೊಳ್ಳಲು ಎಂಥ ಹಿಂಸೆಗಾದರೂ ಹೇಸದ ತಾತ್ವಿಕತೆಯಾದ ಬಂಡವಾಳವಾದ ತಾತ್ವಿಕವಾಗಿ ಏಕಾಕೃತಿ ಹೌದು. ಆದರೆ ಅದು ಒಂದೇ ಅಲ್ಲ ಮತ್ತು ಅದಕ್ಕೆ ಒಂದೇ ಹೆಸರಿಲ್ಲ. ಸಾಮಾಜಿಕ ಶ್ರಮಶಕ್ತಿಯ ಮೇಲಿನ ಹಿಡಿತ, ಸರಕು ಮತ್ತು ಸೇವೆಗಳ ಉತ್ಪಾದನಾ ಸಂಬಂಧಗಳ ಕಾನೂನಾತ್ಮಕ ನಿಯಂತ್ರಣ ಮತ್ತು ಪ್ರಭುತ್ವದ ಶಕ್ತಿಯನ್ನು ಬೆರಳೆಣಿಕೆಯ ಶ್ರೀಮಂತರು ತಮ್ಮ ಕೈಲಿರಿಸಿಕೊಂಡು ದುಡಿಯುವ ಜನರು ಮತ್ತು ಜನಸಮುದಾಯದ ಹೇರುವ ಬೂರ್ಜ್ವಾ ಸರ್ವಾಧಿಕಾರವೇ ಬಂಡವಾಳವಾದ. ಅದಕ್ಕೆ 'ಮುಕ್ತ ಸಮಾಜ', 'ಅಪ್ಪಟ ಪ್ರಜಾತಂತ್ರ' ಮುಂತಾದ ಮೋಸದ ಹೆಸರು ಬೇರೆ. ಎಲ್ಲ ಬಗೆಯ ಜೀವನಾಗತ್ಯ ವಸ್ತುಗಳ ಉತ್ಪಾದನೆಗೆ ಮೂಲಾಧಾರವಾದ ಭೂಮಿ ಮತ್ತು ಭೂಪ್ರದೇಶಗಳ ಮೇಲಿನ ಸ್ವಾಮ್ಯಕ್ಕಾಗಿ ಬಂಡವಳಿಗರ ವಿವಿಧ ಬಣಗಳು ಲಕ್ಷಾಂತರ ಬಡ ಸೈನಿಕರ ರಕ್ತ ಹರಿಸುವ ಸಂಘಟಿತ ಪೈಪೋಟಿಯೇ ಯುದ್ಧ.

ಒಂದು ಭೂಪ್ರದೇಶದ ದುಡಿಯುವ ಜನರನ್ನು ವಂಚಿಸಿ ದೋಚಿದ ಶ್ರಮದ ಮೌಲ್ಯವನ್ನು ಮತ್ತೊಂದು ಭೂಪ್ರದೇಶದ ಬಂಡವಳಿಗರು ದೋಚಿದ ಶ್ರಮದ ಮೌಲ್ಯದೊಂದಿಗೆ ವಿನಿಮಯ ಮಾಡಿಕೊಂಡು ಬಂಡವಳಿಗರ ಸಂಪತ್ತನ್ನು ಹೆಚ್ಚಿಸಿಕೊಳ್ಳಲು, ಲಾಭವಾದರೆ ಬಂಡವಳಿಗರಿಗೆ. ನಷ್ಟವಾದರೆ ದುಡಿಯುವ ಜನರಿಗೆ ಎಂಬ ಸೂತ್ರವನ್ನು ಆಧರಿಸಿಮಾಡುವ ನಡೆಸುವ ವಹಿವಾಟುಗಳೇ ವ್ಯಾಪಾರ. ಅದು ಅನಿರ್ಬಂಧಿತವಾಗಿರಬೇಕು, ಆದ್ದರಿಂದ ಮುಕ್ತ ವ್ಯಾಪಾರ. ಈ ಸಂಬಂಧ ಬಂಡವಳಿಗರ ನಡುವೆ ಏರ್ಪಡುವ ಒಪ್ಪಂದಗಳು ದೇಶ ದೇಶಗಳ ನಡುವಿನ ವ್ಯಾಪಾರ ಒಪ್ಪಂದಗಳು. ಇದಕ್ಕೆ ಏನೇನು ಹೆಸರಿಟ್ಟರೂ, ಯಾವ ರೂಪ ತಾಳಿದರೂ ಬಂಡವಾಳವಾದದ ಸಾರ ಸರ್ವಸ್ವ ಒಂದೇ. ದುಡಿಯು ಜನರ ಮೇಲಿನ ಶ್ರೀಮಂತರ ಸರ್ವಾಧಿಕಾರ.

ಬಂಡವಾಳವಾದದ ತೊಡೆಯಮೇಲೆ ಕುಳಿತು ಸಮಾಜವಾದಕ್ಕಾಗಿ ಕೈ ಚಾಚುವ ಮಗು

ಇದಕ್ಕೆ ಪ್ರತಿಯಾಗಿ, ಬೆರಳೆಣಿಕೆಯ ಶ್ರೀಮಂತರು, ದುಡಿಯುವ ಜನರ ಮೇಲೆ, ಮತ್ತು ಜನಸಮುದಾಯದ ಮೇಲೆ ನಡೆಸುವ ಬೂರ್ಜ್ವಾ ಸರ್ವಾಧಿಕಾರವನ್ನು ಕೊನೆಗೊಳಿಸಿ ದುಡಿಯುವ ಜನರ ಸರ್ವಾಧಿಕಾರವನ್ನು ಸ್ಥಾಪಿಸುವುದೊಂದೇ ಜನಸಮುದಾಯದ ಬಿಡುಗಡೆಗೆ, ನಿಜವಾದ ಪ್ರಜಾಪ್ರಭುತ್ವದ ಸ್ಥಾಪನೆಗೆ ಇರುವ ಏಕೈಕ ದಾರಿ.

ಇದನ್ನುಳಿದು ಬೇರೆ ಪರ್ಯಾಯಗಳಿವೆಯೆಂದು ನಂಬುವ, ಪ್ರಚಾರ ಮಾಡುವ ಎಲ್ಲ ತಾತ್ವಿಕತೆಗಳೂ ಬಂಡವಾಳವಾದದ ತೊಡೆಯಮೇಲೆ ಕುಳಿತು ಸಮಾಜವಾದಕ್ಕಾಗಿ ಕೈ ಚಾಚುವ ಮಗುವಿನಂತೆ ಮುಗ್ಧ ಅಥವಾ ಅಜ್ಞ, ಬಂಡವಾಳವಾದವನ್ನು ಧಿಕ್ಕರಿಸುವ, ಅಥವಾ ಅದರೊಂದಿಗೆ ಸಮನ್ವಯ ಸಾಧಿಸಿ ಶೋಷಣೆ, ಅನ್ಯಾಯ, ಹಿಂಸೆಗಳಿಂದ ಮುಕ್ತವಾದ ಹೊಸ ಸಮಾಜವನ್ನು ಕಟ್ಟಬೇಕೆಂದು ಕನಸು ಕಾಣುವ ಗಾಂಧಿವಾದ, ಲೋಹಿಯಾವಾದ, ಅಂಬೇಡ್ಕರ್‌ವಾದ, ಸರ್ವೋದಯ, ಕಲ್ಯಾಣರಾಜ್ಯ, ಸಂತ ಸಮಾಜವಾದ, ಸರಳಜೀವನವಾದ... ಒಟ್ಟಿನಲ್ಲಿ ದುಡಿಯುವ ಜನರ ಸರ್ವಾಧಿಕಾರ ಒಂದನ್ನು ಬಿಟ್ಟು ಏನೆಲ್ಲವನ್ನೂ ಗುರಿಯಾಗಿರಿಸಿಕೊಂಡು ಮಾಡುವ ಸಾಂಸ್ಕೃತಿಕ, ಸಾಮಾಜಿಕ ಮತ್ತು ಬೌದ್ಧಿಕ ಪ್ರಯತ್ನಗಳು ಪ್ರಗತಿಶೀಲವೆಂದು, ಜನಪರವೆಂದು, ಪ್ರಜಾತಾಂತ್ರಿಕವೆಂದು, ತೋರಬಹುದೇ ಹೊರತು ಸಾಮಾಜಿಕ ಶ್ರಮಶಕ್ತಿಯ ಹಿಡಿತದಲ್ಲಾಗಲಿ ಸರಕು-ಸೇವೆಗಳ ಉತ್ಪಾದನಾ ಸಂಬಂಧಗಳಲ್ಲಾಗಲಿ, ಪ್ರಭುತ್ವ ಶಕ್ತಿಯ ನಿಯಂತ್ರಣದಲ್ಲಾಗಲಿ ಬದಲಾವಣೆ ತರುವುದರಲ್ಲಿ ಸಫಲವಾಗುವುದಿಲ್ಲ. ಅಂಥ ಬದಲಾವಣೆಯತ್ತ ಒಂದು ಹೆಜ್ಜೆ ಮುಂದಿಟ್ಟರೂ ಪ್ರಭುತ್ವಶಕ್ತಿ ಅಂಥ ಪ್ರಯತ್ನಗಳನ್ನು ನಿರ್ದಯವಾಗಿ ಬಗ್ಗು ಬಡಿಯುತ್ತದೆ. ಶಾಂತಿ, ಸಹನೆ, ಪ್ರೇಮ, ಹೃದಯಪರಿವರ್ತನೆ ಮುಂತಾದ ಯಾವ ಮಾನವೀಯ ಮನವಿಗಳಿಗೂ ಸೊಪ್ಪುಹಾಕುವುದಿಲ್ಲ.

TINA ಮತ್ತು TAMA

ಎಡ-ಬಲಗಳ ನಡುವೆ ಸಂವಾದ, ಸಂಧಾನ, ಸಮನ್ವಯ ಸಾಧಿಸಿ ಎಡಬಲಗಳು ಎರಡೂ ಅಲ್ಲದ ತಾತ್ವಿಕತೆಗಳಿಗಾಗಿ ಪ್ರಯತ್ನಿಸುವವರು ಉಳಿದಂತೆ ಎಷ್ಟೇ ಮುತ್ಸದ್ದಿಗಳಾಗಿಬಹುದಾದರೂ, ಸಮಾಜದ ಸಂಘಟನೆ ಮತ್ತು ನಿಯಂತ್ರಣದ ಬಗೆಗಿನ ರಾಜಕೀಯ ಅರಿವಿನ ವಿಷಯದಲ್ಲಿ ನಿರಕ್ಷರಕುಕ್ಷಿಗಳಿರಬಹುದು. ಅವರು ಬಯಸುವ ಸಂವಾದ ಗೊತ್ತಿದ್ದೋ ಗೊತ್ತಿಲ್ಲದೆಯೋ ಬಂಡವಾಳವಾದದ ಸಮರ್ಥನೆಯಾಗಿ, ಎಡಪಂಥದ ಅಸಹನೆಯಾಗಿ, ಮುಗ್ಧ ಜನರನ್ನು ದಾರಿ ತಪ್ಪಿಸುವ ಮೂಢ ಪ್ರಯತ್ನವಾಗಿ, ಹೇಗಾದರೂ ಸರಿ ಲಾಭವಾಗಲಿ ಎಂದು ಬಯಸುವ ದುರಾಸೆಯ ಸಮಯಸಾಧಕ ಪ್ರಯತ್ನವಾಗಿ ಅಥವಾ, ಜೊತೆಗೆ ಬಂಡವಾಳವಾದದ ವ್ಯವಸ್ಥಿತ ಜಾಲದ ಫಲಾನುಭವಿಯಾಗಿ ಇಲ್ಲವೆ ಬಲಿಪಶುವಾಗಿಯೂ ಇರಬಹುದು.

ಜಾಗತೀಕರಣದ ರಾಜಕೀಯದ ಮೂಲಕ ಸಾಮ್ರಾಜ್ಯವಾದ ಹುಟ್ಟುಹಾಕಿದ ಹೊಸ ಹೊಸ ತಾತ್ವಿಕ ಘೋಷಣೆಗಳಲ್ಲಿ ಟೀನಾ (TINA - ದೆರ್ ಈಸ್ ನೋ ಅಲ್ಟರ್ನೆಟಿವ್), ಅಂದರೆ 'ಬಂಡವಾಳವಾದಕ್ಕೆ ಬೇರೆ ಪರ್ಯಾಯವಿಲ್ಲ'; ಮತ್ತು 'ಕಾರ್ಮಿಕವರ್ಗ ಗತಿಸಿದೆ, ಆದ್ದರಿಂದ ವರ್ಗಹೋರಾಟವನ್ನು ಪ್ರತಿಪಾದಿಸುವ ಮಾರ್ಕ್ಸ್‌ವಾದ ತನ್ನ ಪ್ರಸ್ತುತತೆಯನ್ನು ಕಳೆದುಕೊಂಡಿದೆ' ಎಂಬುವು ಬಹು ಮುಖ್ಯವಾದವುಗಳು. 'ಜಾಗತಿಕ ವ್ಯಾಪಾರ ಸಂಘಟನೆ' (ಡಬ್ಲ್ಯುಟಿಒ), 'ಜಾಗತಿಕ ಆರ್ಥಿಕ ವೇದಿಕೆ' (ವರ್ಲ್ಡ್ ಇಕನಾಮಿಕ್ ಫೋರಂ) ಸಂಘಟನೆಗಳಿಗೆ ಪರ್ಯಾಯವೆಂದು ಹುಟ್ಟಿದ 'ಜಾಗತಿಕ ಸಮಾಜ ವೇದಿಕೆ' (ವರ್ಲ್ಡ್ ಸೋಶಿಯಲ್ ಫೋರಂ) ಮತ್ತು 'ನಾವು 99%' ಎಂಬ ವಾರಾಂತ್ಯದ ಚಳುವಳಿಗಳು 'ಸಮಾಜವಾದ ಸತ್ತಿದೆ, ಬಂಡವಾಳವಾದ ಸೋತಿದೆ' ಹೀಗಾಗಿ ಬಂಡವಾಳವಾದ, ಸಮಾಜವಾದ ಎರಡೂ ಅಲ್ಲದ 'ಟಾಮಾ' ಪರ್ಯಾಯಗಳು (TAMA - ದೇರ್ ಆರ್ ಮೆನಿ ಆಲ್ಟರ್‌ನೇಟಿವ್ಸ್) ಸಾಧ್ಯವಿವೆ ಎಂದು ಪ್ರತಿಪಾದಿಸಿದವು.

ಸೋವಿಯತ್ ನೇತೃತ್ವದಲ್ಲಿ ಸಂಘಟಿತವಾದ ಸಮಾಜವಾದೀ ರಾಜಕೀಯವನ್ನು ಸಮಾಜವಾದೀ ಆಶಯಗಳಿಂದಲೇ ಹಿಮ್ಮೆಟ್ಟಿಸಲು ಜಾಗತಿಕ ಬಂಡವಾಳವಾದ ಕಂಡುಕೊಂಡ 'ಕಲ್ಯಾಣ ರಾಜ್ಯಾಧಿಕಾರ' ('ವೆಲ್‌ಫೇರ್ ಸ್ಟೇಟ್') ಮಧ್ಯಮಮಾರ್ಗದ ಹಳೆಯ ಮಾದರಿ. ಇದು ಯೂರೋಪ್‌ನ ಸಣ್ಣ ಸಣ್ಣ ಬಂಡವಾಳಶಾಹಿ ದೇಶಗಳಲ್ಲಿ ರಾಜಕೀಯವಾಗಿ ಅನುಷ್ಠಾನಗೊಂಡು 21ನೇ ಶತಮಾನದ ಹೊಸ ಸಮಾಜವನ್ನು ಕಟ್ಟಬೇಕೆಂದು ಬಯಸುವ ಮಧ್ಯಮವರ್ಗೀಯ ಜನರ ಆದರ್ಶವಾಗಿದೆ. ಭಾರತದಲ್ಲಿ ಬ್ರಿಟಿಷರು ಭಾರತವನ್ನು ಬಿಟ್ಟುಹೋದಮೇಲೆ ಚಾಲ್ತಿಯಲ್ಲಿದ್ದ ಬಂಡವಾಳವಾದದ ಚೌಕಟ್ಟಿನೊಳಗೇ ಗಾಂಧೀಜಿ, ವೈಜ್ಞಾನಿಕ ಸಮಾಜವಾದಕ್ಕೆ ಪರ್ಯಾಯವಾಗಿ ತಮ್ಮ ಹಿಂದ್ ಸ್ವರಾಜ್ ಮೂಲಕ ಪ್ರತಿಪಾದಿಸಿದ 'ಸಂತ ಸಮಾಜವಾದ', ಮತ್ತು 'ಕಾಲ್ಪನಿಕ ಸಮಾಜವಾದ'ಗಳ ತಾತ್ವಿಕತೆಗಳು ಮಧ್ಯಮಮಾರ್ಗದ ಇತರ ಮಾದರಿಗಳು. 1847 ರಲ್ಲಿ ಮಾರ್ಕ್ಸ್ ಮತ್ತು ಎಂಗೆಲ್ಸ್ ಪ್ರಕಟಿಸಿದ ಕಮ್ಯುನಿಸ್ಟ್ ಪ್ರಣಾಳಿಕೆಯಲ್ಲಿ ಸಮಾಜವಾದದ ಈ ಹುಸಿ ಮಾದರಿಗಳು ಪ್ರಸ್ತಾಪಗೊಂಡಿವೆ.

ಮಧ್ಯಮ ಮಾರ್ಗಿಗಳು ಯಾರು?

ಬಂಡವಾಳವಾದದ ಕೆಡಕುಗಳನ್ನು ದೂರವಿಟ್ಟು ಸಮಾಜವಾದದ ಲಾಭಗಳನ್ನು ಮಾತ್ರ ಹೆಕ್ಕಿಕೊಂಡು ಈ ಎರಡೂ ಅಲ್ಲದ ಹೊಸ ರಾಜಕೀಯ ತಾತ್ವಿಕತೆಯನ್ನು ಆಧರಿಸಿದ ಸಮ ಸಮಾಜವನ್ನು ಕಟ್ಟಬಾರದೇಕೆ? ಎಂಬುದು ಮಧ್ಯಮಮಾರ್ಗಿಗಳ ಇತ್ತೀಚಿನ ಆಶಯ. ಇವರಲ್ಲಿ - ನೈಸರ್ಗಿಕ ಸಂಪತ್ತನ್ನು ಮುಂದಿನ ಜನಾಂಗಕ್ಕಾಗಿ ಉಳಿಸಲು ಹಿತ-ಮಿತವಾಗಿ ಬಳಸಬೇಕೆಂದು ಬಯಸುವ **ಪರಿಸರವಾದಿಗಳು,** ಈ ಪ್ರಪಂಚದ ಇಂದಿನ ವಿಷಮತೆ- ಕಷ್ಟಗಳಿಗೆ ಮನುಷ್ಯರ ಸ್ವಾರ್ಥ ಮತ್ತು ಅತಿ ಆಸೆಯೇ ಕಾರಣವೆಂದು, ದುರಾಸೆಯಿಂದ ದೂರ ಸರಿದು ನಿಸ್ವಾರ್ಥತೆಯನ್ನು ಮೈಗೂಡಿಸಿಕೊಂಡರೆ ಎಲ್ಲರೂ ನೆಮ್ಮದಿಯಿಂದ ಬದುಕಬಹುದಾದ ಜೀವನ ಸಾಧ್ಯವೆಂದು ಪ್ರತಿಪಾದಿಸುವ **ನೈತಿಕವಾದಿಗಳು,** ಶ್ರೀಮಂತರ ಭೋಗಲಾಲಸೆಯಿಂದಾಗಿ ಬಡವರು ಕಷ್ಟಪಡುತ್ತಿದ್ದಾರೆಂದು, ಉಳ್ಳವರು ಭೋಗವನ್ನು ತ್ಯಜಿಸಿ ಜೀವನದಲ್ಲಿ ಸರಳತೆಯನ್ನು ಅಳವಡಿಸಿಕೊಂಡರೆ ಬಡತನ ಮುಂತಾದ ಕಷ್ಟ-ಕಾರ್ಪಣ್ಯಗಳು ಮಾಯವಾಗಿ ಎಲ್ಲರೂ ಸುಖವಾಗಿ ಜೀವಿಸಬಹುದೆಂದು ಪ್ರತಿಪಾದಿಸುವ **ಸರಳ ಜೀವನವಾದಿಗಳು, -** ಇದ್ದಾರೆ. ದೇಹಸುಖ ಮತ್ತು ಭೌತಿಕ ಸಂಪತ್ತಿನ ಮೇಲಿರುವ ಮಮಕಾರವೇ ನಮ್ಮೆಲ್ಲರ ಕಷ್ಟಗಳಿಗೆ ಕಾರಣವಾಗಿದ್ದು, ಎಲ್ಲರೂ ವ್ಯಕ್ತಿಗತವಾಗಿ ಆಧ್ಯಾತ್ಮಿಕ ದೃಷ್ಟಿಕೋನವನ್ನು ಬೆಳೆಸಿಕೊಂಡರೆ ಕಷ್ಟ ಎಂಬುದೇ ಇರುವುದಿಲ್ಲ. ಆದ್ದರಿಂದ ಆತ್ಮ ಅಮರ, ದೇಹ ನಶ್ವರ ಎಂಬ ಅಧ್ಯಾತ್ಮದೃಷ್ಟಿಯನ್ನು ಮೈಗೂಡಿಸಿಕೊಂಡು ಮೂರು ದಿನದ ಈ ನಶ್ವರ ಪ್ರಪಂಚದಲ್ಲಿ ಹೇಗೋ ಕಾಲತಳ್ಳಬೇಕೆಂದು ಉಪದೇಶಿಸುವ **ಅಧ್ಯಾತ್ಮವಾದಿಗಳು,** ಪೂರ್ವಜನ್ಮದ ನಮ್ಮ ನಮ್ಮ ಕರ್ಮಾನುಸಾರ ನಮ್ಮ ಕಷ್ಟ-ಸುಖಗಳು ಒದಗುತ್ತವೆಯೇ ಹೊರತು ಸಿರಿತನ-ಬಡತನಗಳಿಗೆ ಯಾರೂ ಹೊಣೆಯಲ್ಲ. ಸೃಷ್ಟಿಯ ನಿಯಾಮಕನಾದ ಭಗವಂತನಿಗೆ ಶರಣಾಗಿ ಶಾಂತಿ-ಸಹನೆ ಮತ್ತು ಪ್ರೇಮದಿಂದ ಬದುಕುವುದೊಂದೇ ನಮಗಿರುವ ಏಕೈಕ ಮಾರ್ಗ ಎಂದು ನಂಬುವ ಧಾರ್ಮಿಕ ಜನರೂ ಮಧ್ಯಮ ಮಾರ್ಗಿಗಳೇ. ಪ್ರಪಂಚ ಹೇಗಿದೆಯೋ ಹಾಗೆ ಒಪ್ಪಿಕೊಂಡು, ಎದುರಾದ ಕಷ್ಟಗಳನ್ನು ಸವಾಲುಗಳಂತೆ ಸ್ವೀಕರಿಸಿ ಸಂಘರ್ಷವಿಲ್ಲದೆ ಬದುಕುವ ಕಲೆಯನ್ನು ಮೈಗೂಡಿಸಿಕೊಳ್ಳಬೇಕೆಂದು ಸಲಹೆಕೊಡುವ **ಅಸ್ತಿತ್ವವಾದಿಗಳು,** ಯಾರು ಎಷ್ಟೇ ಪ್ರಯತ್ನಿಸಲಿ ಈ ಪ್ರಪಂಚ ಇದ್ದಂತೆಯೇ ಇರುತ್ತದೆ, ಇದನ್ನು ಬದಲಾಯಿಸುವುದು ಯಾರಿಗೂ, ಎಂದಿಗೂ ಸಾಧ್ಯವಿಲ್ಲ. ಆದ್ದರಿಂದ ಇರುವ ಸೌಲಭ್ಯಗಳನ್ನು ಬಳಸಿಕೊಂಡು ಇದ್ದುದರಲ್ಲಿ ಸುಖವಾಗಿ ಬದುಕುವುದೇ ಜಾಣತನವೆಂದು ತಿಳಿಹೇಳುವ **ಅರಾಜಕತಾವಾದಿಗಳೂ** ಮಧ್ಯಮಮಾರ್ಗಿಗಳಲ್ಲಿ ಸೇರಿದ್ದಾರೆ.

ಇವರೆಲ್ಲರೂ ಒಟ್ಟಾರೆಯಾಗಿ ಸಮಾಜವಾದದ ತಾತ್ವಿಕತೆಯನ್ನು ತಿರಸ್ಕರಿಸುತ್ತಾರೆ. ಅದರ ರಾಜಕೀಯ ಅನುಷ್ಠಾನವನ್ನು ದ್ವೇಷಿಸುತ್ತಾರೆ. ಲಲಿತಕಲೆಗಳು, ಸಾಹಿತ್ಯ ಮತ್ತು ಸಿನಿಮಾ ಮುಂತಾದ ಸಾಂಸ್ಕೃತಿಕ ಮತ್ತು ಸೃಜನಶೀಲ ಅಭಿವ್ಯಕ್ತಿ ಮಾಧ್ಯಮಗಳಲ್ಲಿ ಈ ಜನರ ದೃಷ್ಟಿಕೋನ-ಪ್ರತಿಪಾದನೆಗಳಿಗೆ ಹೇರಳ

ಪುಟ 10 ಕ್ಕೆ

ತಮಿಳುನಾಡಿನಲ್ಲಿ ಹೊಸ ಉತ್ತರಾಧಿಕಾರಿ...



ಪ್ರಕಾಶ್ ಕಾರಟ್

ಕಳೆದ ಎರಡು ದಶಕಗಳಲ್ಲಿ ಪ್ರಾದೇಶಿಕ ಪಕ್ಷಗಳಲ್ಲಿ ಕುಟುಂಬ ನಿಯಂತ್ರಣ ಮತ್ತು ವಂಶಪಾರಂರ್ಯ ರಾಜಕಾರಣ ಎದ್ದು ಬಂದಿರುವುದು ಕಾಣುತ್ತಿದೆ. ಅನೇಕ ಪ್ರಾದೇಶಿಕ ರಾಜಕೀಯ ಪಕ್ಷಗಳಲ್ಲಿ ಕುಟುಂಬ ಹಿತಾಸಕ್ತಿಗಳು ವ್ಯಾಪಾರ ಹಿತಾಸಕ್ತಿಗಳೊಂದಿಗೆ ತಳಕು ಹಾಕಿಕೊಂಡು ಅದುವೇ ಮೇಲುಗೈ ಪಡೆದು ಬಿಟ್ಟಿದೆ. ಎಐಎಡಿಎಂಕೆ ಸಂದರ್ಭದಲ್ಲಿ, ಶಶಿಕಲಾ ಅವರು ಜಯಲಅತಾರ ಕುಟುಂಬ ಸದಸ್ಯರಲ್ಲವಾದರೂ ಅವರ ದತ್ತಕ ಕುಟುಂಬ ಸದಸ್ಯರಂತೆ ಇದ್ದರು. ಈ ವಿದ್ಯಮಾನವು ಪ್ರಾದೇಶಿಕ ಪಕ್ಷಗಳ ತತ್ವ–ಸಿದ್ಧಾಂತ ಮತ್ತು ಕಾರ್ಯಕ್ರಮಗಳನ್ನು ಕುಲಗೆಡಿಸುತ್ತಿದೆ.

ತಮಿಳುನಾಡಿನ ಮುಖ್ಯಮಂತ್ರಿಯಾಗಲು ದಿವಂಗತ ಜೆ. ಜಯಲಲಿತಾ ಅವರ ಸಹಾಯಕಿ ಹಾಗೂ ಆಪ್ತೆ ವಿ.ಕೆ. ಶಶಿಕಲಾ ಅಖಿಲ ಭಾರತ ಅಣ್ಣಾ ಡಿಎಂಕೆ ಶಾಸಕಾಂಗ ಪಕ್ಷದ ನಾಯಕಿಯಾಗಿ ಆಯ್ಕೆಯಾಗಿರುವುದು ಜಯಲಲಿತಾ ನಂತರದ ತಮಿಳುನಾಡು ರಾಜಕೀಯ ಆಟದಲ್ಲಿ ಹೊಸ ಅಧ್ಯಾಯವನ್ನು ತೆರೆದಿದೆ.

ಶಾಸಕಾಂಗ ಪಕ್ಷದ ನಾಯಕಿಯಾಗಿ ಶಶಿಕಲಾರ ಹೆಸರನ್ನು ಸೂಚಿಸಿದ, ತನ್ನ ಹುದ್ದೆಗೆ ರಾಜಿನಾಮೆ ನೀಡಿದ ಹಾಲಿ ಮುಖ್ಯಮಂತ್ರಿ ಓ. ಪನ್ನೀರ್‌ಸೆಲ್ವಂ ಇದೀಗ ಈ ಬದಲಾವಣೆಯ ವಿರುದ್ಧ ದನಿಯೆತ್ತಿದ್ದಾರೆ. ಇದರಿಂದ ಸ್ವಲ್ಪ ಮಟ್ಟಿಗಿನ ರಾಜಕೀಯ ಅಲ್ಲೋಲಕಲ್ಲೋಲ ಉಂಟಾಗಿದೆ–ಯಾದರೂ ಪಕ್ಷದ ಶಾಸಕರ ಬಹುಮತದ ಬೆಂಬಲ ತನಗಿರುವುದಾಗಿ ಸಾಬೀತುಪಡಿಸಲು ಸರ್ವಪ್ರಯತ್ನ ನಡೆಸಿದ್ದಾರೆ.

ಶಶಿಕಲಾರನ್ನು ಮುಖ್ಯಮಂತ್ರಿ ಸ್ಥಾನಕ್ಕೆ ಸೂಚಿಸಿದ ರೀತಿಯ ಬಗ್ಗೆ ನಾನಾ ಬಗೆಯ ಪ್ರತಿಕ್ರಿಯೆಗಳು ವ್ಯಕ್ತವಾಗಿದ್ದು ಕೆಲವು ಪ್ರಶ್ನೆಗಳೂ ಎದ್ದಿವೆ. ತಾಂತ್ರಿಕವಾಗಿ ಹೇಳುವುದಾದರೆ, ಶಾಸನಸಭೆಯ ಸದಸ್ಯರಲ್ಲದವರೊಬ್ಬರನ್ನು ತನ್ನ ನಾಯಕರನ್ನಾಗಿ ಆಯ್ಕೆ ಮಾಡಿಕೊಳ್ಳುವ ಹಕ್ಕು ಎಐಎಡಿಎಂಕೆಯ ಶಾಸಕಾಂಗ ಪಕ್ಷಕ್ಕೆ ಇದೆ. ಹೀಗೆ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದವರು ಅಧಿಕಾರ ವಹಿಸಿಕೊಂಡ ಆರು ತಿಂಗಳೊಳಗೆ ಶಾಸನಸಭೆಗೆ ಆಯ್ಕೆಯಾಗಬೇಕೆಂದು ಕಾನೂನು ಹೇಳುತ್ತದೆ.

ಈ ನಿರ್ದಿಷ್ಟ ಪ್ರಕರಣದಲ್ಲಿ ಔಚಿತ್ಯದ ಪ್ರಶ್ನೆ ಉದ್ಭವವಾಗಿದೆ. ಯಾಕೆಂದರೆ ಅಕ್ರಮ ಆಸ್ತಿ ಸಂಪಾದನೆಯ ಮೊಕದ್ದಮೆಯಲ್ಲಿ ಜಯಲಲಿತಾ ಅವರ ಜೊತೆ ಶಶಿಕಲಾ ಅವರೂ ಆರೋಪಿಯಾಗಿದ್ದಾರೆ. ಈ ಮೊಕದ್ದಮೆಯ ಅಪೀಲಿನ ಬಗ್ಗೆ ಸುಪ್ರೀಂಕೋರ್ಟ್ ಇನ್ನೂ ತೀರ್ಪು ನೀಡಿಲ್ಲ. .ವಾಸ್ತವವಾಗಿ, ಶಶಿಕಲಾ ಶಾಸಕಾಂಗ ಪಕ್ಷದ ನಾಯಕಿಯಾಗಿ ಆಯ್ಕೆಗೊಂಡ ಮರುದಿನವೇ ಸುಪ್ರೀಂ ಕೋರ್ಟ್‌ನ ಸಂಬಂಧಪಟ್ಟ ಪೀಠವು ತನ್ನ ತೀರ್ಪನ್ನು ಇನ್ನೊಂದು ವಾರದೊಳಗೆ ಪ್ರಕಟಿಸುವುದಾಗಿ ಘೋಷಿಸಿತು. ಅಧಿಕಾರ ವಹಿಸಿಕೊಳ್ಳುವುದಕ್ಕಿಂತಲೂ ಮುನ್ನ ತಮ್ಮನ್ನು ತಾವು ನಿರ್ದೋಷಿ ಎಂದು ಸಾಬೀತುಪಡಿಸಿಕೊಳ್ಳಲು ಶಶಿಕಲಾ ಕಾಯಬಾರದೇಕೆ ಎಂಬ ನ್ಯಾಯಬದ್ಧವಾದ ಪ್ರಶ್ನೆ ಉದ್ಭವಿಸಿರುವುದು ಈ ಹಿನ್ನೆಲೆಯಲ್ಲಿಯೇ ಆಗಿದೆ.

ಜಯಲಲಿತಾರ ನಿಧನದ ನಂತರ ಓ. ಪನ್ನೀರ್ ಸೆಲ್ವಂ ಅದಾಗಲೇ ಕೆಲವೇ ವಾರಗಳ ಹಿಂದೆಯಷ್ಟೇ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿ ಕೊಂಡಿರುವುದರಿಂದಲೂ ಈ ನಿರ್ದಿಷ್ಟ ಪ್ರಶ್ನೆ ಉದ್ಭವಿಸುತ್ತದೆ. ಪನ್ನೀರ್‌ಸೆಲ್ವಂರ ಆಯ್ಕೆ ಅನಿರೀಕ್ಷಿತವಾದುದೇನೂ ಅಲ್ಲ. ಹಿಂದೆಯೂ ಇವರು ಎರಡು ಬಾರಿ ಜಯಲಲಿತಾ ಅವರ ಸ್ಥಾನಕ್ಕೆ ಬಂದವರು.

ತಮಿಳುನಾಡಿನ ಬಹಳಷ್ಟು ವಿಭಾಗಗಳ ಜನರನ್ನು ಇನ್ನೊಂದು ಹೆಚ್ಚು ವಿಸ್ತಾರವಾದ ಪ್ರಶ್ನೆ ಗಾಢವಾಗಿ ಕಾಡುತ್ತಿದೆ. ಶಶಿಕಲಾ ಬಹುಕಾಲ ಮಾಜಿ ಮುಖ್ಯಮಂತ್ರಿ ಜಯಲಲಿತಾರ ಆಪ್ತ ಸಹಾಯಕಿಯಾಗಿದ್ದರೆನ್ನುವುದು ಗೊತ್ತಿರುವ ವಿಷಯವೇ. ಅವರು ಎಐಎಡಿಎಂಕೆಯಲ್ಲಿ ಯಾವುದೇ ಪ್ರಮುಖ ಹುದ್ದೆ ಹೊಂದಿರಲಿಲ್ಲ ಅಥವಾ ಚುನಾಯಿತ ಸಂಸ್ಥೆಗಳಲ್ಲಿ ಯಾವುದೇ ಸ್ಥಾನವನ್ನೂ ಹೊಂದಿರಲಿಲ್ಲ. ತೆರೆಮರೆಯಲ್ಲಿ ಅಧಿಕಾರ ಚಲಾಯಿಸುತ್ತಿದ್ದ ಜಯಲಲಿತಾ ಮನೆಯ ಕೂಟವೊಂದರ ಭಾಗವಾಗಿದ್ದವರೆಂದು ಶಶಿಕಲಾರನ್ನು ಕಾಣಲಾಗುತ್ತದೆ. ಆಕೆಯ ಕುಟುಂಬದ ಸದಸ್ಯರ ಪಾತ್ರ ಕೂಡ ವಿವಾದಾತ್ಮಕವಾಗಿದೆ.


ಶಶಿಕಲಾ ಕೆಲವೇ ದಿನಗಳ ಅಂತರದಲ್ಲಿ ಬಲುಬೇಗನೆ ಪಕ್ಷದ ನಾಯಕಿ ಮತ್ತು ಮುಖ್ಯಮಂತ್ರಿ ಸ್ಥಾನಕ್ಕೆ ಆಯ್ಕೆಯಾಗಿದ್ದು ಎಐಎಡಿಎಂಕೆಯ ನಿಷ್ಠಾವಂತ ಬೆಂಬಲಿಗರೂ ಸೇರಿದಂತೆ ಜನತೆಯ ದೊಡ್ಡ ವಿಭಾಗದಲ್ಲಿ ಸಹಜವಾಗಿಯೇ ಅಸಂತೃಪ್ತಿಯನ್ನು ಹುಟ್ಟಿಸಿದೆ. ಜಯಲಲಿತಾ ಕೆಲವು ದೋಷಗಳು ಮತ್ತು ಸರ್ವಾಧಿಕಾರಿ ಕಾರ್ಯ ಶೈಲಿಯ ಹೊಂದಿದ್ದರೂ ಆಕೆ ಒಬ್ಬ ಜನನಾಯಕಿಯಾಗಿದ್ದರು. ಎಐಎಡಿಎಂಕೆಯ ಇನ್ನೊಬ್ಬ ಉನ್ನತ ಜನನಾಯಕ ಎಂ.ಜಿ. ರಾಮಚಂದ್ರನ್‌ರ ಪರಂಪರೆಯನ್ನು ಅವರು ಮುಂದುವರಿಸಿದ್ದರು. ಶಶಿಕಲಾ ಅವರು ಎಐಎಡಿಎಂಕೆ ಬೆಂಬಲಿಗರ ಸ್ವೀಕಾರವನ್ನು ಮತ್ತು ಜನಪ್ರಿಯತೆಯನ್ನು ಸಾಬೀತುಪಡಿಸಬೇಕಾಗಿದೆಯಷ್ಟೆ.

ಸಂಸದೀಯ ಪ್ರಜಾಪ್ರಭುತ್ವದಲ್ಲಿ ರಾಜಕೀಯ ಪಕ್ಷಗಳ ಮೇಲೆ ಪರಿಣಾಮ ಬೀರುವಂಥ ಇನ್ನೊಂದು ಅಂಶವೂ ಇದೆ. ಕಳೆದ ಎರಡು ದಶಕಗಳಲ್ಲಿ ಪ್ರಾದೇಶಿಕ ಪಕ್ಷಗಳಲ್ಲಿ ಕುಟುಂಬ ನಿಯಂತ್ರಣ ಮತ್ತು ವಂಶಪಾರಂರ್ಯ ರಾಜ–ಕಾರಣ ಎದ್ದು ಬಂದಿರುವುದು ಕಾಣುತ್ತಿದೆ. ಅನೇಕ ಪ್ರಾದೇಶಿಕ ರಾಜಕೀಯ ಪಕ್ಷಗಳಲ್ಲಿ ಕುಟುಂಬ ಹಿತಾಸಕ್ತಿಗಳು ವ್ಯಾಪಾರ ಹಿತಾಸಕ್ತಿಗಳೊಂದಿಗೆ ತಳಕು ಹಾಕಿಕೊಂಡು ಅದುವೇ ಮೇಲುಗೈ ಪಡೆದು ಬಿಟ್ಟಿದೆ. ಪಂಜಾಬ್ ಇದಕ್ಕೊಂದು ಪ್ರಧಾನ ಉದಾಹರಣೆ. ಅಲ್ಲಿನ ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿ ಅಪ್ಪ–ಮಗ ಆಗಿದ್ದು ಅವರೇ ಅಕಾಲಿ ದಳದ ಪ್ರಮುಖ ನಾಯಕರಾಗಿದ್ದಾರೆ.

ಎಐಎಡಿಎಂಕೆ ಸಂದರ್ಭದಲ್ಲಿ, ಶಶಿಕಲಾ ಅವರು ಜಯಲಲಿತಾರ ಕುಟುಂಬ ಸದಸ್ಯರಲ್ಲವಾದರೂ ಅವರ ದತ್ತಕ ಕುಟುಂಬ ಸದಸ್ಯರಂತೆ ಇದ್ದರು. ಈ ವಿದ್ಯಮಾನವು ಪ್ರಾದೇಶಿಕ ಪಕ್ಷಗಳ ತತ್ವ–ಸಿದ್ಧಾಂತ ಮತ್ತು ಕಾರ್ಯಕ್ರಮಗಳನ್ನು ಕುಲಗೆಡಿಸಲು ಕೊಡುಗೆ ನೀಡುತ್ತಿದೆ.

ಪಕ್ಷ ಆಧರಿತ ಪ್ರಜಾಪ್ರಭುತ್ವ ವ್ಯವಸ್ಥೆ ಮತ್ತು ಸಿದ್ಧಾಂತ ಆಧರಿತ ರಾಜಕೀಯದ ಆರೋಗ್ಯವನ್ನು ಮರುಸ್ಥಾಪಿಸಬೇಕೆಂದರೆ ಈ ಪ್ರವೃತ್ತಿಯನ್ನು ಹತ್ತಿಕ್ಕಬೇಕಾಗಿದೆ ಮತ್ತು ಪಕ್ಷಗಳು ಪ್ರಜಾಸತ್ತಾತ್ಮಕ ಕಾರ್ಯನಿರ್ವಹಣೆಯ ನಿಯಮಗಳಿಗೆ ಬದ್ಧರಾಗಬೇಕಾಗುತ್ತದೆ.


ಅನು: ವಿಶ್ವ



ಕೃಪೆ: ಸಂದೀಪ ಅಧ್ವರ್ಯು, ಟೈಮ್ಸ್ ಆಫ್ ಇಂಡಿಯ

ಇಎಂಎಸ್ ಮಂತ್ರಿಮಂಡಲವನ್ನು ವಜಾ ಮಾಡುವಲ್ಲಿ ಸಿಐಎ ಪಾತ್ರ– 60 ವರ್ಷಗಳ ನಂತರ ದೃಢಪಡಿಸಿದ ಸಿಐಎ ದಾಖಲೆಗಳು

ಅಮೆರಿಕ ಸಂಯುಕ್ತ ಸಂಸ್ಥಾನಗಳ ಸರಕಾರ ಇತ್ತೀಚೆಗೆ ತನ್ನ ಗುಪ್ತಚರ ಸಂಸ್ಥೆ ಸಿಐಎ ಮತ್ತು ರಾಷ್ಟ್ರೀಯ ಭದ್ರತಾ ಮಂಡಳಿ(ಎನ್‌ಎಸ್‌ಸಿ)ಯ ಅರವತ್ತು ವರ್ಷಗಳ ಹಿಂದಿನ ಕಡತಗಳನ್ನು ಬಿಡುಗಡೆ ಮಾಡಿದೆ. ಇವುಗಳಲ್ಲಿ 1957–59ರ ಅವಧಿಯಲ್ಲಿ ಕೇರಳದಲ್ಲಿ ಅದರ ಚಟುವಟಿಕೆಗಳನ್ನು ಕುರಿತಾದ ಕಡತಗಳೂ ಇವೆ. ಇದು ಇಎಂಎಸ್ ನಂಬೂದಿರಿಪ್ಪಾಡ್ ನೇತೃತ್ವದ ಮೊದಲ ಕಮ್ಯುನಿಸ್ಟ್ ಸರಕಾರದ ಆಡಳಿತ ಅವಧಿ ಎನ್ನುವುದನ್ನು ನೆನಪಿಸಿಕೊಳ್ಳಬಹುದು.



Approved For Release 2002/01/30 : CIA-RDP79R00890A000800070016-5

NSC BRIEFING

9 May 1957

INDIA'S FIRST COMMUNIST STATE GOV'T

I. Although Nehru's Congress Party retained firm control over national parliament and won majorities in 11 out of India's 13 State Assemblies in nation-wide Mar. elections, Party lost ground in many State contests and, in state of Kerala--India's smallest (map)--Indian Commie coalition won outright control.

A. Commies face substantial problems. Kerala is one of India's poorest states, with dense population (14 million), few resources and industry, and a food deficit.

B. Commies working hard to build popularity.

1. They have cut own pay, stayed eviction of peasants, attacked corruption, solicited private capital.

C. If Commies play cards right, gains could be more than local.

1. Economic improvement in Kerala would have nation-wide appeal.

2. Local policy of moderation would tend to make Commies more acceptable elsewhere in India.

II. Meanwhile, India Gov't intends to fight Commies hard.

A. However, Gov't cannot force Commies out of office unless breakdown of "law and order" occurs.

B. Meanwhile, people of Kerala seem willing to grant Commies at least a year to prove themselves.

C. In interim, we face embarassing problem regarding US-sponsored activities in ~~State~~ KERALA.

Approved For Release 2002/01/30 : CIA-RDP79R00890A000800070016-5

1957ರಲ್ಲಿ ಚುನಾವಣೆಯಲ್ಲಿ ಸ್ಪಷ್ಟ ಜನಾದೇಶವನ್ನು ಪಡೆದು ರಚಿಸಿದ ಸರಕಾರವನ್ನು ಕೇಂದ್ರದ ಆಳುವ ಪಕ್ಷ ಕಾನೂನು–ವ್ಯವಸ್ಥೆಯ ಪ್ರಶ್ನೆಗಳನ್ನು ಸೃಷ್ಟಿಸಿ ಸಂವಿಧಾನದ 356ನೇ ಕಲಮನ್ನು ಬಳಸಿ ವಜಾ ಮಾಡಿತು. ಹೀಗೆ ಕಾನೂನು–ವ್ಯವಸ್ಥೆಯ ಸಮಸ್ಯೆಗಳನ್ನು ಸೃಷ್ಟಿಸುವಲ್ಲಿ ಸಿಐಎ ನ ನೇರ ಪಾತ್ರವಿತ್ತು ಎಂದು ಈ ಕಡತಗಳು ದೃಢಪಡಿಸುತ್ತಿವೆ.

1957ರಲ್ಲಿ ಕೇರಳ ವಿಧಾನಸಭೆಯ ಮೊದಲ ಚುನಾವಣೆಗಳಲ್ಲಿ ಕಮ್ಯುನಿಸ್ಟ್ ಪಕ್ಷದ ಗೆಲುವು ಅಮೆರಿಕಾದ ಆಳುವ ವಲಯಗಳಲ್ಲಿ ಗಾಬರಿ ಉಂಟು ಮಾಡಿತ್ತು ಎಂದು ಈ ಕಡತಗಳು ತಿಳಿಸುತ್ತವೆ. ಮೇ 9, 1957ರ ಎನ್‌ಎಸ್‌ಸಿ ಟಿಪ್ಪಣಿ ಮೂರು ಅಂಶಗಳನ್ನು ಪಟ್ಟಿ ಮಾಡುತ್ತದೆ.

ಮೊದಲನೆಯದಾಗಿ, ಕಮುಇನಿಸ್ಟರು ಸಾಕಷ್ಟು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ, ಏಕೆಂದರೆ ಕೇರಳ ಅತ್ಯಂತ ಭಾರತದ ಬಡರಾಜ್ಯಗಳಲ್ಲಿ ಒಂದು, ದಟ್ಟವಾದ ಜನಸಂಖ್ಯೆ(1.4 ಕೋಟಿ) ಹೊಂದಿರುವ ಹೆಚ್ಚು ಸಂಪನಮೂಲಗಳು, ಉದ್ದಿಮೆಗಳಿಲ್ಲದ, ಆಹಾರ ಕೊರತೆಯ ರಾಜ್ಯ.

ಎರಡನೆಯದಾಗಿ, ಕಮ್ಯುನಿಸ್ಟರು ಜನಪ್ರಿಯತೆ ಗಳಿಸಲು ಬಹಳ ಶ್ರಮ ಪಟ್ಟು ಕೆಲಸ ಮಾಡುತ್ತಿದ್ದಾರೆ, ತಮ್ಮ ಸಂಬಳ ಕಡಿತ ಮಾಡಿಕೊಂಡಿದ್ದಾರೆ, ರೈತರನ್ನು ಒಕ್ಕಲೆಬ್ಬಿಸುವುದನ್ನು ತಡೆದಿದ್ದಾರೆ, ಭ್ರಷ್ಟಾಚಾರದ ಮೇಲೆ ದಾಳಿ ಮಾಡುತ್ತಿದ್ದಾರೆ..

ಮೂರನೆಯದಾಗಿ, ಕೇರಳದಲ್ಲಿ ಆರ್ಥಿಕ ಪರಿಸ್ಥಿತಿ ಉತ್ತಮಗೊಂಡರೆ ಅದು ರಾಷ್ಟ್ರವ್ಯಾಪಿ ಪ್ರಭಾವ ಬೀರುತ್ತದೆ. ಮತ್ತು ಅತಿರೇಕವಿಲ್ಲದ ಸ್ಥಳೀಯ ಧೋರಣೆಗಳು ಕಮ್ಯುನಿಸ್ಟರನ್ನು ಭಾರತದ ಇತರೆಡೆಗಳಲ್ಲಿ ಹೆಚ್ಚು ಸ್ವೀಕಾರಾರ್ಹಗೊಳಿಸಬಹುದು.

ಇದನ್ನು ತಪ್ಪಿಸಬೇಕು, ಭಾರತ ಸರಕಾರ ಇವರ ವಿರುದ್ಧ ಕ್ರಮ ವಹಿಸಲು ಬಹಳ ಶ್ರಮಿಸುತ್ತಿದ್ದರೂ, ಕಾನೂನು ವ್ಯವಸ್ಥೆಯ ಪರಿಸ್ಥಿತಿ ಸೃಷ್ಟಿಯಾಗದೆ ಭಾರತದ ಸರಕಾರ ಈ ರಾಜ್ಯಸರಕಾರವನ್ನು ವಜಾ ಮಾಡುವಂತಿಲ್ಲ. ಇದಕ್ಕೆ ತಮ್ಮ ಗುಪ್ತಚರ ಏಜೆಂಸಿಗಳನ್ನು ಬಳಸುವುದೇ ಸೂಕ್ತ ಎಂಬ ನಿರ್ಧಾರಕ್ಕೆ ಈ ಟಿಪ್ಪಣಿ ಬಂದಿತ್ತು. ಅದರ ಪ್ರಕಾರ ಕಾಂಗ್ರೆಸ್ ಮತ್ತು ಇತರ ರಾಜಕೀಯ ಗುಂಪುಗಳಿಗೆ ಕಾನೂನು–ವ್ಯವಸ್ಥೆಯನ್ನು ಬಿಗಡಾಯಿಸುವ ಕಾರ್ಯಕ್ರಮಗಳಿಗಾಗಿ ಹಣ ಒದಗಿಸುವಲ್ಲಿ ಸಿಐಎಯನ್ನು ಬಳಸಲು ನಿರ್ಧರಿಸಲಾಯಿತು. ಆಗ ಭಾರತದಲ್ಲಿ ಅಮೆರಿಕಾದ ರಾಯಭಾರಿಯಾಗಿದ್ದ ಎಲ್ಸ್‌ವರ್ತ್ ಬಂಕರ್ (ಆಗಿನ ಅವಿಭಜಿತ) ಸಿಪಿಐ ಬಗ್ಗೆ ಮಾಹಿತಿಗಳನ್ನು ಒದಗಿಸಲು ತಾನು ಭಾರತೀಯ ಗುಪ್ತಚರ ಸಂಸ್ಥೆಯೊಂದಿಗೆ ಕೆಲಸ ಮಾಡಿದೆ, ನೆಹರೂ ಸಂಪುಟದ ಕೃಷಿ ಮಂತ್ರಿ ಎಸ್.ಕೆ.ಪಾಟೀಲ್‌ಗೆ ಹಣ ಒದಗಿಸಲಾಯಿತು, ಆತ ಅದನ್ನು ಕಾನೂನು ವ್ಯವಸ್ಥೆಯ ಸಮಸ್ಯೆ ಸೃಷ್ಟಿಸಲು ವೈಯಕ್ತಿಕವಾಗಿ ಹಂಚುವ ಕೆಲಸ ಮಾಡಿದರು ಎಂದು ಹೇಳಿದ್ದಾರೆ.

1973ರಿಂದ 1975ರ ವರೆಗೆ ಭಾರತದಲ್ಲಿ ಅಮೆರಿಕನ್ ರಾಯಭಾರಿಯಾಗಿದ್ದ ಡೇನಿಯಲ್ ಪ್ಯಾಟ್ರಿಕ್ ಮೊಯ್ನಿಹಾನ್ "ನಾವು ಎರಡು ಬಾರಿ, ಕೇವಲ ಎರಡು ಬಾರಿ, ಒಂದು ರಾಜಕೀಯ ಪಕ್ಷಕ್ಕೆ ಹಣ ಒದಗಿಸಿ ಭಾರತದ ರಾಜಕಾರಣದಲ್ಲಿ ಹಸ್ತಕ್ಷೇಪ ಮಾಡಿದ್ದೇವೆ. ಎರಡೂ ಬಾರಿಯೂ ರಾಜ್ಯ ಚುನಾವಣೆಗಳಲ್ಲಿ ಕಮ್ಯುನಿಸ್ಟ್ ವಿಜಯ ಸಂಭವಿಸಬಹುದಾದ ಸಂದರ್ಭದಲ್ಲಿ ಇದನ್ನು ಮಾಡಿದೆವು, ಒಮ್ಮೆ ಕೇರಳದಲ್ಲಿ, ಇನ್ನೊಮ್ಮೆ ಪಶ್ಚಿಮ ಬಂಗಾಲದಲ್ಲಿ" ಎಂದು ತನ್ನ ಆತ್ಮಕತೆಯಲ್ಲಿ ಹೇಳಿರುವುದು ಈಗಾಗಲೇ ಪ್ರಕಟವಾಗಿರುವ ಸಂಗತಿ. ಅಮೆರಿಕಾ ಕಮ್ಯುನಿಸ್ಟ್ ಪಕ್ಷದ ವಿರುದ್ಧ ಹಣ ಒದಗಿಸಿದ್ದು ಕಾಂಗ್ರೆಸಿಗೆ, ಅದು ಆಗ ಕೇಂದ್ರದಲ್ಲಿ ಮತ್ತು ಹೆಚ್ಚಿನ ರಾಜ್ಯಗಳಲ್ಲಿ ಆಳುವ ಪಕ್ಷವಾಗಿತ್ತು ಎಂಬುದನ್ನೂ ಇಲ್ಲಿ ನೆನಪಿಸಿಕೊಳ್ಳಬಹುದು.

ಭಾರತದಲ್ಲಿ ಕಮ್ಯುನಿಸ್ಟರ ಪ್ರಭಾವ ಹೆಚ್ಚಿದರೆ ದೂರದ ಅಮೆರಿಕನ್ ಪ್ರಜಾಪ್ರಭುತ್ವ ಸರಕಾರಕ್ಕೆ ಏಕೆ ಗಾಬರಿ? ಇದಕ್ಕೆ ಉತ್ತರ, ಆಮೂಲಕ ಅಮೆರಿಕಾದ ಆಳರಸರ ಸಾಮ್ರಾಜ್ಯಶಾಹಿ ಸ್ವರೂಪವನ್ನು ಕಾಣಲಾರದವರ ಕಣ್ಣುಗಳನ್ನು ತೆರೆಸುವ ವಿವರಗಳು ಈ ಕಡತಗಳಿಲ್ಲಿವೆ ಎಂದು ವರದಿಯಾಗಿದೆ.

ನಗದುರಹಿತ–ಡಿಜಿಟಲ್ ಆರ್ಥಿಕದತ್ತ ಅಂತರ್ರಾಷ್ಟ್ರೀಯ ಹಣಕಾಸು ಕಾರ್ಪೊರೇಟ್‌ಗಳ ಲಾಭಕ್ಕಾಗಿ

(ಸಿಪಿಐ(ಎಂ) ಪುಸ್ತಿಕೆ 'ನಗದು ಸಮರ'ದ ಆಯ್ದ ಭಾಗ)



ನೋಟು ರದ್ದತಿಯ ಕ್ರಮ ನಗದುರಹಿತ–ಡಿಜಿಟಲ್ ಆರ್ಥಿಕದತ್ತ ದೇಶವನ್ನು ಬಲವಂತವಾಗಿ ತಳ್ಳುವ ಪ್ರಯತ್ನದ ಭಾಗ. ಇದರಿಂದ ಒಂದು ಕಡೆ ವೀಸಾ, ಮಾಸ್ಟರ್ ಕಾರ್ಡ್ ನಂತಹ ಅಂತರ್ರಾಷ್ಟ್ರೀಯ ಹಣಕಾಸು ಸಂಸ್ಥೆಗಳ ಹಾಗೂ ಪೇಟಿಎಂ, ಮೊಬಿಕ್ವಿಕ್ ನಂತಹ ಮೊಬೈಲ್ ಹಣಕಾಸು ಸೇವಾ ಕಂಪನಿಗಳ ವಹಿವಾಟು, ಲಾಭ ಹಲವು ಪಟ್ಟು ಏರಿದೆ. ಬ್ಯಾಂಕು, ಮೊಬೈಲ್ ಹಣಕಾಸು ವಹಿವಾಟಿಗೆ ಆಧಾರ್ ಜೋಡಿಸುವ ಮೂಲಕ ಒಬ್ಬ ವ್ಯಕ್ತಿಯ ಯಾವುದರ ಮೇಲೆ ಖರ್ಚು ಮಾಡುತ್ತಾನೆ ಎಂದು ತಿಳಿಯುವ, ಆ ಮೂಲಕ ಆತನನ್ನು ತಮಗೆ ಬೇಕಾದ ಸರಕು/ಸೇವೆಗೆ ಆಕರ್ಷಿಸಿ ಕೊಳ್ಳುಬಾಕತನ ಹೆಚ್ಚಿಸುವುದೂ ಅದರ ಉದ್ದೇಶ. ನೋಟು ರದ್ದತಿ ಮಾಡಿದ ವಿಧಾನದ ಅಧ್ವಾನಗಳನ್ನು ರಿಝರ್ವ್ ಮತ್ತು ಭಾರತೀಯ ಬ್ಯಾಂಕುಗಳ ಮೂತಿಗೆ ಹಚ್ಚಿ ಅವುಗಳ ಹೆಸರು ಕೆಡಿಸಿ ಅವುಗಳನ್ನು ಅಂತರ್ರಾಷ್ಟ್ರೀಯ ಬ್ಯಾಂಕುಗಳ ಕೈಗೆ ಒಪ್ಪಿಸುವುದು ಸರಕಾರದ ಉದ್ದೇಶವಿದ್ದಂತೆ ಕಾಣುತ್ತದೆ. ಜನಗಳ ಹಣ ಹೀರಿ ಬ್ಯಾಂಕುಗಳ ಬ್ಯಾಲೆನ್ಸ್ ಶೀಟುಗಳನ್ನು ಸ್ವಚ್ಛಗೊಳಿಸುವುದಕ್ಕೂ ನೋಟು ರದ್ದತಿಯ ಮೂಲಕ ಪ್ರಯತ್ನಿಸಲಾಗಿದೆ. ನೋಟು ರದ್ದತಿಯ ಅಘೋಷಿತ ಉದ್ದೇಶಗಳಲ್ಲಿ ಒಂದಾದ 'ಡಿಜಿಟಲ್ ಆರ್ಥಿಕ'ದತ್ತ ದೇಶವನ್ನು ಬಲವಂತವಾಗಿ ತಳ್ಳುವ ಬಗ್ಗೆ ಒಂದು ಲೇಖನ.

ಹಣಕಾಸು ಮಂತ್ರಿ ಡಿಸೆಂಬರ್ 8ರಂದು "ಭಾರತ ಸರಕಾರ–ಕ್ಕೆ ಸಂಬಂಧಪಟ್ಟಂತೆ ಹೇಳುವುದಾದರೆ, ಪೇಪರ್ ಕರೆನ್ಸಿಯ ಪ್ರಮಾಣ ಇಳಿಯಬೇಕು, ಬಿಸಿನೆಸ್‌ಗಳ ಬಹಳಷ್ಟು ಭಾಗ ಪರ್ಯಾಯವಾದ ಡಿಜಿಟಲ್ ಅಥವ ಚೆಕ್ ವಿಧಾನದಲ್ಲಿರಬೇಕು ಎಂಬುದು ನಮ್ಮ ಆಶಯಗಳಲ್ಲಿ ಒಂದು ಎಂಬುದು ಸ್ವಯಂವೇದ್ಯ" ಎಂದಿದ್ದರು. ಡಿಸೆಂಬರ್ 29ರಂದು ಅವರು ಇದನ್ನು ಮತ್ತೆ ಹೇಳಿದರು.

ನಗದುರಹಿತ ಅಥವ ಡಿಜಿಟಲ್ ಆರ್ಥಿಕಕ್ಕೆ ಇಲೆಕ್ಟ್ರಾನಿಕ್ ಸಾಧನಗಳ ಮೂಲಕ ನಡೆಯುವ ಆರ್ಥಿಕ ವ್ಯವಸ್ಥೆಯಾಗಿ ಪರಿವರ್ತನೆಯಾಗುವ ಭಾರತದ ಮಾರುಕಟ್ಟೆಯ ಬಾಗದ ಮೌಲ್ಯ 2020ರ ವೇಳೆಗೆ 550 ಶತಕೋಟಿ ಡಾಲರುಗಳು(3.4ಲಕ್ಷ ಕೋಟಿ ರೂ.ಗಳು) ಎಂದು ಅಂ–ದಾಜು ಮಾಡಲಾಗಿದೆ. ಇದು ವಿಸಾ, ಮಾಸ್ಟರ್‌ಕಾರ್ಡ್‌ನಂತಹ ಕಾರ್ಡ್ ಕಂಪನಿಗಳಿಗೆ ಮತ್ತು ಹಲವು ಅಂತರ್ರಾಷ್ಟ್ರೀಯ ಹಣಕಾಸು ಸಂಸ್ಥೆಗಳಿಗೆ ಕೂಡ ದಕ್ಕುವ ಮಾರುಕಟ್ಟೆ. ಭಾರತದಲ್ಲಿ ಡಿಜಿಟಲ್ ಆರ್ಥಿಕ–ಕ್ಕೆ ಇಷ್ಟೊಂದು ದೊಡ್ಡ ಮಾರುಕಟ್ಟೆ ಇರುವುದರಿಂದಲೇ ಅಮೆರಿಕ ಮತ್ತು ಚೀಣಾದಿಂದ ಅಪಾರ ಹೂಡಿಕೆಗಳು ಹಣಕಾಸು ವ್ಯವಹಾರದ ಬಿಸಿನೆಸ್‌ಗೆ ಪ್ರವೇಶಿಸುತ್ತಿವೆ.

ವೀಸಾ, ಮಾಸ್ಟರ್ ಕಾರ್ಡ್ ಸ್ವಾಗತ

ನಮ್ಮ ದೇಶದಲ್ಲಿ ನೋಟುರದ್ಧತಿಯನ್ನು ಪ್ರಕಟಿಸಿದ ಕೂಡಲೇ ಅದನ್ನು ಸ್ವಾಗತಿಸಿದ ಮೊದಲಿಗರಲ್ಲಿ ವಿಸಾ ಮತ್ತು ಮಾಸ್ಟರ್‌ಕಾರ್ಡ್‌ಗಳಿದ್ದವು ಎಂಬುದನ್ನು ಗಮನಿಸಬೇಕು. ನಿಜಸಂಗತಿಯೆಂದರೆ, ನವಂಬರ್ ಅಂತ್ಯದ ವೇಳೆಗೆ ಈ ಎರಡು ಜಾಲಗಳು ನಮ್ಮ ದೇಶವನ್ನು ಈ ರೀತಿಯ ಬದಲಾವಣೆಯತ್ತ ತಳ್ಳಲಾರಂಭಿಸಿದವು ಎಂದು ಮಾಧ್ಯಮಗಳು ವರದಿ ಮಾಡಿವೆ. ಇದು ಆಶ್ಚರ್ಯಕರ ಸಂಗತಿಯೇನೂ ಅಲ್ಲ. ಈ ಎರಡೂ ಜಾಲಗಳಿಗೆ ನೋಟುರದ್ಧತಿಯಿಂದ ಬಹಳಷ್ಟು ಗಳಿಕೆಯಾಗಿದೆ. ಕೆಲವು ವರದಿಗಳ ಪ್ರಕಾರ "ಈ ಅವಧಿಯಲ್ಲಿ 1.58 ಕೋಟಿ ಮಾಸ್ಟರ್‌ಕಾರ್ಡ್ ಡೆಬಿಟ್ ಕಾರ್ಡ್‌ಗಳನ್ನು ಬಳಸಲಾಯಿತು. ಇದು ನವಂಬರ್‌ನ 1 ರಿಂದ 8 ರವರೆಗಿನ ಬಳಕೆಗೆ ಹೋಲಿಸಿದರೆ 76.84 ಶೇ.ದಷ್ಟು ಹೆಚ್ಚು. ಮಾಸ್ಟರ್‌ಕಾರ್ಡ್ ಕ್ರೆಡಿಟ್ ಕಾರ್ಡ್‌ಗಳ ವ್ಯವಹಾರಗಳಲ್ಲಿ 24ಶೇ.ದಷ್ಟು ಹೆಚ್ಚಳವಾಗಿ ಅದು 57.31 ಲಕ್ಷಕ್ಕೆ ಏರಿತು. 'ವಿಸಾ'ದ ಡೆಬಿಟ್ ಕಾರ್ಡ್ ಮತ್ತು ಪ್ರಿ–ಪೈಡ್ ವ್ಯವಹಾರಗಳಲ್ಲಿ 93ಶೇ. ಹೆಚ್ಚಳವಾಯಿತು." ನಮ್ಮ ಪ್ರತಿಯೊಂದು ವಿಸಾ ಮತ್ತು ಮಾಸ್ಟರ್‌ಕಾರ್ಡ್ ವ್ಯವಹಾರದಿಂದ 2–3ಶೇ. ವ್ಯವಹಾರ ಶುಲ್ಕ ಈ ಎರಡು ಅಮೆರಿಕನ್ ಕಾರ್ಪೊರೇಟ್‌ಗಳಿಗೆ ಸಿಗುತ್ತವೆ. ಅಂದರೆ ಎಷ್ಟು ಲಕ್ಷ ಕೋಟಿ ರೂಪಾಯಿಗಳು ನಮ್ಮಿಂದ ಅಮೆರಿಕಾಕ್ಕೆ ಹರಿದು ಹೋಗುತ್ತದೆ ಎಂಬುದನ್ನು ಊಹಿಸಿ.

ಅದೇ ರೀತಿಯಲ್ಲಿ ಪೇಟಿಎಂ ಬಳಸುವವರ ಸಂಖ್ಯೆ ಈ ಅವಧಿಯಲ್ಲಿ 17 ಕೋಟಿಯಷ್ಟು ಹೆಚ್ಚಿ ಅದಕ್ಕೆ ಸೂಪರ್ ಲಾಭಗಳನ್ನು ಒದಗಿಸಿದೆ. ಕಳೆದ ಎರಡು ತಿಂಗಳೊಳಗೆ ತನ್ನ ವ್ಯವಹಾರಗಳು ಬಹಳಷ್ಟ ವಿಸ್ತರಿಸಿವೆ ಎಂದು ಆ ಕಂಪನಿಯೇ ಪ್ರಕಟಿಸಿದೆ. ಪ್ರತಿದಿನ 70ಲಕ್ಷ ವ್ಯವಹಾರಗಳು ಅದರ ಮೂಲಕ ನಡೆಯುತ್ತಿವೆಯಂತೆ. ಅಂದರೆ ಸುಮಾರು 250ಶೇ. ಹೆಚ್ಚಳ. ಇಂತಹ ಸೂಪರ್‌ಲಾಭಗಳನ್ನು ಗಿಟ್ಟಿಸಲು ಅವಕಾಶ ಕಲ್ಪಿಸಿದ್ದಕ್ಕೆ ಕೃತಜ್ಞತೆ ಸಲ್ಲಿಸಲೆಂದೇ ಪೇಟಿಯಂ ತನ್ನ ಜಾಹೀರಾತಿನಲ್ಲಿ ಮೋದಿಯವರ ಫೋಟೋವನ್ನು ಹಾಕಿಕೊಂಡದ್ದು.

"ನಗದಿಗಿಂತ ಉತ್ತಮ ಮಿತ್ರಕೂಟ"

ಪೇಟಿಎಂ ನೊಂದಿಗೆ ಇತರ ಡಿಜಿಟಲ್ ವ್ಯಾಲೆಟ್(ಇಲೆಕ್ಟ್ರಾನಿಕ್ ಜೋಳಿಗೆ?) ಕಂಪನಿಗಳು ಕೂಡ ಮಾರುಕಟ್ಟೆ ಪ್ರವೇಶಿಸಿವೆ. ಜಪಾನೀ ಹೂಡಿಕೆದಾರರು ಮತ್ತು ಟ್ರೀಲೈನ್‌ಏಶ್ಯ ಎಂಬಂತಹ ಹೆಜ್‌ಫಂಡ್(ಪಣಭದ್ರ) ಕಂಪನಿಗಳು ಮೊಬಿಕ್ವಿಕ್ ಎಂಬ ಡಿಜಿಟಲ್ ಜೋಳಿಗೆ ಕಂಪನಿಗೆ ಈ ಅವಧಿಯಲ್ಲೇ 155 ಕೋಟಿ ರೂ ಎತ್ತಿವೆಯಂತೆ. ಇನ್ನೊಂದು ಫ್ರೀಚಾರ್ಜ್ ಎಂಬ ಕಂಪನಿಯ ದೈನಂದಿನ ವ್ಯವಹಾರಗಳಲ್ಲಿ 12 ಪಟ್ಟು ಹೆಚ್ಚಳವಾಗಿದೆಯಂತೆ. ಈ ಕಂಪನಿಯನ್ನು ಸ್ನಾಪ್‌ಡೀಲ್ ಎಂಬ ಇ–ಕಾಮರ್ಸ್ (ಅಂದರೆ ಇಲೆಕ್ಟ್ರಾನಿಕ ಮಾಧ್ಯಮಗಳ ಮೂಲಕ ವ್ಯಾಪಾರ ನಡೆಸುವ) ಕಂಪನಿ ಖರೀದಿಸಿತು. ಅಮೆರಿಕನ್ ಎಕ್ಸ್‌ಪ್ರೆಸ್, ಸಿಸ್ಕೊ ಮತ್ತು ಕೆಲವು ಚೀನೀ ಹೂಡಿಕೆದಾರರು ಇದಕ್ಕೆ ಹಣ ಹಾಕಿದ್ದಾರೆ.

ಭಾರತ ಸರಕಾರ ಯುಎಸ್‌ಏಡ್, ವಿಸಾ, ಮಾಸ್ಟರ್‌ಕಾರ್ಡ್, ಸಿಟಿ ಮತ್ತು ಇತರ ಹಲವು ಕಾರ್ಪೊರೇಟ್‌ಗಳೊಂದಿಗೆ ಭಾಗೀದಾರಿ–ಕೆಗೆ ಇಳಿದಿದೆ. ಇವನ್ನೆಲ್ಲ ಒಟ್ಟಾಗಿ 'ಬೆಟರ್ ದೇನ್ ಕ್ಯಾಶ್ ಅಲಯಂಸ್'(ಅಂದರೆ, ನಗದಿಗಿಂತ ಉತ್ತಮ ಮಿತ್ರಕೂಟ) ಎಂದು ಹೆಸರಿಸಲಾಗಿದೆ. ಈ ಮಿತ್ರಕೂಟದ ಭಾಗವಾಗಿ ಯುಎಸ್‌ಏಡ್ ನಮ್ಮ ದೇಶದಲ್ಲಿ ಜುಲೈ–ಸಪ್ಟಂಬರ್ 2015ರಲ್ಲಿ ಒಂದು ಸಂಶೋಧನೆ ನಡೆಸಿತು. ಅದರ ಉದ್ದೇಶ ಡಿಜಿಟಲ್ ಪಾವತಿಗಳ ಬಳಕೆಯನ್ನು, ವಿಶೇಷವಾಗಿ ಕಡಿಮೆ ಆದಾಯದ ಬಳಕೆದಾರರ ನಡುವೆ ಹೆಚ್ಚಿಸಲು ಆಧಾರವನ್ನು ಸಿದ್ಧಪಡಿಸುವುದು. **ಬಹುಶಃ ಇವೆಲ್ಲ ನವಂಬರ್ 8ರ ಭವ್ಯ ಪ್ರಕಟಣೆಗೆ ಮಾಡಿದ್ದ ಆಮೂಲಾಗ್ರ ಸಿದ್ಧತೆಗಳಿರಬೇಕು.**

ಡಿಜಿಟಲ್ ಆರ್ಥಿಕದತ್ತ ತಳ್ಳುವ ಹುನ್ನಾರ

"ಕಪ್ಪುಹಣದ ಹರಿವನ್ನು ತಡೆಯಲು ಒಂದು ದಾರಿಯೆಂದರೆ ನಗದು ವ್ಯವಹಾರಗಳನ್ನು ನಿರುತ್ತೇಜಿಸುವುದು. ಈಗ ಬಹುಪಾಲು ಭಾರತೀಯರು 'ರುಪೇ' ಡೆಬಿಟ್ ಕಾರ್ಡ್ ಹೊಂದಿರುವುದರಿಂದ, ಅಥವ ಹೊಂದಬಹುದಾದ್ದರಿಂದ, ನಾನು, ಕ್ರೆಡಿಟ್ ಕಾರ್ಡ್ ಅಥವ ಡೆಬಿಟ್ ಕಾರ್ಡ್ ವ್ಯವಹಾರಗಳನ್ನು ಉತ್ತೇಜಿಸಲು ಮತ್ತು ನಗದು ವ್ಯವಹಾರಗಳನ್ನು ನಿರುತ್ತೇಜಿತಗೊಳಿಸಲು ಬೇಗನೇ ಹಲವು ಕ್ರಮಗಳನ್ನು ಸೂಚಿಸುತ್ತೇನೆ" ಎಂದು ಹಣಕಾಸು ಮಂತ್ರಿಗಳು 2015–16ರ ಬಜೆಟ್ ಭಾಷಣದಲ್ಲಿ ಹೇಳಿದ್ದರು.

ಅಲ್ಲದೆ, ಹಣಕಾಸು ಮಂತ್ರಾಲಯ ಇಲೆಕ್ಟ್ರಾನಿಕ್ ಸಾಧನಗಳ ಮೂಲಕ ವ್ಯವಹಾರಗಳಿಗೆ ಸೌಲಭ್ಯ ಕಲ್ಪಿಸುವ ಕರಡು ಸೂಚನೆಗಳ ಬಗ್ಗೆ ಜೂನ್ 2015 ರ ವರೆಗೆ ಸಾರ್ವಜನಿಕ ಅಭಿಪ್ರಾಯಗಳನ್ನು ಕಳಿಸಬೇಕು ಎಂಬ ಒಂದು ಬಹಿರಂಗ ಕರೆಯನ್ನು ತನ್ನ ವೆಬ್‌ತಾಣದಲ್ಲಿ ಕೊಟ್ಟಿತ್ತು. ಮತ್ತು ಸರಕಾರದ ಪ್ರಿಯ ಯೋಜನೆ ವಿಶ್ವ ಬ್ಯಾಂಕ್ ಬೆಂಬಲಿತ 'ಡಿಜಿಟಲ್ ಇಂಡಿಯ' ಕೂಡ ಡಿಜಿಟಲ್ ಆರ್ಥಿಕದತ್ತ ಪಲ್ಲಟದ ಮಾತು ಆಡುತ್ತದೆ. ಅಂದರೆ ಇಂದು ನಮ್ಮ ದೇಶದಲ್ಲಿ ನಡೆಯುತ್ತಿರುವುದು ಒಂದು ಚೆನ್ನಾಗಿ ಯೋಚಿಸಿ ರೂಪಿಸಿದ ಯೋಜನೆಯಾಗಿ ಕಾಣುತ್ತದೆ.

ನೋಟುರದ್ಧತಿ, ಅದರ ಜೊತೆಗೆ ಡಿಜಿಟಲ್ ಆರ್ಥಿಕದತ್ತ ಪಲ್ಲಟದ ಮಾತು ಜನಗಳು ಉಳಿತಾಯ ಮಾಡದಂತೆ ನಿರುತ್ತೇಜಿತಗೊಳಿಸುವ ಆಶಯವನ್ನೂ ಹೊಂದಿವೆ ಇವು ಜನಗಳನ್ನು ಹೆಚ್ಚೆಚ್ಚು ಖರ್ಚು ಮಾಡುವತ್ತ ಅಥವ ಕೊಳ್ಳುಬಾಕತನದತ್ತ ತಳ್ಳುವ ಆಶಯಗಳು.



ಡಿಜಿಟಲ್ ಆರ್ಥಿಕದತ್ತ ಪಲ್ಲಟ ನಮ್ಮ ಹಣಕಾಸು ವಲಯದಲ್ಲಿ ವಿದೇಶಿ ಕಾರ್ಪೊರೇಟ್‌ಗಳ ಪ್ರವೇಶಕ್ಕೆ ನೆರವಾಗುವ ಆಶಯವನ್ನೂ ಹೊಂದಿದೆ. ಇದನ್ನು ನಮ್ಮ ಆರ್ಥಿಕವನ್ನು ವಿದೇಶಿ ಬಂಡವಾಳಕ್ಕೆ ಇನ್ನಷ್ಟು ತೆರೆಯುವತ್ತ ಮೊದಲ ಹೆಜ್ಜೆಯಾಗಿ ಕಾಣಲಾಗುತ್ತಿದೆ. ಡಿಜಿಟಲ್ ಆರ್ಥಿಕದ ಬೆಳವಣಿಗೆ ಇ– ವಾಣಿಜ್ಯ ಅಂದರೆ ಅಂತರ್ಜಾಕದ ಮೂಲಕ ವ್ಯಾಪಾರದ ಬೆಳವಣಿಗೆಗೂ ನೆರವಾಗುತ್ತದೆ. ಅಂದರೆ ಅಮೆಝೋನ್ ಮುಂತಾದ ದೈತ್ಯ ಇ–ವಾಣಿಜ್ಯ ಕಂಪನಿಗಳಿಗೂ ಈ ಡಿಜಿಟಲ್ ಆರ್ಥಿಕದತ್ತ ಪಲ್ಲಟ ಬಹಳಷ್ಟು ಪ್ರಯೋಜನಗಳನ್ನು ಖಂಡಿತಾ ಒದಗಿಸುತ್ತದೆ.

ಕೊಳ್ಳುಬಾಕತನದತ್ತ ತಳ್ಳುವ ಪ್ರಯತ್ನ

"ಡಿಜಿಟಲ್ ಪಾವತಿಗಳು ಅನೌಪಚಾರಿಕ ಆರ್ಥಿಕದ ಆಕಾರವನ್ನು ಕುಗ್ಗಿಸಿ ಕಂಪನಿಗಳ ಆದಾಯವನ್ನು ಮತ್ತಷ್ಟು ಹೆಚ್ಚಸಬಹುದು... ದೀರ್ಘಾವಧಿಯಲ್ಲಿ, ಡಿಜಿಟಲ್ ಪಾವತಿಗಳು ಇ–ವಾಣಿಜ್ಯದ ಮತ್ತು ಆನ್–ಡಿಮಾಂಡ್ ಸೇವೆಗಳ ಬೆಳವಣಿಗೆಯನ್ನು ಸಾಧ್ಯಗೊಳಿಸುತ್ತವೆ.. ಈ ಮೂಲಕ ಇ–ವಾಣಿಜ್ಯ ಬಳಕೆದಾರರು ಹೆಚ್ಚೆಚ್ಚು ಖರ್ಚು ಮಾಡುವ ಪ್ರಕ್ರಿಯೆಯನ್ನು ತೆರೆದು ಕೊಡುವುದಕ್ಕೆ ಕೀಲಿಕೈ ಆಗಬಹುದು" ಎಂದು ಸಪ್ಟಂಬರ್ 2016ರ ಮೆಕಿನ್ಸೆ ವರದಿ ಹೇಳುತ್ತದೆ.

ಕಂಪ್ಯೂಟರ್ ಮತ್ತು ಇಂಟರ್‌ನೆಟ್ ಮೂಲಕ ಪಾವತಿ ಅಥವ ಡಿಜಿಟಲ್ ಪಾವತಿ ಆಧುನಿಕ ಮೂಲರಚನೆಯ ಒಂದು ಮಹತ್ವಪೂರ್ಣ ಲಕ್ಷಣ ಎಂದು ಪರಿಗಣಿಸಲಾಗಿದೆ. ನಾವು ನಮ್ಮ ಹಣವನ್ನು ಹೇಗೆ ಖರ್ಚು ಮಾಡುತ್ತೇವೆ ಎಂಬುದನ್ನು ತಿಳಿಯುವುದು ಆಧುನಿಕ ಕಾರ್ಪೊರೇಟ್‌ಗಳಿಗೆ ಅಗತ್ಯವಾಗಿದೆ. ನಮ್ಮ ಹಣವನ್ನು ಹೇಗೆ ಖರ್ಚು ಮಾಡುತ್ತೇವೆ ಮತ್ತು ಯಾವ ಉತ್ಪನ್ನಗಳ ಮೇಲೆ ಖರ್ಚು ಮಾಡುತ್ತೇವೆ ಎಂದು ತಿಳಿದಾಗ ಅವರಿಗೆ ನಮ್ಮ ಮಾರುಕಟ್ಟೆ ಆಯ್ಕೆಗಳ ಮೇಲೆ ಪ್ರಭಾವ ಬೀರುವುದು ಸುಲಭವಾಗುತ್ತದೆ. ನಮ್ಮ ನಿರ್ದಿಷ್ಟ ಆಸಕ್ತಿಗಳು ಮತ್ತು ಅಪೇಕ್ಷೆಗಳಿಗೆ ಹೊಂದುವ ಜಾಹಿರಾತುಗಳನ್ನು ಅವು ಸಿದ್ಧಪಡಿಸಬಹುದು. ಕಾರ್ಡ್‌ಗಳ ಮೂಲಕ ನಾವು ಹಣ ಖರ್ಚು ಮಾಡುವ ಮಾಹಿತಿಯನ್ನು ಬಳಸಿ ಕಾರ್ಪೊರೇಟ್‌ಗಳು ನಮ್ಮ ವರ್ತನೆಯ ವಿಧಾನಗಳನ್ನು ಅಧ್ಯಯನ ಮಾಡುತ್ತವೆ ಮತ್ತು ಅವರ ಉತ್ಪನ್ನಗಳನ್ನು ಖರೀದಿಸುವತ್ತ ನಮ್ಮನ್ನು ತಳ್ಳುತ್ತವೆ.

ಭಾರತದಲ್ಲಿ ಇದನ್ನು ನಮ್ಮ ಬ್ಯಾಂಕ್ ಖಾತೆಗಳು (ಬಹುಪಾಲು ಭಾರತೀಯರಿಗೆ 'ಜನಧನ್' ಖಾತೆಗಳು), ಆಧಾರ್ ಕಾರ್ಡ್ ಮತ್ತು ಮೊಬೈಲ್ ಸಂಪರ್ಕವನ್ನು ಜೋಡಿಸುವ ಮೂಲಕ ಸಾಧಿಸ ಬಹುದು. ಯುಎಸ್‌ಏಡ್ ಇದನ್ನು ಪ್ರೀತಿಯಿಂದ 'ಜಾಮ್'(ಜೆಎಎಂ– ಅಂದರೆ ಜನಧನ, ಆಧಾರ್ ಮತ್ತು ಮೊಬೈಲ್) ಎಂದು ಕರೆಯುತ್ತದೆ. ಅಂದರೆ ಎಲ್ಲರಿಗೂ ಖಾತೆ(ಜನಧನ್) ತೆರೆಯುವುದು, ಆಧಾರ್ ಅನ್ನು ಮಾಹಿತಿ ಸಂಗ್ರಹಿಸಲು ಬಳಸುವುದು ಮತ್ತು ಮೊಬೈಲನ್ನು ಡಿಜಿಟಲ್ ಆರ್ಥಿಕವನ್ನು ತೂರಿಸಲು ಬಳಸುವುದು. ಇವೆಲ್ಲವೂ ಕಾರ್ಪೊರೇಟ್‌ಗಳ ಸೇವೆಯಲ್ಲಿ ಎಂದು ಬೇರೆ ಹೇಳಬೇಕಾಗಿಲ್ಲ. ನಮ್ಮ ಸರಕಾರ, ಸುಪ್ರಿಂ ಕೋರ್ಟಿನ ತೀರ್ಪಿಗೂ ವಿರುದ್ಧವಾಗಿ ಆಧಾರ್ ಕಾರ್ಡನ್ನು ಕಡ್ಡಾಯಗೊಳಿಸಲು ನಿರ್ಧರಿಸಿರುವ ಹಿಂದಿರುವ ನಿಜವಾದ ಕಾರಣ ಇದೇ ಆಗಿದೆ.

ಹೀಗೆ ನೋಟುರದ್ಧತಿಯ ಹೆಸರಲ್ಲಿ ಸರಕಾರ ಡಿಜಿಟಲ್ ಆರ್ಥಿಕದತ್ತ ದೇಶವನ್ನು ತಳ್ಳುವಲ್ಲಿ ವಿದೇಶಿ ಕಾರ್ಪೊರೇಟ್‌ಗಳು

ಪುಟ 10 ಕ್ಕೆ

ಹೊಸ ಭಾರತದ ಕನಸು ಹೊತ್ತ 10 ನೇ ಡಿ.ವೈ.ಎಫ್.ಐ. ಸಮ್ಮೇಳನ ಕೊಚ್ಚಿಯಲ್ಲಿ



“ಹೊಸ ಭಾರತದ ಕನಸು – ಉದ್ಯೋಗ, ಪ್ರಜಾಪ್ರಭುತ್ವ ಮತ್ತು ಜಾತ್ಯತೀತತೆ” ಎಂಬ ಘೋಷಣೆಯೊಂದಿಗೆ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್(ಡಿ.ವೈ.ಎಫ್.ಐ) ನ 10 ನೇ ಅಖಿಲ ಭಾರತ ಸಮ್ಮೇಳನ ಕೇರಳದ ಕೊಚ್ಚಿಯಲ್ಲಿ ಫೆಬ್ರವರಿ 1 ರಿಂದ 5, 2017 ರವರೆಗೆ ನಡೆಯಿತು. ದೇಶದ ವಿವಿಧ ರಾಜ್ಯಗಳಿಂದ 780 ಪ್ರತಿನಿಧಿಗಳು ಹಾಗೂ 40 ಜನ ವೀಕ್ಷಕರು ಭಾಗವಹಿಸಿದರು. ಕರ್ನಾಟಕದಿಂದ 11 ಜನ ಪ್ರತಿನಿಧಿಗಳು (ಮೂರು ಜನ ಸಿ.ಇ.ಸಿ ಸದಸ್ಯರು ಸೇರಿ) ಭಾಗವಹಿಸಿದರು. ಕೇರಳದ ಕೊಚ್ಚಿಯಲ್ಲಿ ಇದೇ ಮೊದಲ ಬಾರಿಗೆ ಈ ಐತಿಹಾಸಿಕ ಸಮ್ಮೇಳನದ ನಡೆಯಿತು. ಈ ಸಮ್ಮೇಳನವನ್ನು ಮಾಜಿ ಸುಪ್ರೀಂ ಕೋರ್ಟ್ ನ್ಯಾಯಾಧೀಶರಾದ ಶ್ರೀ ಗೋಪಾಲ್ ಗೌಡರವರು ಉದ್ಘಾಟಿಸಿದರು. ಈ ಸಮಾರಂಭದಲ್ಲಿ ಗೋವಿಂದ್ ಪಾನ್ಸಾರೆ ರವರ ಮಗಳು ಶ್ರೀಮತಿ ಮೇಘಾ ಪಾನ್ಸಾರೆ, ನರೇಂದ್ರ ದಾಬೋಲ್ಕರ್‌ರವರ ಮಗ ಶ್ರೀ ಹಮೀದ್ ದಾಬೋಲ್ಕರ್, ಡಿ.ವೈ.ಎಫ್.ಐ ನ ಮಾಜಿ ಅಖಿಲ ಭಾರತ ಅಧ್ಯಕ್ಷರಾದ ಕಾಂ.ಎಂ.ಎ.ಬೇಬಿ, ಸಾಮಾಜಿಕ ಹೋರಾಟಗಾರ ಮತ್ತು ಮ್ಯಾಗ್ಸೆಸೆ ಪ್ರಶಸ್ತಿ ವಿಜೇತರಾದ ಬೆಜವಾಡ ವಿಲ್‌ಸನ್, ಜೆ.ಎನ್.ಯು ವಿದ್ಯಾರ್ಥಿ ಸಂಘದ ಉಪಾಧ್ಯಕ್ಷರಾದ ಶ್ರೀ.ಪಿ.ಪಿ.ಅಮಲ್, ಹೆಚ್.ಸಿ.ಯು ವಿದ್ಯಾರ್ಥಿ ಸಂಘದ ಅಧ್ಯಕ್ಷರಾದ ಶ್ರೀ ಕುಲ್ದೀಪ್ ಸಿಂಗ್, ಪಿ.ಟಿ.ಟಿ.ಐ ಪುಣೆ ಯುನಿವರ್‌ಸಿಟಿಯ ಅಧ್ಯಕ್ಷರಾದ ಹರಿಶಂಕರ್ ನಚಿಮುತ್ತು ಭಾಗವಹಿಸಿದರು. ಉದ್ಘಾಟನೆಯ ಅಧ್ಯಕ್ಷತೆಯನ್ನು ಡಿ.ವೈ.ಎಫ್.ಐ ನ ರಾಷ್ಟ್ರಾಧ್ಯರಾದ ಕಾಂ.ಎಂ.ಬಿ.ರಾಜೇಶ್‌ವಹಿಸಿದರು. ಸಮ್ಮೇಳನದಲ್ಲಿ ರೋಹಿತ್ ವೇಮುಲಾರವರ ತಾಯಿ ರಾಧಿಕ ವೇಮುಲರವರು ಭಾಗವಹಿಸಿ ಶುಭ ಹಾರೈಸಿದರು.



ಸಮ್ಮೇಳನದ ಭಾಗವಾಗಿ ಕೇರಳದ ಡಿ.ವೈ.ಎಫ್.ಐ ಸಂಗಾತಿಗಳು ಅನೇಕ ಕಾರ್ಯಕ್ರಮಗಳನ್ನು ಆಯೋಜಿಸಿದರು. ಕೇರಳ ಡಿ.ವೈ.ಎಫ್.ಐ ನಿಂದ ವಸತಿ ರಹಿತ 10 ಬಡಕುಟುಂಬಳಿಗೆ ಮನೆಯನ್ನು ನಿರ್ಮಿಸಿ ಕೊಡಲಾಗಿತ್ತು ಮತ್ತು ಭೂರಹಿತ ಕುಟುಂಬದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನು ಕೊಡಲಾಯಿತು. ಕುಡಿತ ಮತ್ತು ಡ್ರಗ್ ವಿರುದ್ದ ಪ್ರಚಾರ. ಅನೇಕ ಘಟಕಗಳಲ್ಲಿ ಸಾವಯವ ಕೃಷಿಯ ಮೂಲಕ ತರಕಾರಿ ಮತ್ತು ಭತ್ತವನ್ನು ಬೆಳೆಸಲಾಗಿತ್ತು. ಅನೇಕ ವಿಚಾರ ಸಂಕಿರ್ಣಗಳನ್ನು, ಪರಿಸರ ಜಾಗೃತಿಯ ಕಾರ್ಯಕ್ರಮಗಳು, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು , ಪುಸ್ತಕ ಮೇಳ, ಕೇರಳದ ಎಡ ಚಳುವಳಿಯ ಇತಿಹಾಸದ ಚಿತ್ರ ಪ್ರದರ್ಶನ ಆಯೋಜಿಸಲಾಗಿತ್ತು. ಡಾ.ಜೊಸ್ ಚಾಕೊ ಪೆರಿಯಾಪುರಂ ರವರಿಗೆ ಸಮ್ಮೇಳನದಲ್ಲಿ ಭಾಗವಹಿಸಿದ್ದ ಎಲ್ಲಾ ಪ್ರತಿನಿಧಿಗಳು ಅಂಗಾಂಗದಾನದ ವಾಗ್ದಾನವನ್ನು ಮಾಡಿ ಅದಕ್ಕೆ ಸಂಬಂಧಿಸಿದಂತೆ ಸಹಿ ಮಾಡಿದ ಅರ್ಜಿಗಳನ್ನು ಕೊಡುವುದರ ಮೂಲಕ ಪ್ರತಿಜ್ಞೆಯನ್ನು ಮಾಡಿದರು.

ಸಂಘಟನೆಯನ್ನು ಬಲಪಡಿಸಲು ಸಂಘಟನಾ ನಿರ್ಣಯಗಳನ್ನು ಕೈಗೊಳ್ಳಲಾಯಿತು.

ಅಂತರಾಷ್ಟ್ರೀಯ ಪ್ರತಿನಿಧಿಗಳ ಶುಭ ಹಾರೈಕೆ

10 ನೇ ಡಿ.ವೈ.ಎಫ್.ಐ ನ ಅಖಿಲ ಭಾರತ ಸಮ್ಮೇಳನದ ಪ್ರತಿನಿಧಿಗಳಿಗೆ ಕ್ಯೂಬಾ, ಗ್ರೀಸ್, ಶ್ರೀಲಂಕಾ, ಬಾಂಗ್ಲಾದೇಶದ ಅಂತರಾಷ್ಟ್ರೀಯ ಪ್ರತಿನಿಧಿಗಳು ಐಕ್ಯತೆಯನ್ನು ಪ್ರದರ್ಶಿಸಿದರು. ಕ್ಯೂಬಾ ಮಿಷನ್ ನ ಡೆಪ್ಯೂಟಿ ಹೆಡ್ ಮಾತನಾಡುತಾ ಕ್ಯೂಬಾದ ಸಂಗಾತಿಗಳು ಭಾರತದ ಡಿ.ವೈ.ಎಫ್.ಐ ನ ಸಂಗಾತಿಗಳ ಜೊತೆ ಒಳ್ಳೆಯ ಸ್ನೇಹ ಸಂಬಂಧವನ್ನು ಕಾಪಾಡಿಕೊಂಡಿದ್ದೇವೆ. ಫಿಡೆಲ್ ಕ್ಯಾಸ್ಟ್ರೋರವರ ಭೂಮಿ ಮತ್ತು ಭಾರತದ ಪ್ರಗತಿಪರ ಸಂಘಟನೆಗಳ ಜೊತೆ ಒಂದು ಆರೋಗ್ಯ ಪೂರ್ಣವಾದ ಸಂಬಂಧವನ್ನು ಇಟ್ಟುಕೊಂಡಿದ್ದೇವೆ. ಈ ಸಂಬಂಧವನ್ನು ಮುಂದುವರೆಸಿಕೊಂಡು ಹೋಗುವ ಉದ್ದೇಶ ನಮ್ಮದಾಗಿದೆ. ಬಂಡವಾಳಶಾಹಿಯನ್ನು ಸೋಲಿಸಿ ಒಂದು ಹೊಸ ಜಗತ್ತನ್ನು ನಿರ್ಮಿಸುವ ನಂಬಿಕೆಯಲ್ಲಿ ಜೊತೆಯಾಗಿ ಕೈಜೊಡಿಸಿದ್ದೇವೆಂದರು

ಶ್ರೀಲಂಕಾದ ವಿದೇಶಿ ಪ್ರತಿನಿಧಿಯಾದ ರಂಗನಾದೇವಪ್ರಿಯ ಮಾತನಾಡಿ ಜಾಗತೀಕರಣಕ್ಕೆ ಶ್ರೀಲಂಕಾ ಮತ್ತು ಭಾರತ ಎರಡು ಬಲಿಯಾಗಿವೆ, ಬಂಡವಾಳಶಾಹಿಗಳ ಪರವಾದ ನೀತಿಗಳನ್ನು ಎರಡು ದೇಶದ ಸರ್ಕಾರಗಳು ಎತ್ತಿ ಹಿಡಿಯುತ್ತಿವೆ. ನಮ್ಮ ಕನಸು ಯಾವುದೇ ಜನಾಂಗದ ಆಧಾರದ ಮೇಲೆ ಇಲ್ಲದ ಒಗ್ಗೂಡಿದ ಶ್ರೀಲಂಕಾ ಎಂದರು. ಬಾಂಗ್ಲಾದೇಶದ ಮಹಮ್ಮದ್ ಸಮೂಲ್ಲಾ ಸಮ್ಮೇಳನವನ್ನು ಅಭಿನಂದಿಸುತ್ತಾ ಶಿಕ್ಷಣವನ್ನು ಕೋಮುವಾದಿಕರಣ ಗೊಳಿಸಲಾಗುತ್ತಿದೆ. ಕೋಮುವಾದವನ್ನು ಹರಡಲು ಪಠ್ಯ ಪುಸ್ತಕವನ್ನು ಅಸ್ತ್ರವನ್ನಾಗಿ ಮಾಡಿಕೊಂಡಿದ್ದಾರೆ. ಮೂಲಭೂತವಾದದ ವಿರುದ್ದ ಕೇವಲ ಭಾರತದಲ್ಲಿ ಮಾತ್ರವೇ ಹೋರಾಟ ನಡೆಯುತ್ತಿಲ್ಲ, ಬದಲಾಗಿ ಅದು ಬಾಂಗ್ಲಾದೇಶದಲ್ಲಿಯೂ ನಡೆಯುತ್ತಿದೆ. ಜಾತ್ಯತೀತ ಭಾರತ, ಜಾತ್ಯತೀತ ಬಾಂಗ್ಲಾದೇಶ ಮತ್ತು ಜಾತ್ಯತೀತ ದಕ್ಷಿಣ ಏಷ್ಯಾಕ್ಕಾಗಿ ನಮ್ಮ ಹೋರಾಟ ಮುಂದುವರೆಸೋಣ ಎಂದು ಕರೆನೀಡಿದರು.



ನಜೀಬನ ತಾಯಿ, ಜೀಶಾಳ ತಾಯಿ, ಅಖ್ಲಾಕರ ಕುಟುಂಬ, ಊನಾ ಸಂತ್ರಸ್ತರು ಹಾಗೂ ನಾನು? ನಮ್ಮಂಥ ಅನೇಕರು ನಿಮ್ಮ ಮೇಲೆ ಅವಲಂಬಿತರಾಗಿದ್ದೇವೆ. ನೀವು ನಿಮ್ಮ ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು ಐಕ್ಯ ಹೋರಾಟ ನಡೆಸಿದರಷ್ಟೆ ನಮಗೆಲ್ಲರಿಗೂ ನ್ಯಾಯ ಸಿಗಲು ಸಾಧ್ಯ. ನಿಮ್ಮ ನಡುವೆ ಬಿರುಕು ಮುಂದುವರಿದರೆ ಈ ದೇಶದಲ್ಲಿ ನಮಗೆ, ನಮ್ಮಂಥವರಿಗೆ ಇನ್ನಾವ ಭರವಸೆಯೂ ಉಳಿಯುವುದಿಲ್ಲ.

~ ರಾಧಿಕಾ ವೇಮುಲ, ಕೊಚ್ಚಿ, ಕೇರಳ

ಸಮ್ಮೇಳನದಲ್ಲಿ ಅಂಗೀಕರಿಸಿದ ನಿರ್ಣಗಳು

1. ಅಕ್ಟೋಬರ್ ಕ್ರಾಂತಿಯನ್ನು ಎತ್ತಿಹಿಡಿಯುವುದು
2. ಸಾಮ್ರಾಜ್ಯಶಾಹಿಯನ್ನು ತಡೆಹಿಡಿಯುವುದು
3. ಪಶ್ಚಿಮ ಏಷ್ಯದ ಮತ್ತು ಅರಬ್ ದೇಶಗಳ ಜನರ ನಡುವ ಐಕ್ಯತೆಯನ್ನು ಕಾಪಾಡಿಕೊಂಡು ಹೋಗುವುದು.
4. ಹವಾಮಾನ ವೈಪರಿತ್ಯವನ್ನು ನಿಭಾಯಿಸಲು ನ್ಯಾಯಸಮ್ಮತ ರಾಜಿ ಅಗತ್ಯಗಳನ್ನು ಮಾಡುವುದು
5. ನಿರುದ್ಯೋಗದ ವಿರುದ್ದ ಹೋರಾಟ
6. ಬಡವರನ್ನು ಶಿಕ್ಷಣದಿಂದ ಹೊರಹಾಕುವ ಕ್ರಮವನ್ನು ವಿರೋಧಿಸಲು
7. ಮಹಿಳಾ ದೌರ್ಜನ್ಯ ಮತ್ತು ಲಿಂಗ ತಾರತಮ್ಯದ ವಿರುದ್ದ ಹೋರಾಟವನ್ನು ತೀವ್ರಗೊಳಿಸುವುದು
8. ಕೋಮುವಾದದ ವಿರುದ್ದ ಯುವಜನತೆಯನ್ನು ಒಗ್ಗೂಡಿಸುವುದು.
9. ಖಾಸಗೀ ರಂಗದಲ್ಲಿ ಮೀಸಲಾತಿಗಾಗಿ ಆಗ್ರಹ
10. ರೈತರ ಯಾತನೆ ಮತ್ತು ಗ್ರಾಮೀಣ ನಿರುದ್ಯೋಗದ ವಿರುದ್ದ
11. ಭಾರತದ ಸಾರ್ವಜನಿಕ ಆರೋಗ್ಯ ಕ್ಷೇತ್ರವನ್ನು ಪುನಶ್ಚೇತನ ಗೊಳಿಸಲು ಮತ್ತು ಖಾಸಗೀಕರಣವನ್ನು ನಿಲ್ಲಿಸಲು
12. ವರದಕ್ಷಿಣೆಯ ವ್ಯವಸ್ಥೆಯ ನಿರ್ಮೂಲನೆ
13. ಶಿಕ್ಷಣದ ಆವರಣದಲ್ಲಿ ಭಯದ ವಾತವಾರಣವನ್ನು ಸೋಲಿಸುವುದು
14. ಮುಸ್ಲಿಂ ಯುವಕರ ವಿರುದ್ದದ ಪೊಲೀಸರ ವರ್ತನೆಯನ್ನು ಖಂಡಿಸಿ.
15. ರೋಹಿತ್ ವೇಮುಲಾಗೆ ನ್ಯಾಯಕ್ಕಾಗಿ
16. ಮರ್ಯಾದೆ ಹತ್ಯೆಯ ವಿರುದ್ದ ಹೊಸ ಕಾನೂನು ಜಾರಿ ಮಾಡಲು ಒತ್ತಾಯ
17. ಕಾಶ್ಮೀರದಲ್ಲಿ ಶಾಂತಿ ಮತ್ತು ಸ್ವಾಯತ್ತತೆಗೆ ಆಗ್ರಹ
18. ಪಶ್ಚಿಮ ಬಂಗಾಳದಲ್ಲಿ ಪ್ರಜಾಪ್ರಭುತ್ವದ ಮೇಲಿನ ಹಲ್ಲೆಯ ಖಂಡನೆ





ಕಾಂ. ಮಹಮದ್ ರಿಯಾಜ್

ಹೊಸ ಸಮಿತಿ

ಡಿ.ವೈ.ಎಫ್.ಐ ನ 10 ನೇ ಅಖಿಲ ಭಾರತ ಸಮ್ಮೇಳದಲ್ಲಿ ನೂತನ 83 ಜನರ ಕೇಂದ್ರ ಸಮಿತಿಯನ್ನು ಸಮ್ಮೇಳನವು ಆಯ್ಕೆ ಮಾಡಿದೆ.

ಅಧ್ಯಕ್ಷರಾಗಿ – . **ಮಹಮದ್ ರಿಯಾಜ್**

ಕಾರ್ಯದರ್ಶಿಯಾಗಿ – **ಅಭಯ್ ಮುಖರ್ಜಿ,**

ಆಯ್ಕೆಯಾಗಿದ್ದು ಕರ್ನಾಟಕದಿಂದ ಕಾರ್ಯದರ್ಶಿ ಮಂಡಳಿಗೆ ಬಿ.ರಾಜಶೇಖರ್ ಮೂರ್ತಿ ಮತ್ತು ಕೇಂದ್ರ ಸಿ.ಇ.ಸಿ ಗೆ ಮುನೀರ್ ಕಾಟಿಪಳ್ಳರವರನ್ನು ಆಯ್ಕೆ ಮಾಡಿದ್ದು ಒಂದು ಸ್ಥಾನವನ್ನು ಯುವತಿಯರಿಗೆ ಕಾಯ್ದಿರಿಸಲಾಗಿದೆ.



ಕಾಂ.ಅಭಯ್ ಮುಖರ್ಜಿ



ಮುನೀರ್ ಕಾಟಿಪಳ್ಳ



ಕಾಂ. ಬಿ.ರಾಜಶೇಖರ್ ಮೂರ್ತಿ

ಬಹಿರಂಗ ರ್‍ಯಾಲಿ ಮತ್ತು ಬಹಿರಂಗ ಸಭೆ

ಸಮ್ಮೇಳನದ ಕೊನೆಯ ದಿನ ಕೊಚ್ಚಿಯ ಸಮುದ್ರದ ತಟದ ಮರೀನಾ ಡ್ರೈವ್ ನಲ್ಲಿ ಒಂದು ಲಕ್ಷ ಜನ ಸೇರಿದ್ದ ಬಹಿರಂಗ ಸಭೆಯನ್ನು ಆಯೋಜಿಸಲಾಗಿತ್ತು. ಇದಕ್ಕೂ ಮೊದಲು ಬೃಹತ್ ರ್‍ಯಾಲಿಯನ್ನು ಕೊಚ್ಚಿಯ ಮುಖ್ಯರಸ್ತೆಯಲ್ಲಿ ಸಾವಿರಾರು ಯುವಜನರ ದಂಡು ಘೋಷಣೆಗಳನ್ನು ಮೊಳಗಿಸುತ್ತಾ ರಸ್ತೆಯ ತುಂಬ ಶಿಸ್ತುಬದ್ದವಾಗಿ ಬಂದು ಬಹಿರಂಗ ಸಭೆಯಲ್ಲಿ ಸೇರಿಕೊಂಡರು ಬಹಿರಂಗ ಸಭೆಯನ್ನು ಕಾಂ. ಸೀತಾರಾಮ್ ಯೆಚೂರಿಯವರು ಉದ್ಘಾಟಿಸಿದರು, ಮುಖ್ಯ ಅತಿಥಿಗಳಾಗಿ ಕೇರಳದ ಮುಖ್ಯಮಂತಿಗಳಾದ ಕಾಂ.ಪಿಣರಾಯಿ ವಿಜಯ, ಮಾಜಿ ಡಿ.ವೈ.ಎಫ್.ಐ ನ ಅಧ್ಯಕ್ಷರಾದ ಎಂ.ಎ.ಬೇಬಿ, ಡಿ.ವೈ.ಎಫ್.ಐ ನ ಎಂ.ಬಿ.ರಾಜೇಶ್, ಮಹಮ್ಮದ್ ರಿಯಾಜ್, ಅಭಯ್ ಮುಖರ್ಜಿ ಇತರರು ಭಾಗವಹಿಸಿದ್ದರು.

ನಗದುರಹಿತ–ಡಿಜಿಟಲ್ ಆರ್ಥಿಕದತ್ತ.........

ಪುಟ 9 ರಿಂದ

ಮತ್ತು ಹಣಕಾಸು ಬಂಡವಾಳದ ಎದುರು ಬೆನ್ನು ಬಗ್ಗಿಸಿದೆ. ಇನ್ನೊಂದೆಡೆಯಲ್ಲಿ, ನಗದು ಹೊಂದಿದ್ದು, ಡಿಜಿಟಲ್ ಆರ್ಥಿಕದತ್ತ ಬಲವಂತದ ಪಲ್ಲಟವನ್ನು ವಿರೋಧಿಸುವವರನ್ನು 'ದೇಶದ್ರೋಹಿಗಳು', 'ರಾಷ್ಟ್ರ–ವಿರೋಧಿಗಳು' ಮತ್ತು ನೇರವಾಗಿ ಕಪ್ಪು ಹಣವನ್ನು ಪೇರಿಸಿಡದಿದ್ದರೂ, ಕಪ್ಪುಹಣ ಪೇರಿಸಿಟ್ಟವರ ಬೆಂಬಲಿಗರು' ಎಂದು ಹಣೆಪಟ್ಟಿ ಹಚ್ಚಲಾಗುತ್ತಿದೆ.

ಬಡವರ ಸಬ್ಸಿಡಿ ನಿರ್ಮೂಲ

ನಿಜ, ಸರಕಾರಕ್ಕೂ ಡಿಜಿಟಲ್ ಆರ್ಥಿಕದಿಂದ ಪ್ರಯೋಜನಗಳಿವೆ. ಇದರಿಂದ ಅದು ದೇಶದ ಹಣ ಸಂಬಂಧಿ ಧೋರಣೆಯನ್ನು ಇನ್ನೂ ಚೆನ್ನಾಗಿ ಹತೋಟಿಯಲ್ಲಿಡಬಹುದು ಮತ್ತು ಬಡ್ಡಿದರಗಳನ್ನು ನಿಯಂತ್ರಿಸುವುದು ಅದಕ್ಕೆ ಬಹಳ ಸುಲಭವಾಗಿ ಬಿಡುತ್ತದೆ.

ಹಣದ ಚಲನೆಯನ್ನು ಗುರುತಿಸಿ 'ಆರ್ಥಿಕದ ನಾಡಿಯನ್ನು' ಇನ್ನೂ ಚೆನ್ನಾಗಿ ಗುರುತಿಸಿಕೊಂಡು ಹೊಸ ತೆರಿಗೆಗಳನ್ನು ವಿಧಿಸುವ ಬಗ್ಗೆ ನಿರ್ಧರಿಸಬಹುದು.

ಅಲ್ಲದೆ, 'ಸಬ್ಸಿಡಿಗಳನ್ನು ಗುರಿಯತ್ತಲೇ' ಸೀಮಿತಗೊಳಿಸಿ ತನ್ನ ಸಬ್ಸಿಡಿಗಳನ್ನು ಕಡಿಮೆ ಮಾಡಬಹುದು. ಈ ರೀತಿ ಸಬ್ಸಿಡಿ ಒದಗಿಸುವುದನ್ನು ಗುರಿ ನಿರ್ದೇಶಿತಗೊಳಿಸುವುದು ನಮ್ಮ ಸಮಾಜದ ರೈತರು ಮತ್ತು ಬಡವರಿಗೆ ಒದಗಿಸುವ ಸಬ್ಸಿಡಿಗಳನ್ನು ಕಡಿಮೆ ಮಾಡುವ ಆಶಯವನ್ನೇ ಹೊಂದಿದೆ ಎಂಬುದನ್ನು ನೋಡಿದ್ದೇವೆ. ಅಂತಿಮವಾಗಿ ಜನಸಾಮಾನ್ಯರಿಗೆ ಕೊಡುವ ಸಬ್ಸಿಡಿಗಳನ್ನು ಪೂರ್ಣವಾಗಿ ನಿರ್ಮೂಲ ಮಾಡುವುದೇ ಅದರ ಆಶಯ.

ರಿಝರ್ವ್ ಮತ್ತು ಭಾರತೀಯ ಬ್ಯಾಂಕುಗಳ ವಿರುದ್ಧ ಜನರನ್ನು ತಿರುಗಿಸುವ ಪ್ರಯತ್ನ

ನೋಟು ರದ್ದತಿ ರಿಝರ್ವ್ ಬ್ಯಾಂಕ್ ಮತ್ತು ನಮ್ಮ ಸಾರ್ವಜನಿಕ ವಲಯದ ಬ್ಯಾಂಕುಗಳ ವಿರುದ್ಧ ಜನತೆ ಸಿಟ್ಟಾಗುವಂತೆಯೂ ಮಾಡಿದೆ. ಸರಕಾರ ಬೇಕೆಂದೇ ಜನಗಳ ನಡುವೆ ಈ ಭಾವನೆ ಉಂಟಾಗಲು ನೆರವಾಗಿದೆ. ನೋಟು ರದ್ಧತಿಯ ಬಗ್ಗೆ ನಿರ್ಣಯಗಳೆಲ್ಲವನ್ನೂ ಸರಕಾರವೇ ಕೈಗೊಂಡರೂ, ಅವುಗಳ ಜಾರಿಯಲ್ಲಿ ವಿಫಲವಾಗಿರುವುದು ಬ್ಯಾಂಕುಗಳು ಎನ್ನುವಂತೆ ಬಿಂಬಿಸಿದೆ. ಸರಕಾರದ ನಿರ್ಣಯಗಳು ಮತ್ತು ಕ್ರಮಗಳಿಂದಾಗಿ ರಿಝರ್ವ್ ... ಹಣದ ಗ್ಯಾರಂಟು ನೀಡುತ್ತಿಲ್ಲ ಎಂದು



ಕಳಕೊಳ್ಳುವಂತಾಗಿದೆ. ದೇಶದ ಈ ಕೇಂದ್ರೀಯ ಬ್ಯಾಂಕ್ ಸತತವಾಗಿ ಏನೇನೋ ನಿರ್ಣಯಗಳನ್ನು ಪ್ರಕಟಿಸಿ ನಗೆಪಾಟಲಾಗಿದೆ. ಈ ಅವಧಿಯಾದ್ಯಂತ ಅದು ತನ್ನ ಸ್ವತಂತ್ರ ಅಭಿಪ್ರಾಯವನ್ನು ಎತ್ತಿ ಹಿಡಿಯುವಲ್ಲಿ ವಿಫಲವಾಗಿದೆ. ಅದು ತನ್ನ ಸ್ವಾಯತ್ತತೆಯನ್ನು ಕುಂಠಿತಗೊಳಿಸಿಕೊಂಡಿರುವ ಸಂಸ್ಥೆಯಾಗಿ ಮೂಡಿಬಂದಿದೆ.

ಕರೆನ್ಸಿ ನೋಟುಗಳ ತೀವ್ರ ಕೊರತೆ ಇದ್ದಾಗ ಕರೆನ್ಸಿಯನ್ನು ಮೊದಲು ಪಡೆಯುತ್ತಿದ್ದದ್ದು ಖಾಸಗಿ ಬ್ಯಾಂಕುಗಳು. ಬಹುಪಾಲು ಜನತೆಯ ಸೇವೆಯಲ್ಲಿರುವ ಸಾರ್ವಜನಿಕ ವಲಯದ ಬ್ಯಾಂಕುಗಳಿಗೆ ಇದರಲ್ಲಿ ಎರಡನೆಯ ಆದ್ಯತೆಯಷ್ಟೇ. ಇದರಿಂದಾಗಿ ಜನಗಳ ಆಕ್ರೋಶ ಸಾರ್ವಜನಿಕ ವಲಯದ ಬ್ಯಾಂಕುಗಳ ವಿರುದ್ಧವೇ ಎದ್ದಿತು. ಈ ಎಲ್ಲ ಮಿತಿಗಳ ನಡುವೆಯೂ ಬ್ಯಾಂಕ್ ನೌಕರರು ಹಗಲು–ರಾತ್ರಿಯೆನ್ನದೆ ಜನರಿಗೆ ನೆರವಾಗಲು ಕೆಲಸ ಮಾಡಿದರು. ಆದರೆ ಸರಕಾರ ಮತ್ತು ಬಿಜೆಪಿ ಜನತೆಯ ಸಂಕಷ್ಟಗಳಿಗೆ ಬ್ಯಾಂಕ್ ನೌಕರರನ್ನು ಹೊಣೆ ಮಾಡಲು ಪ್ರಯತ್ನಿಸುತ್ತಿವೆ.

ಇವನ್ನೆಲ್ಲ ಒಂದು ನಿರ್ದಿಷ್ಟ ಉದ್ದೇಶದಿಂದಲೇ ಮಾಡಲಾಗುತ್ತಿದೆ. ದೇಶದ ಕೇಂದ್ರೀಯ ಬ್ಯಾಂಕ್‌ನ ಅಧಿಕಾರ ಮತ್ತು ಅದರ ಸ್ವಾಯತ್ತತೆಯನ್ನು ಕುಂಠಿತಗೊಳಿಸುವುದು ಅದರ ಬಯಕೆ. ಸಾರ್ವಜನಿಕ ವಲಯದ ಬ್ಯಾಂಕುಗಳನ್ನು ಮತ್ತು ಸಂಸ್ಥೆಗಳ ಹೆಸರುಗೆಡಿಸುವುದು ಕೂಡ ಅದಕ್ಕೆ ಬೇಕಾಗಿದೆ. ಇದು ನಮ್ಮ ಬ್ಯಾಂಕಿಂಗ್ ವಲಯವನ್ನು ಅಂತಿಮವಾಗಿ ಖಾಸಗೀಕರಿಸುವುದಕ್ಕೆ ಬುನಾದಿ ಸಿದ್ಧಮಾಡಲಿಕ್ಕಾಗಿ. ಅಂತರ್‍ರಾಷ್ಟ್ರೀಯ ಹಣಕಾಸು ಬಂಡವಾಳ ನಮ್ಮ ಹಣಕಾಸು ವಲಯವನ್ನು ಪ್ರವೇಶಿಸಲು ಕಾದು ನಿಂತಿದೆ ಎಂಬುದನ್ನು ಮರೆಯಬಾರದು. ಇದು ಅವರಿಗೆ ಬಹಳ ಮಹತ್ವದ್ದಾಗಿದೆ. ಇದು ಈ ದೀರ್ಘಗೊಂಡಿರುವ ಜಾಗತಿಕ ಹಣಕಾಸು ಬಿಕ್ಕಟ್ಟಿನ ಅವಧಿಯಲ್ಲಿ ಹೆಚ್ಚು ಲಾಭಗಳನ್ನು ಗಳಿಸುವ ಒಂದು ಪರಿಣಾಮಕಾರಿ ಮಾರ್ಗ ಮತ್ತು ಬಿಕ್ಕಟ್ಟಿನಿಂದ ಹೊರಬರುವ ಒಂದು ಸಾಧನ ಎಂದು ಈ ವಿದೇಶಿ ಹಣಕಾಸು ಬಂಡವಾಳ ಪರಿಗಣಿಸಿದೆ. ನೋಟುರದ್ಧತಿಯನ್ನು ನಮ್ಮ ಸರಕಾರ ಅವರ ಉದ್ದೇಶ ಸಾಧನೆಗೆ ಬಳಸಿದೆ. **ನಮ್ಮ ಸಾರ್ವಜನಿಕ ವಲಯದ ಬ್ಯಾಂಕುಗಳ ಬ್ಯಾಲನ್ಸ್ ಶೀಟುಗಳನ್ನು ನಮ್ಮ ಜನಗಳ ಹಣವನ್ನು ಹೀರಿ–ಕೊಂಡು ಸ್ವಚ್ಛಗೊಳಿಸಿ ಅವನ್ನು ಅಂತರ್‍ರಾಷ್ಟ್ರೀಯ ಹಣಕಾಸು ಬಂಡವಾಳಕ್ಕೆ ವಹಿಸಿಕೊಡಲು ಸರಕಾರ ಸಿದ್ಧತೆ ನಡೆಸುತ್ತಿದೆ. ಆದ್ದರಿಂದಲೇ, ನೋಟುರದ್ಧತಿ ಸರಕಾರ ತರಬಯಸುವ ಭಾರೀ ಪ್ರಮಾಣದ ಆರ್ಥಿಕ 'ಸುಧಾರಣೆ'ಗಳಿಗೆ ಬುನಾದಿಯಾಗಿದೆ.** ●

ಮಧ್ಯಮಮಾರ್ಗ ಎಂದರೇನು?........

ಪುಟ 6 ರಿಂದ

ಅವಕಾಶ ದೊರೆಯುವುದರಿಂದ ಅವೇ ವಾಸ್ತವವಾದ, ಸರಿಯಾದ, ಸತ್ಯವಾದ ಮತ್ತು ನಂಬಲರ್ಹವಾದ ನಾಗರಿಕತೆಯ ಪರಂಪರೆಯೆಂದು, ಚರಿತ್ರೆಯೆಂದು ಜನಜನಿತವಾಗಿವೆ. ಇವುಗಳ ಮಧ್ಯೆ ಇರುವ ಭಿನ್ನಾಭಿಪ್ರಾಯಗಳು, ನಡೆಯುವ ತಿಕ್ಕಾಟಗಳು ಬೌದ್ಧಿಕ, ತಾತ್ವಿಕ ಭಿನ್ನಾಭಿಪ್ರಾಯಗಳೆಂದು, ವಾದ–ಸಂವಾದಗಳೆಂದು ಒಪ್ಪಿತವಾಗುತ್ತವೆ. ಇವಕ್ಕೆ ಅವಕಾಶ ಮಾಡಿಕೊಡುವ ಸಾಮಾಜಿಕ ಮತ್ತು ರಾಜಕೀಯ ವ್ಯವಸ್ಥೆಯನ್ನು ಪ್ರಜಾಪ್ರಭುತ್ವವೆಂದು ಸ್ವೀಕರಿಸಲಾಗುತ್ತದೆ. ಮತ್ತು ಇವನ್ನು ಬಿಡಿ ಬಿಡಿಯಾಗಿ ಇಲ್ಲವೆ ಒಟ್ಟಾರೆಯಾಗಿ ಪ್ರಶ್ನಿಸುವವರನ್ನು ಎಡಪಂಥೀಯರೆಂದು, ವಾಮಮಾರ್ಗಿಗಳೆಂದು ತಿರಸ್ಕರಿಸಲಾಗುತ್ತದೆ. ತೀವ್ರ ಸಂದರ್ಭಗಳಲ್ಲಿ ದ್ವೇಷಿಸಲಾಗುತ್ತದೆ. ಕೊಲ್ಲಲಾಗುತ್ತದೆ.

ಎಡಪಂಥದ ಕುರುಡು ವಿರೋಧಿಗಳು

ಇಂಥ ಪ್ರಜಾಪ್ರಭುತ್ವದಲ್ಲಿನ ಪುರೋಹಿತರು, ಸಮಾಜ ಸುಧಾರಕರು, ಸಮಾಜ ಸೇವಕರು ಆಪ್ತ ಸಮಾಲೋಚಕರು, ಶಾಂತಿದೂತರು, ಸಾಹಿತಿ, ಕಲಾವಿದರು, ಲೋಕಾಭಿಪ್ರಾಯ ರೂಪಿಸುವ ಬೌದ್ಧಿಕ ದಿಗ್ಗಜರು ಎಡಪಂಥೀಯರನ್ನು ವಿರೋಧಿಸುವಂಥ ಆಲೋಚನೆಗಳ ಪ್ರಸಾರ–ಪ್ರಚಾರದಲ್ಲಿ ಮುಖ್ಯ ಪಾತ್ರ ವಹಿಸುತ್ತಾರೆ. ಉಳಿದ ಎಲ್ಲ ವಿಷಯಗಳಿಗೆ ಸಂಬಂಧಿಸಿದಂತೆ ತರ್ಕಬದ್ಧವಾಗಿ, ವಸ್ತುನಿಷ್ಠವಾಗಿ ಯೋಚಿಸಿ, ಸತ್ಯನಿಷ್ಠ–ಅನುಭವನಿಷ್ಠ–ನಿರಪೇಕ್ಷ ನಿಲುವನ್ನು ತಾಳಬಲ್ಲ ಈ ಜನರು ಮತ್ತು ವೈಜ್ಞಾನಿಕರೂ ಸಹ ತಾವು ಬದುಕುವ ಸಮಾಜದ ಅಡಿಗಲ್ಲು ಯಾವುದು? ಆ ಸಮಾಜ ಹೇಗೆ ಸಂಘಟಿತವಾಗಿದೆ? ಅದನ್ನು ರಾಜಕೀಯವಾಗಿ ಯಾರು ನಿರ್ಧರಿಸುತ್ತಾರೆ, ನಿಯಂತ್ರಿಸುತ್ತಾರೆ? ಅವರ ತಾತ್ವಿಕತೆಯು ಜನರ ಸ್ವಾತಂತ್ರ್ಯ, ಬದುಕಿನ ಮಟ್ಟ, ಅವರ ನ್ಯಾಯ–ನೆಮ್ಮದಿ–ಸುಖದ ಪರಿಕಲ್ಪನೆಯನ್ನು ಹೇಗೆ ತಳಮಟ್ಟದಿಂದ ಪ್ರಭಾವಿಸುತ್ತದೆ? ಎಂಬ ಪ್ರಶ್ನೆಗಳಿಗೆ ಬೆನ್ನುತಿರುಗಿಸಿ ಅವರ ಕಲ್ಪನೆಯ ಎಡಪಂಥವನ್ನು ಸಮಾಜವಾದದೊಂದಿಗೆ ಸಮೀಕರಿಸಿ ಕುರುಡಾಗಿ ತಿರಸ್ಕರಿಸುತ್ತಾರೆ. ಅವರ ಪ್ರಕಾರ ಎಡಪಂಥೀಯರ ಸಮಾಜದಲ್ಲಿ ಧಾರ್ಮಿಕತೆಯಿಲ್ಲ. ಮಾನವೀಯ ಮೌಲ್ಯಗಳಿಗೆ ಬೆಲೆಯಿಲ್ಲ. ಜನರ ಸ್ವಾತಂತ್ರ್ಯವನ್ನು ಕಸಿದುಕೊಳ್ಳಲಾಗುತ್ತದೆ. ಭಿನ್ನಾಭಿಪ್ರಾಯಗಳನ್ನು ಹತ್ತಿಕ್ಕಲಾಗುತ್ತದೆ. ತಾವು ನಂಬುವ ಪ್ರಜಾಪ್ರಭುತ್ವದ ಬದಲು ಸರ್ವಾಧಿಕಾರವಿರುತ್ತದೆ ಎಂದು ನಂಬುತ್ತಾರೆ. ಪ್ರಚಾರ ಮಾಡುತ್ತಾರೆ. ಉಳಿದಂತೆ ಅವರಿಗೆ ಸಾಧ್ಯವಿರುವ ವಸ್ತುನಿಷ್ಠತೆ ತರ್ಕಬದ್ಧ ಆಲೋಚನೆ, ನಿರಪೇಕ್ಷತೆಗಳು ನಿಷ್ಪ್ರಯೋಜಕವಾಗುತ್ತವೆ. ದುರಂತವೆಂದರೆ ಈ ಜನರು ಸಮಾಜವಾದವನ್ನು ನಂಬಿಕೆಯ ಮಟ್ಟಕ್ಕಿಳಿಸಿ ತಿರಸ್ಕರಿಸುವಾಗಲೂ, ದ್ವೇಷಿಸುವಾಗಲೂ ಅವರು ಜನಸಾಮಾನ್ಯರ ಕಣ್ಣಿಗೆ ವಸ್ತುನಿಷ್ಠ, ಸತ್ಯನಿಷ್ಠ, ಪ್ರಾಮಾಣಿಕ ಚಿಂತಕರಾಗಿರಾಗಿಯೇ ಕಾಣಿಸುತ್ತಾರೆ. ಇಂಥವರು ಸಾಹಿತ್ಯೋತ್ಸವದಂಥ ಸಾಂಸ್ಕೃತಿಕ ವೇದಿಕೆಗಳಲ್ಲಿ ಪ್ರಾರಂಭಿಸಿರುವ ಎಡ–ಬಲಗಳ ನಡುವಿನ ಸಂವಾದ–ಸಂಧಾನ–ಸಮನ್ವಯಗಳ ಪ್ರಯತ್ನಗಳು ನಮ್ಮ ಸಮಾಜದ ಪ್ರಜ್ಞಾವಂತರು ನಡೆಸುತ್ತಿರುವ ಸಕಾಲಿಕ ಮತ್ತು ಪ್ರಾಮಾಣಿಕ ಆಶಯಗಳಿಂದ ಪ್ರೇರಿತವಾಗಿರಬಹುದು. ಆದರೆ ರಾಜಕೀಯ ಪ್ರಜ್ಞೆಯ ಅಭಾವದಲ್ಲಿ ನಡೆಸುವ ಇಂಥ ಪ್ರಯತ್ನಗಳು ಯುವಜನರನ್ನು ದಾರಿಗೆಡಿಸುವ ಅಪಾಯವಿರುವುದರಿಂದ ಎಚ್ಚರವನ್ನು ಕಾಯ್ದುಕೊಳ್ಳುವುದು ಅತ್ಯಗತ್ಯ.

ಸನಾತನವಾದಿಗಳು ಜಾಗತಿಕ ಬಂಡವಾಳ ಮತ್ತು ಸಾಮ್ರಾಜ್ಯಶಾಹಿಗಳ ಜೊತೆ ಕೈಗೂಡಿಸಿ ದುಡಿಯುವ ಜನರ ಮೇಲೆ ನಿರಂತರವಾಗಿ ದಾಳಿ ಮಾಡುತ್ತಿರುವ ಈ ಕಾಲಘಟ್ಟದಲ್ಲಿ ಸಾಹಿತ್ಯದ ಚರ್ಚೆಗಳಲ್ಲಿ ಶಕ್ತಿಯನ್ನು ವ್ಯಯಿಸದೆ, ದುಡಿಯುವ ಜನರ ಜನಸಾಮಾನ್ಯರ ಮೇಲಿನ ಶ್ರೀಮಂತರ ಸರ್ವಾಧಿಕಾರವನ್ನು ಹಿಮ್ಮೆಟ್ಟಿಸಿ ದುಡಿಯುವ ಜನರ ಸರ್ವಾಧಿಕಾರವನ್ನು ಸ್ಥಾಪಿಸುವ ಪ್ರಯತ್ನಗಳನ್ನು ತೀವ್ರಗೊಳಿಸುವ ಕಡೆ ಗಮನ ಹರಿಸಬೇಕಾದ ಅಗತ್ಯ ಎಂದಿಗಿಂತಲೂ ಹೆಚ್ಚಾಗಿದೆ.

ಬೌದ್ಧ ಮಧ್ಯಮ, ಝೆನ್

ಮನುಷ್ಯರು ಹುಟ್ಟುವುದಕ್ಕಿಂತ ಮುಂಚಿನ ಸ್ಥಿತಿ, ಮನುಷ್ಯರು ಸತ್ತಮೇಲಿನ ಸ್ಥಿತಿ ಹೇಗಿರುತ್ತವೆ ಎಂಬುದು ಯಾರಿಗೂ ತಿಳಿಯದು. ಇವುಗಳ ಬಗೆಗೆ ಯಾರಿಗಾದರೂ ಆಸಕ್ತಿ ಕೆರಳುವಂಥ, ಮಕ್ಕಳಿಗೆ, ಮುಗ್ಧಮನಸ್ಸಿನ ಜನರಿಗೆ ಬೆರಗು ಹುಟ್ಟಿಸುವಂಥ ಕತೆಗಳು ಹೇರಳವಾಗಿವೆ. ಆದರೆ ವೈಜ್ಞಾನಿಕವಾಗಿ, ವೈಚಾರಿಕವಾಗಿ ನಮಗೆ ಎಟುಕುವ ಸ್ಥಿತಿ 'ವ್ಯಕ್ತ ಮಧ್ಯ' ಎಂದು ಕರೆಯುವ ಬದುಕು. ಇದನ್ನು ಹಸನಾಗಿಟ್ಟುಕೊಂಡು ಸಾಮುದಾಯಿಕವಾಗಿ ಸುಖ, ಸಂತೋಷ, ನೆಮ್ಮದಿಗಳಿಂದ ಬದುಕುವುದು ಹೇಗೆ? ಎಂಬುದು ಗೌತಮ ಬುದ್ಧ ತನ್ನ ಬದುಕು–ಉಪದೇಶಗಳ ಮೂಲಕ ಮುನ್ನೆಲೆಗೆ ತಂದ ಜೀವನದೃಷ್ಟಿ. ಇದು ಮಾನವೀಯತೆ, ವೈಚಾರಿಕತೆ ಮತ್ತು ಸಾಮಾಜಿಕ ಕಳಕಳಿಯನ್ನು ಉಳ್ಳ ಎಲ್ಲ ಮನುಷ್ಯರ ಕಾಳಜಿ. ಬುದ್ಧ ತನ್ನ ಕಾಲದ ರಾಜಕೀಯ ಮತ್ತು ಸಾಮಾಜಿಕ ಅತಿರೇಕಗಳ ಹಿನ್ನೆಲೆಯಲ್ಲಿ ಭಾವನೆ–ಬದುಕುವ ರೀತಿ ಮತ್ತು ಸಂಬಂಧಗಳ ವಿಷಯದಲ್ಲಿ ಮಧ್ಯಮಮಾರ್ಗವನ್ನು ಆದರ್ಶ ಬದುಕಿನ ರೀತಿಯೆಂದು ಉಪದೇಶಿಸಿದ. ಇದು ಸುಭದ್ರ ಬದುಕಿನ ಅತಿರೇಕಗಳ ನಡುವಿನ ಆದರ್ಶ ಸ್ಥಿತಿಯೇ ಹೊರತು ಅಸ್ತಿತ್ವಕ್ಕಾಗಿ ಪರಿತಪಿಸುವ ಹಸಿದ ಜನರ ಹೋರಾಟಗಳ ನಡುವಿನ ಮಧ್ಯಮಮಾರ್ಗವಲ್ಲ. ಅಸ್ತಿತ್ವಕ್ಕಾಗಿ ನಡೆಸುವ ಹೋರಾಟದಲ್ಲಿ ಅತಿ–ರೇಕ ಎಂಬುದಿಲ್ಲ. ಜೀವ–ಮರಣಗಳ ನಡುವೆ ಜೀವಿಸುವ ಇಲ್ಲವೆ ಸಾಯುವ ಆಯ್ಕೆಗಳ ನಡುವೆ ನಿರಂತರ ಹೋರಾಟವಿದೆಯೇ ಹೊರತು ಯಾವ ಮಧ್ಯಮಮಾರ್ಗವೂ ಇಲ್ಲ.

ಬೌದ್ಧಮತದ ಜಪಾನೀ ಅವತರಣಿಕೆಯಾದ ಝೆನ್ ಮೂಲದ ಕತೆಗಳಲ್ಲಿ ಭೂತವನ್ನು ಮರೆತು ಭವಿಷ್ಯದ ಚಿಂತೆಯಿಲ್ಲದೆ ಸದ್ಯದ ಬದುಕನ್ನು ಬದುಕುವುದೇ ಸಾರ್ಥಕ ಬದುಕೆಂಬ ಧ್ವನಿಯಿದೆ. ಹೊಟ್ಟೆ ಬಟ್ಟೆಗೆ ಪರದಾಡಬೇಕಾದ ಚಿಂತೆಯಿಲ್ಲದೆ, ಹಣ, ಆಸ್ತಿ ಮಾಡಿಟ್ಟುಕೊಂಡ ಮಧ್ಯಮವರ್ಗೀಯರಿಗೆ ಅನುಭಾವ ಸಾಹಿತ್ಯದಂತೆ ತುಂಬಾ ಆಪ್ಯಾಯಮಾನವಾದ ಸಾಹಿತ್ಯ ಇದು. ಆದರೆ ದುಡಿಯುವ ಜನರಿಗೆ ಭೂತದ ಹಂಗಿಲ್ಲದೆ, ಭವಿಷ್ಯದ ಚಿಂತೆಯಿಲ್ಲದೆ ಬದುಕುವುದು ಎಂದರೇನು? ಹಾಗೆಯೇ ಎಷ್ಟು ಲಾಭ ಮಾಡಿಕೊಂಡರೂ ಇನ್ನೂ ಮಾಡಬೇಕೆಂದು ತಮ್ಮ ವ್ಯಾಪಾರ–ಉದ್ಯಮಗಳನ್ನು ನಿರಂತರವಾಗಿ ವಿಸ್ತರಿಸುತ್ತಾ ಹೋಗುವ ಬಂಡವಳಿಗರಿಗೆ ಭೂತದ ಹಂಗಿಲ್ಲದೆ, ಭವಿಷ್ಯದ ಚಿಂತೆಯಿಲ್ಲದೆ ಬದುಕುವುದು ಸಾಧ್ಯವೆ? ಸಾಧ್ಯವಿಲ್ಲ ಎಂದಾದರೆ ಮಧ್ಯಮವರ್ಗೀಯರಿಗೆ ಝೆನ್ ಗುರು ಹೇಳುವುದು ಇಷ್ಟೆ: ಚರಿತೆ–ಯ ಕಡೆ ನೋಡಬೇಡ. ಕಟ್ಟಬೇಕಾದ ಹೊಸ ಸಮಾಜದ ಬಗ್ಗೆ ತಲೆಕೆಡಿಸಿಕೊಳ್ಳಬೇಡ. ದುಡಿಯುವ ಜನರ ಮೇಲಿನ ಶ್ರೀಮಂತರ ಸರ್ವಾಧಿಕಾರದ ಪ್ರಭುತ್ವ ಶಕ್ತಿಯು ಮಧ್ಯಮವರ್ಗಿಯ ಜನರಿಗೆ ದಯಪಾಲಿಸುವ ಬಿಡುವಿನ ವೇಳೆಯನ್ನು ಸಾಹಿತ್ಯ–ಸಂಗೀತ–ಸಂಸ್ಕೃತಿ ಚಿಂತನೆಗಳಲ್ಲಿ ಮುಳುಗಿ ಜೀವನ ಸಾರ್ಥಕವಾಯಿತೆಂದು ನಂಬುವುದೇ ಮಧ್ಯಮಮಾರ್ಗ. ●



ಸೇವಾ ಭದ್ರತೆಗಾಗಿ ಒತ್ತಾಯಿಸಿ ಬೆಂಗಳೂರಿನಲ್ಲಿ ಅತಿಥಿ ಉಪನ್ಯಾಸಕರ ಅನಿರ್ದಿಷ್ಟಾವಧಿ ಉಪವಾಸ ಸತ್ಯಾಗ್ರಹ ನಡೆಯುತ್ತಿದೆ.

ಕಾಂ. ಮಾಣಿಕ್ ಸರ್ಕಾರ್ ಮತ್ತು ತ್ರಿಪುರಾ ಎಡರಂಗ ಸರ್ಕಾರ



ಆಡಳಿತದಲ್ಲಿಯೂ ಮಾಣಿಕ್ ಸರ್ಕಾರರ ನೇತೃತ್ವದ ಎಡರಂಗ ಸರ್ಕಾರ ಹೊಸ ಮಾದರಿಯನ್ನು ದೇಶದ ಮುಂದಿಟ್ಟಿದೆ. .. .. ಯಾವ ಜನ ಸಮುದಾಯಕ್ಕೆ ಯೋಜನೆಗಳ ಪ್ರಯೋಜನ ದೊರಕುತ್ತದೆ–ಯೋ ಆ ಜನರೇ ಆ ಯೋಜನೆಗೆ ಬೇಕಾದ ವಸ್ತುಗಳ ಖರೀದಿಯಲ್ಲಿ ಮತ್ತು ಯೋಜನೆಯ ಜಾರಿಯಲ್ಲಿ ಪಾಲ್ಗೊಳ್ಳುತ್ತಾರೆ. ಹೀಗೆ ಪ್ರತಿಯೊಂದು ಇಲಾಖೆಯಲ್ಲಿಯೂ ಜನರ ಪಾಲ್ಗೊಳ್ಳುವಿಕೆಯ ಉದಾಹರಣೆಗಳನ್ನು ನೀಡಬಹುದು. ಇದರಿಂದಾಗಿ ಭ್ರಷ್ಟಾಚಾರ ನಿಯಂತ್ರಣಗೊಳ್ಳುತ್ತದೆ. ಯೋಜನೆಗಳ ಗುಣಮಟ್ಟ ಹೆಚ್ಚುತ್ತದೆ. ಮಾತ್ರವಲ್ಲ ಸೀಮಿತ ಸಂಪನ್ಮೂಲದಲ್ಲಿ ಅತಿ ಹೆಚ್ಚು ಸಾಧನೆಯನ್ನು ಮಾಡಲಾಗಿದೆ.

ಜಿ.ಎನ್. ನಾಗರಾಜ್

ಬರಲಿರುವ ಜನವರಿ 22 ರಂದು 68 ವರ್ಷಕ್ಕೆ ಕಾಲಿಡಲಿರುವ ಮಾಣಿಕ್ ಸರ್ಕಾರ್ ರವರು ಈಗ ಅಧಿಕಾರದಲ್ಲಿರುವ ಎಲ್ಲ ಮುಖ್ಯ ಮಂತ್ರಿಗಳಿಗಿಂತ ದೀರ್ಘಕಾಲದಿಂದ ಮುಖ್ಯ ಮಂತ್ರಿಯಾಗಿ ಸೇವೆ ಸಲ್ಲಿಸಿದ ದಾಖಲೆ ಹೊಂದಿದ್ದಾರೆ. 18 ವರ್ಷಗಳಿಗಿಂತ ಹೆಚ್ಚು ಕಾಲ ಮುಖ್ಯ ಮಂತ್ರಿಗಳಾಗಿ ಅಧಿಕಾರದಲ್ಲಿದ್ದರೂ ಕೂಡ ಸ್ವಂತಕ್ಕೆ ಒಂದು ಮನೆಯಾಗಲೀ, ಒಂದು ಕಾರು ಕೂಡ ಇಲ್ಲದ ದೇಶದ ಅತ್ಯಂತ ಸ್ವಚ್ಛ, ಪ್ರಾಮಾಣಿಕ ಹಾಗೂ ಬಡ ಮುಖ್ಯಮಂತ್ರಿ ಎಂದು ಹೆಸರಾಗಿದ್ದಾರೆ. ಪತ್ರಿಕೆಗಳು ನೀಡಿದ ಈ ಬಿರುದನ್ನು ಅವರು ಹೆಮ್ಮೆಯಿಂದಲೇ ಸ್ವೀಕರಿಸಿದ್ದಾರೆ. ಅವರು ತಮ್ಮ ಮುಖ್ಯಮಂತ್ರಿ ಪಟ್ಟದ ಎಲ್ಲ ವೇತನವನ್ನೂ ತಮ್ಮ ಪಕ್ಷ–ಕ್ಕೆ ದೇಣಿಗೆಯಾಗಿ ನೀಡಿ ಪಕ್ಷದಿಂದ ಕೇವಲ 5000 ರೂ ಜೀವನ ಭತ್ಯೆಯನ್ನು ಸ್ವೀಕರಿಸುತ್ತಾರೆ. ಈಗಲೂ ತಮ್ಮ ಬಟ್ಟೆ ತಾವೆ ಒಗೆದುಕೊಳ್ಳುವ ಇವರು ಕೇವಲ ಹತ್ತಿಯ ಬಿಳಿ ಜುಬ್ಬಾ ಮತ್ತು ಪೈಜಾಮ ಇವರ ಧಿರಿಸು. ಸಾಮಾನ್ಯರಲ್ಲಿ ಸಾಮಾನ್ಯನಾಗಿ ಅತ್ಯಂತ ಸರಳವಾದ ಜೀವನ ನಡೆಸುತ್ತಾರೆ. 19 ನೆಯ ವಯಸ್ಸಿನಲ್ಲಿ ವಿದ್ಯಾರ್ಥಿ ಜೀವನದಲ್ಲಿಯೇ ಸಾಮಾಜಿಕ ಚಳುವಳಿಗೆ ಅಡಿಯಿಟ್ಟ ಮಾಣಿಕ್ ಸರ್ಕಾರ್‌ರವರು ಅಂದಿನಿಂದ ದಿನಕ್ಕೆ 12–16 ಗಂಟೆಗಳ ಕಾಲದ ದುಡಿಮೆ.

ಅವರ ಪತ್ನಿ ಪಾಂಚಾಲಿ ಸರ್ಕಾರ್ ರವರು ಕೂಡ ಯಾವ ಸರ್ಕಾರಿ ವಾಹನಗಳನ್ನು ಬಳಸದೇ ಬಸ್ ಮೊದಲಾದ ಸಾರ್ವಜನಿಕ ವಾಹನಗಳಲ್ಲಿಯೇ ಓಡಾಡುತ್ತಾರೆ. ಯಾವುದೇ ಸರ್ಕಾರಿ ಸೆಕ್ಯೂರಿಟಿ ವ್ಯವಸ್ಥೆಯನ್ನು ಬಳಸದೇ ಮಾರುಕಟ್ಟೆ ಮತ್ತಿತರ ಜಾಗಗಳಲ್ಲಿ ಒಬ್ಬೊಬ್ಬರೇ ಅಡ್ಡಾಡುವುದು ತ್ರಿಪುರಾದ ರಾಜಧಾನಿಯ ಪ್ರಜೆಗಳಿಗೆ ಸಾಮಾನ್ಯ ದೃಶ್ಯ.

ಭ್ರಷ್ಟಾಚಾರ ತುಂಬಿ ತುಳುಕಾಡುತ್ತಿರುವ ಇಂದಿನ ರಾಜಕಾರಣದಲ್ಲಿ ಒಬ್ಬ ಮಂತ್ರಿಯಾಗಿ/ಶಾಸಕನಾಗಿ ಕೆಲ ತಿಂಗಳುಗಳಲ್ಲಿಯೇ ಕೊಳ್ಳಲು ಆಸ್ತಿ ಹುಡುಕಾಡುವ ಲಕ್ಷಗಟ್ಟಲೆ ಹಣವನ್ನು ದಿನನಿತ್ಯ ಚೆಲ್ಲಾಡುವ ಈ ದಿನಗಳಲ್ಲಿ ಮಾಣಿಕ್ ಸಕಾರ್ ರವರದು ಕೋಟಿಗೊಂದು ಎನ್ನುವ ಉದಾಹರಣೆ. ತ್ರಿಪುರಾದ ನಾಗರಿಕರು ದೇಶದಲ್ಲಿ ಇಂತಹ ಮಾದರಿ ಮುಖ್ಯಮಂತ್ರಿ ಮತ್ತು ಪತ್ನಿ ಮತ್ಯಾರಿದ್ದಾರೆ ಎಂದು ಸವಾಲು ಹಾಕುತ್ತಾರೆ.

ಪ್ರಜಾಪ್ರಭುತ್ವವೆಂದರೆ ಪ್ರಜೆಗಳದೇ ಆಡಳಿತ

ಆಡಳಿತದಲ್ಲಿಯೂ ಮಾಣಿಕ್ ಸರ್ಕಾರರ ನೇತೃತ್ವದ ಎಡರಂಗ ಸರ್ಕಾರ ಹೊಸ ಮಾದರಿಯನ್ನು ದೇಶದ ಮುಂದಿಟ್ಟಿದೆ. ಸಾಮಾನ್ಯವಾಗಿ ಪ್ರಜಾಪ್ರಭುತ್ವವೆಂದರೆ ಜನಗಳು ಐದು ವರ್ಷಕ್ಕೊಮ್ಮೆ ಮತದಾನ ಮಾಡಿ ಪ್ರತಿನಿಧಿಗಳನ್ನು ಆರಿಸುವುದು ನಂತರ ಮುಖ್ಯಮಂತ್ರಿಗಳ ಸಚಿವ ಸಂಪುಟ ಅಧಿಕಾರಿಗಳ ನೆರವಿನಿಂದ ಆಡಳಿತ ನಡೆಸುವುದು. ಜನರು ಚುನಾಯಿತ ಪ್ರತಿನಿಧಿಗಳ ಹಾಗೂ ಅಧಿಕರಶಾಹಿಯ ದಬ್ಬಾಳಿಕೆ, ಭ್ರಷ್ಟಾಚಾರ, ವಿಳಂಬ ನೀತಿಗೆ ತುತ್ತಾಗಿ ಒದ್ದಾಡುವುದು ಎಂದಾಗಿಬಿಟ್ಟಿದೆ. ದಿನನಿತ್ಯದ ಆಡಳಿತದಲ್ಲಿ ಜನ ಸಾಮಾನ್ಯರಿಗೆ ಯಾವ ಪಾತ್ರವೂ ಇಲ್ಲ. ಅವರದೇ ಬದುಕಿನ ಮೇಲೆ ಒಳ್ಳೆಯ ಪರಿಣಾಮ ಬೀರುವ ಸಂಗತಿಗಳ ಬಗ್ಗೆ ಕೂಡ ಅವರ ಅಭಿಪ್ರಾಯ ಕೇಳುವರಾರಿಲ್ಲ. ಆದರೆ ಮಾಣಿಕ್ ಸಕಾರ್ ರವರು ಪ್ರಜಾಪ್ರಭುತ್ವವೆಂದರೆ ಪ್ರಜೆಗಳೇ ಆಡಳಿತ ನಡೆಸುವುದು ಎಂದು ಬಲವಾಗಿ ಪ್ರತಿಪಾದಿಸುತ್ತಾರೆ. ಆಗ ಮಾತ್ರ ವಿವಿಧ ಹಂತಗಳ ಆಡಳಿತದಲ್ಲಿ ಭ್ರಷ್ಟಾಚಾರವನ್ನು ನಿಯಂತ್ರಿಸಲು ಮತ್ತು ವಿವಿಧ ಆಡಳಿತದ ಕ್ರಮಗಳು ಯೋಜನೆಗಳು ಪರಿಣಾಮಕಾರಿಯಗಲು ಸಾಧ್ಯ ಎನ್ನುತ್ತಾರೆ. ಪೋಲೀಸು, ಭೂಮಿ, ಅರಣ್ಯ, ಗ್ರಾಮೀಣ ಅಭಿವೃದ್ಧಿ, ಆದಿವಾಸಿಗಳ ಬದುಕು ಮೊದಲಾದ ಯಾವುದೇ ವಿಷಯಕ್ಕೆ ಸಂಬಂಧಿಸಿದ ಆಡಳಿತವೇ ಇರಲಿ, ಪ್ರತಿಯೊಂದರಲ್ಲಿಯೂ ಜನರೇ ಮುಖ್ಯ ಪಾತ್ರ ವಹಿಸಲು ಅವಕಾಶ ನೀಡುವ ನಿಯಮಗಳನ್ನು ಮತ್ತು ಆಡಳಿತ ಕ್ರಮಗಳನ್ನು ರೂಪಿಸಿದ್ದಾರೆ.

ಬೇರಾವ ವಿಷಯದಲ್ಲಿ ಜನರ ಅಭಿಪ್ರಾಯಗಳಿಗೆ ಅವಕಾಶ ನೀಡಿದರೂ ಭ್ರಷ್ಟ ಆಡಳಿತಗಳ ಆಧಾರವಾದ ಪೋಲೀಸು ಇಲಾಖೆಯಲ್ಲಿ ಜನರ ಪಾತ್ರಕ್ಕೆ ಅವಕಾಶ ನೀಡುವುದು ಕಷ್ಟಕರ. ಆದರೆ ತ್ರಿಪುರಾದಲ್ಲಿ ಪೋಲೀಸು ಎಂದರೆ ಜನರ ಮೇಲೆ ದಬ್ಬಾಳಿಕೆ ನಡೆಸುವ ಸಾಧನವಲ್ಲ. ಆಧ್ದರಿಂದ ಪೋಲೀಸು ಆಡಳಿತದಲ್ಲಿ ಜನ ಸಾಮಾನ್ಯರಿಗೆ ಅವಕಾಶ ಕಲ್ಪಿಸಲಾಗಿದೆ. ಪ್ರತಿಯೊಂದು ಪೋಲೀಸು ಠಾಣೆಗಳ ಆಡಳಿತ ಪ್ರದೇಶವನ್ನು ಬೀಟುಗಳಾಗಿ ವಿಂಗಡಿಸುವುದು ಸಾಮಾನ್ಯ ರೂಢಿ. ತ್ರಿಪುರಾದಲ್ಲಿ ಪ್ರತಿ ಬೀಟಿಗೆ ಸೇರಿದ ಪಂಚಾಯತಿಗಳು ಅಥವಾ ನಗರಗಳ ವಾರ್ಡ್ ಗಳಲ್ಲಿ ವಾಸವಿರುವ ದಲಿತ, ಆದಿವಾಸಿಗಳು, ಹಿಂದುಳಿದ ಜಾತಿಗಳು, ಮಹಿಳೆಯರಿಂದ ಆಯ್ದ ಬೀಟ್ ಸಮಿತಿಗಳನ್ನು ರಚಿಸಲಾಗಿದೆ. ಈ ಸಮಿತಿಗಳು ದಿನದ 24 ಗಂಟೆಗಳ ಕಾಲವೂ ಜನರ ಮತ್ತು ಪೋಲೀಸರ ನಡುವಣ ಸಂಬಂಧ ಮತ್ತು ಸಂಪರ್ಕದ ಕೊಂಡಿಗಳಾಗಿವೆ. ತಿಂಗಳಿಗೊಮ್ಮೆ ಈ ಸಮಿತಿಗಳು ಕಡ್ಡಾಯವಾಗಿ ಸಭೆ ನಡೆಸುತ್ತವೆ. ವರ್ಷದಲ್ಲಿ ಕೆಲವು ಬಾರಿ ಆ ಬೀಟು ಪ್ರದೇಶದ ಜನರನ್ನು ಒಳಗೊಂಡು ಸಭೆ ನಡೆಸಲಾಗುತ್ತದೆ. ಜನರಿಗೆ ಪೋಲೀಸು ಕಾನೂನುಗಳ ಬಗ್ಗೆ ಮಹಿಳೆಯರಿಗೆ, ದಲಿತ, ಆದಿವಾಸಿಗಳಿಗೆ ಅವರಿಗೆ ಸಂಬಂಧಿಸಿದ ಕಾನೂನುಗಳ ಬಗ್ಗೆ ತಿಳುವಳಿಕೆ ನೀಡಲಾಗುತ್ತದೆ. ಆ ಪ್ರದೇಶದಲ್ಲಿ ನಡೆಯುತ್ತಿರುವ ಮನೆಯೊಳಗೆ, ಹೊರಗೆ ಮಹಿಳೆಯರ ಮೇಲಿನ ದೌರ್ಜನ್ಯಗಳು, ಆದಿವಾಸಿ, ದಲಿತರ ಮೇಲಿನ ದೌರ್ಜನ್ಯಗಳು, ಮಾದಕ ವಸ್ತುಗಳ ಮಾರಾಟ ಮೊದಲಾದ ಕ್ರಿಮಿನಲ್ ಕೃತ್ಯಗಳು, ಭಯೋತ್ಪಾದನೆಗಳ ಬಗ್ಗೆ ಈ ಸಭೆಗಳಲ್ಲಿ ಚರ್ಚಿಸಲಾಗುತ್ತದೆ.

ತ್ರಿಪುರಾ ರಾಜ್ಯ ಶೇ. 60 ರಷ್ಟು ಅರಣ್ಯದಿಂದ ಆವೃತ್ತಾಗಿರುವ ಪ್ರದೇಶ. ಈ ಅರಣ್ಯದ ರಕ್ಷಣೆ, ಅಭಿವೃದ್ಧಿ, ಅದರ ಪ್ರಧಾನ ಮತ್ತು ಉಳಿಕೆ ಉತ್ಪನ್ನಗಳ ಸಂಗ್ರಹ, ಔಷಧೀಯ ಸಸ್ಯಗಳ ಬೆಳವಣಿಗೆ ಹಾಗೂ ಆಡಳಿತಗಳಲ್ಲಿ ಆದಿವಾಸಿಗಳು, ಅರಣ್ಯದಂಚಿನಲ್ಲಿ ವಾಸಿಸುವ ಜನರನ್ನು ಒಳಗೊಳ್ಳಲಾಗುತ್ತದೆ. ಸ್ವಸಹಾಯ ಗುಂಪುಗಳು, ಜಂಟಿ ಅರಣ್ಯ ನಿರ್ವಹಣಾ ಸಮಿತಿಗಳು, ಕುಶಲಕರ್ಮಿಗಳ ಸಹಕಾರ ಸಂಘಗಳು ಇವುಗಳ ಮೂಲಕ ನಡೆಸಲಾಗುತ್ತದೆ. ಅರಣ್ಯವನ್ನು ಬೆಳೆಸುವ ಯೋಜನೆಯನ್ನು ತಯಾರಿಸುವವರೂ ಮತ್ತು ಅದನ್ನು ಬೆಳೆಸುವರೂ ಈ ಸಮಿತಿಗಳ ಜನರೇ ಆಗಿದ್ದಾರೆ. ಹಾಗೆಯೇ ಗ್ರಾಮೋದಯ ಎಂಬ ಪರಿಕಲ್ಪನೆಯಡಿಯಲ್ಲಿ ಗ್ರಾಮೀಣ ಅಭಿವೃದ್ಧಿಯ ಯೋಜನೆಗಳನ್ನು ತಂತಮ್ಮ ಅವಶ್ಯಕತೆಗಳಿಗನುಗುಣವಾಗಿ ರೂಪಿಸುವವರೂ ಮತ್ತು ಜಾರಿಗೆ ತರುವವರೂ ಸಂಬಂಧ ಪಟ್ಟ ಗ್ರಾಮಗಳ ಜನರೇ. ನಗರಾಭಿವೃದ್ಧಿಯನ್ನು ನಗರೋದಯ ಯೋಜನೆಯ ಮೂಲಕ ವಾರ್ಡ್ ಸಮಿತಿಗಳಲ್ಲಿ ಜನರ ಅವಶ್ಯಕತೆ ಮತ್ತು ಅಭಿವೃದ್ಧಿ ಸೂಚ್ಯಾಂಕಗಳಿಗನುಗುಣವಾಗಿ ರೂಪುಗೊಳ್ಳುತ್ತವೆ. ಯಾವ ಜನ ಸಮುದಾಯಕ್ಕೆ ಯೋಜನೆಗಳ ಪ್ರಯೋಜನ ದೊರಕುತ್ತದೆ–ಯೋ ಆ ಜನರೇ ಆ ಯೋಜನೆಗೆ ಬೇಕಾದ ವಸ್ತುಗಳ ಖರೀದಿಯಲ್ಲಿ ಮತ್ತು ಯೋಜನೆಯ ಜಾರಿಯಲ್ಲಿ ಪಾಲ್ಗೊಳ್ಳುತ್ತಾರೆ. ಹೀಗೆ ಪ್ರತಿಯೊಂದು ಇಲಾಖೆಯಲ್ಲಿಯೂ ಜನರ ಪಾಲ್ಗೊಳ್ಳುವಿಕೆಯ ಉದಾಹರಣೆಗಳನ್ನು ನೀಡಬಹುದು.

ಇದರಿಂದಾಗಿ ಭ್ರಷ್ಟಾಚಾರ ನಿಯಂತ್ರಣಗೊಳ್ಳುತ್ತದೆ. ಯೋಜನೆಗಳ ಗುಣಮಟ್ಟ ಹೆಚ್ಚುತ್ತದೆ. ಮಾತ್ರವಲ್ಲ ಸೀಮಿತ ಸಂಪನ್ಮೂಲದಲ್ಲಿ ಅತಿ ಹೆಚ್ಚು ಸಾಧನೆಯನ್ನು ಮಾಡಲಾಗಿದೆ. ರೈತರಿಗೆ ಶೇ. 55 ರಷ್ಟು ನೀರಾವರಿ, ಆದಿವಾಸಿ ಪ್ರದೇಶಗಳಲ್ಲಿಯೂ ರಸ್ತೆ, ಶಾಲೆ, ಆಸ್ಪತ್ರೆ ಮೊದಲಾದ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಸಾಧ್ಯವಾಗಿದೆ. ಹೆಚ್ಚು ಆದಿವಾಸಿ ಜನರನ್ನುಳ್ಳ ರಾಜ್ಯವಾದರೂ ದೇಶದಲ್ಲಿಯೇ ಅತಿ ಹೆಚ್ಚು –ಶೇ. 96.4 ರಷ್ಟು ಸಾಕ್ಷರತೆಯನ್ನು ಸಾಧಿಸಿದ ರಾಜ್ಯವಾಗಿದೆ. ಸಾಕ್ಷರತೆಯ ಸಾಧನೆಗೆ ದೇಶ ಪ್ರಸಿದ್ಧವಾದ ಕೇರಳವನ್ನೂ ಮೀರಿಸಿದೆ. ಹೊರತುಪಡಿಸಿದರೆ ನೇಕಾರ, ಸಮಗಾರ, ಕ್ಷೌರಿಕ, ಅಗಸ, ರಿಕ್ಷಾ ಎಳೆಯುವವ, ವಾಹನ ರಿಪೇರಿಕಾರ, ಬೀಡಿ ಕಾರ್ಮಿಕ ಮೊದಲಾದ ಕುಶಲಕರ್ಮಿಗಳನ್ನು, ಕ್ಯಾನ್ಸರ್, ಏಡ್ಸ್ ಪೀಡಿತರನ್ನೂ ಒಳಗೊಂಡಂತೆ 29 ಕ್ಕಿಂತ ಹೆಚ್ಚು ಸಾಮಾಜಿಕ ಭದ್ರತೆಯ ಮಾಸಾಶನಗಳನ್ನು ನೀಡಿದ ರಾಜ್ಯವೂ ಆಗಿದೆ. ಬಡತನ ರೇಖೆಯ ಮೇಲಿರುವ ಕೆಲವರಿಗೂ ಕೂಡ ಮಾಸಾಶನ ನೀಡುವ ಅಪರೂಪದ ಪದ್ಧತಿ ಇಲ್ಲಿದೆ. ಆಹಾರ ಭದ್ರತೆಯಲ್ಲಿ 35 ಕೆಜಿ. ಅಕ್ಕಿಯ ಜೊತೆಗೆ ಸಕ್ಕರೆ, ಎರಡು ಕೇಜಿ ಬೇಳೆ, ಒಂದು ಕೇಜಿ ಅಡಿಗೆ ಎಣ್ಣೆಗಳನ್ನೂ ನೀಡಲಾಗುತ್ತದೆ. ಏಪಿಎಲ್ ಕುಟುಂಬಗಳಿಗೂ 22 ಕೆ.ಜಿ. ಅಕ್ಕಿ ಆರು ರೂಗೆ ದೊರಕುತ್ತದೆ. ದೇಶದೆಲ್ಲೆಡೆ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಮಾತ್ರ ಜಾರಿಯಲ್ಲಿದ್ದರೆ ಇಲ್ಲಿ ನಗರ ಪ್ರದೇಶಗಳಿಗಾಗಿಯೇ ಒಂದು ವಿಶಿಷ್ಟ ಉದ್ಯೋಗ ಖಾತರಿ ಯೋಜನೆಯನ್ನು ಜಾರಿಗೊಳಿಸಿದೆಎಡರಂಗ ಸರ್ಕಾರ. ಗ್ರಾಮೀಣ ಉದ್ಯೋಗ ಖಾತರಿಯಲ್ಲಿ ಕೂಡ ಪ್ರತಿಯೊಬ್ಬ ಕೂಲಿಕಾರ/ರ್ತಿಗೆ ದೇಶದಲ್ಲಿಯೇ ಅತಿ ಹೆಚ್ಚು ದಿನಗಳ ಕಾಲ ಕೆಲಸ ಒದಗಿಸುವುದು ಮಾತ್ರವಲ್ಲದೆ ಅದನ್ನು ಗ್ರಾಮೀಣ ಅಭಿವೃದ್ಧಿಯ ಮುಖ್ಯ ಸಾಧನವಾಗಿಸಿದ ಕೀರ್ತಿ ತ್ರಿಪುರಾದ ಎಡರಂಗ ಸರ್ಕಾರಕ್ಕೆ ಸಲ್ಲುತ್ತದೆ.

ಆದಿವಾಸಿಗಳ ಬದುಕು, ಭಾಷೆ

ಇತ್ತೀಚೆಗೆ ನಮ್ಮ ರಾಜ್ಯದ ಕೊಡಗು ಜಿಲ್ಲೆಯಲ್ಲಿ ಆದಿವಾಸಿಗಳನ್ನು ಅವರ ಗಡಿಸಲುಗಳಿಂದ ಹೊರಹಾಕುವ ಬಗ್ಗೆ ಅವರು ಬೆತ್ತಲೆ ಪ್ರತಿಭಟನೆ ಮಾಡಬೇಕಾದ ಪರಿಸ್ಥಿತಿಯನ್ನು ನೋಡಿದೆವು. ಇಂತಹ ಘಟನೆ ತ್ರಿಪುರಾದಲ್ಲಿ ಸಾಧ್ಯವೇ ಇಲ್ಲ. ಈಶಾನ್ಯ ಭಾರತದಲ್ಲಿ ಆದಿವಾಸಿಗಳ ಸಂಘಟನೆಗಳಿಂದ ಭಯೋತ್ಪಾದನೆ ದಿನನಿತ್ಯದ ಮಾತಾಗಿರುವ ಸಂದರ್ಭದಲ್ಲಿ, ಆದಿವಾಸಿಗಳು ಮತ್ತು ಆದಿವಾಸಿಯೇತರರ ನಡುವೆ ದ್ವೇಷ, ಹಿಂಸೆ ಹೊತ್ತಿ ಉರಿಯುತ್ತಿರುವ ಸಂದರ್ಭದಲ್ಲಿ ಆದಿವಾಸಿಗಳೇ ಬಹು ಸಂಖ್ಯಾತರಾಗಿರುವ ರಾಜ್ಯವಾದ ತ್ರಿಪುರಾದಲ್ಲಿ ಆದಿವಾಸಿಗಳ ನೆಚ್ಚುಗೆ ಗಳಿಸಿದ ಆದಿವಾಸಿಯೇತರ ನಾಯಕ ಮಾಣಿಕ್ ಸರ್ಕಾರವರು. ಆದಿವಾಸಿಗಳಿಗೆ ಅರಣ್ಯದೊಳಗೆ ಕೃಷಿ ನಡೆಸುವ ಪಟ್ಟಾ, ವಾಸದ ಮನೆಯ ಪಟ್ಟಾ ನೀಡಿಕೆಯಲ್ಲಿ ದೇಶದಲ್ಲಿ ಮೊದಲ ಸ್ಥನ ಪಡೆದಿದೆ. ಅರಣ್ಯದ ಉಪ ಉತ್ಪನ್ನಗಳನ್ನು ಬಳಸಿಕೊಳ್ಳುವ ಸ್ವಾತಂತ್ರ್ಯ, ಅರಣ್ಯದ ಮರ ಮಟ್ಟುಗಳೆಂಬ ಪ್ರಧಾನ ಉತ್ಪನ್ನಗಳಲ್ಲಿ ಶೇ 50 ರಷ್ಟು ಆದಾಯ ಮೊದಲಾದ ಅರಣ್ಯದ ಹಕ್ಕುಗಳನ್ನು ಖಾತರಿಗೊಳಿಸಿದ್ದಾರೆ.

ಆದಿವಾಸಿಗಳ ಸಂಸ್ಕೃತಿಯನ್ನು ಸ್ವಾಯತ್ತತೆಯನ್ನು ಸಂರಕ್ಷಿಸಲು ಅವರು ವಾಸ ಮಾಡುವ ಪ್ರದೇಶಗಳಲ್ಲಿ ಅವರದೇ ಆದ ಆದಿವಾಸಿ ಪ್ರದೇಶ ಸ್ವಾಯತ್ತ ಆಡಳಿತ ಮಂಡಳಿಯನ್ನು ರಚಿಸಲಾಗಿದೆ. ಕೇವಲ ಆದಿವಾಸಿಗಳೇ ಮತದಾರರಾದ ಈ ಮಂಡಳಿ ಅವರ ಎಲ್ಲಾ ಅಭಿವೃದ್ಧಿ ಹಾಗೂ ಹಕ್ಕುಗಳ ಖಾತರಿಗೆ ಹೊಣೆಗಾರನಾಗಿದೆ. ಇದೂ ಕೂಡ ದೇಶದಲ್ಲಿಯೇ ವಿಶೇಷವಾದದ್ದು. ಈಶಾನ್ಯ ಭಾರತದ ಒಂದೆರಡು ರಾಜ್ಯಗಳಲ್ಲಿ ಸ್ವಾಯತ್ತ ಮಂಡಳಿಗಳನ್ನು ರಚಿಸಿದ್ದರೂ ಒಂದೇ ರಾಜ್ಯದಲ್ಲಿ ಬೇರೆ ಬೇರೆ ಬುಡಕಟ್ಟುಗಳಿಗೆ ಬೇರೆ ಬೇರೆ ಪ್ರ ತ್ಯೇಕ ಮಂಡಳಿಗಳನ್ನು ರಚಿಸಲಾಗಿದೆ. ತ್ರಿಪುರಾದಲ್ಲಿ ಇಂತಹ ಬುಡಕಟ್ಟು ಪ್ರತ್ಯೇಕತೆಗೆ ಅವಕಾಶ ನೀಡದೆ ಎಲ್ಲ ಬುಡಕಟ್ಟುಗಳಿಗೂ ಕೂಡ ಒಂದೇ ಸ್ವಾಯತ್ತ ಮಂಡಳಿ ರಚಿಸಲಾಗಿದೆ. ಆದಿವಾಸಿಗಳ ಭಾಷೆಯನ್ನು ರಾಜ್ಯದ ಎರಡನೇ ಆಡಳಿತ ಭಾಷೆಯೆಂದು ಪರಿಗಣಿಸಿ ಅದನ್ನು ಸಾಕ್ಷರತೆಯ ಮತ್ತು ಶಿಕ್ಷಣದ ಭಾಷೆಯನ್ನಾಗಿ ಮಾಡಿದ ಕೀರ್ತಿ ಎಡರಂಗ ಸರ್ಕಾರದ್ದು.

ಆದ್ದರಿಂದಲೇ ಇಲ್ಲಿ ತಲೆದೋರಿದ್ದ ಭಯೋತ್ಪಾದನೆಯನ್ನು ನಿವಾರಿಸಲು ಸಾಧ್ಯವಾಯಿತು ಮತ್ತು ಈಶಾನ್ಯ ರಾಜ್ಯಗಳಲ್ಲಿಯೇ ಆದಿವಾಸಿ ಮತ್ತು ಆದಿವಾಸಿಯೇತರರ ನಡುವೆ ಮಧುರ ಸಂಬಂಧಕ್ಕೆ ಮಾದರಿಯಾಗಿದೆ. ಕುಖ್ಯಾತವಾದ, ಜನಸಾಮಾನ್ಯರ ಮೇಲೆ ವಿವಿದ ರೀತಿಯ ದಬ್ಬಾಳಿಕೆ ಮತ್ತು ಮಹಿಳೆಯರ ಮೇಲೆ ಅತ್ಯಾಚಾರ ನಡೆಸಿದರೂ ಕ್ರಮ ಜರುಗಿಸಲು ಅವಕಾಶ ನೀಡದ ಮಣಿಪುರ, ನಾಗಲ್ಯಾಂಡ್ ಗಳಲ್ಲಿ ಕಾಶ್ಮೀರದಲ್ಲಿಯೂ ಬೃಹತ್ ಪ್ರತಿಭಟನೆಗಳಿಗೆ ಕಾರಣವಾದ ಎ.ಎಫ್.ಎಸ್.ಪಿ.ಎ ಎಂಬ ವಿಶೇಷ ಮಿಲಿಟರಿ ಅಧಿಕಾರದ ಕಾನೂನಿನ ಜಾರಿಯನ್ನು ತೆಗೆದುಹಾಕಲೂ ಸಾಧ್ಯವಾಯಿತು. ●



ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ AIAWU ರಾಜ್ಯ ಸಮಿತಿಯು 2017–18 ರ ಸಾಲಿನ ರಾಜ್ಯ ಬಜೆಟ್ ನಲ್ಲಿ ಕೃಷಿ ಕೂಲಿಕಾರರಿಗೆ ಸಮಗ್ರ ಕಾನೂನು, ಕಲ್ಯಾಣ ನಿಧಿ, ಬರ ನಿರ್ವಹಣೆ, ನೋಟ್ ನಿಷೇದದಿಂದ ಹಾನಿಗೀಡಾದವರಿಗೆ ಪರಿಹಾರ, ಉದ್ಯೋಗ ಖಾತ್ರಿ ಯೋಜನೆಯ ವಿಸ್ತರಣೆ, ವಾಸಕ್ಕೆ ಮನೆ, ಸಮರ್ಪಕ ರೇಷನ್ ವ್ಯವಸ್ಥೆ, ಸಾಲ ಸೌಲಭ್ಯ, ಅನಧೀಕೃತ ಸಾಗುವಳಿ ಸಕ್ರಮ, ಸಾಮಾಜಿಕ ಭದ್ರತೆ ಬಲಪಡಿಸುವುದು, ದಲಿತರಿಗೆ, ದೇವದಾಸಿಯರಿಗೆ ಭೂಮಿ ವಿತರಣೆ, ದೌರ್ಜನ್ಯಕ್ಕೀಡಾಗುವ ದಲಿತರಿಗೆ ಪುನರ್ವಸತಿ ಪ್ಯಾಕೇಜ್ ಘೋಷಿಸಲು ಒತ್ತಾಯಿಸಿ ಕೃಷಿಕೂಲಿಕಾರರ ರಾಜ್ಯ ಮಟ್ಟದ ಧರಣಿ ದಿನಾಂಕ 9/2/2017ರಂದು ಬೆಂಗಳೂರಿನ ಮಹಾತ್ಮ ಗಾಂಧಿ ಪ್ರತಿಮೆ ಎದುರು ನಡೆಸಲಾಯಿತು. ಈ ಧರಣಿಯಲ್ಲಿ ಅಖಿಲ ಭಾರತ ಅಧ್ಯಕ್ಷರಾದ ತಿರುವನಕ್ಕರಸುರವರು ಭಾಗವಹಿಸಿದ್ದರು.

ನೋಟುರದ್ಧತಿಯ ನಂತರ ಈಗ ಕಾರ್ಮಿಕರಿಗೆ ನಗದುರಹಿತ ಸಂಬಳ ಪಾವತಿ ಸಂಕಟ

ನೋಟು ರದ್ಧತಿಯ ನಂತರ ಅದರಿಂದಾಗಿ ಉದ್ಯೋಗ ಕಳಕೊಂಡವರ ಗೋಳು ಒಂದು ಕಡೆಯಾದರೆ, ಇನ್ನೊಂದೆಡೆಯಲ್ಲಿ ಹೇಗೋ ಉದ್ಯೋಗ ಉಳಿದುಕೊಂಡರೂ ಮೊದಲಿಗೆ ಮಾಲಕರಿಂದ ನಿರ್ವಾಹವಿಲ್ಲದೆ ಹಳೆ ರದ್ದಾದ ನೋಟುಗಳಲ್ಲೇ ಸಂಬಳ, ನಂತರ ಸಂಬಳ ಪಾವತಿಯಲ್ಲಿ ವಿಳಂಬ, ಈಗ ಸಂಬಳವನ್ನು ಚೆಕ್‌ಗಳಲ್ಲೇ ಅಥವ ಬ್ಯಾಂಕ್ ಖಾತೆಗಳಿಗೆ ವರ್ಗಾವಣೆಯ ಮೂಲಕವೇ ಕೊಡಬೇಕೆಂಬ ಸುಗ್ರೀವಾಜ್ಞೆ(ಈಗ ಅದು ಕಾನೂನೂ ಆಗಿ ಬಿಟ್ಟಿದೆ) ಮತ್ತಷ್ಟು ಗೋಳುಗಳನ್ನು ಸೇರಿಸಿದೆ. ನೋಟುರದ್ಧತಿಯಿಂದಾಗಿ ಅಸಂಘಟಿತ ವಲಯದಲ್ಲಿ ಹಲವು ಉದ್ದಿಮೆಗಳು ಮುಚ್ಚಿ ಹೋಗಿರುವ, ಅಥವ ಉತ್ಪಾದನೆಯಲ್ಲಿ ಕಡಿತ ಮಾಡಿರುವ ಹಿನ್ನೆಲೆಯಲ್ಲಿ ಹೇಗೋ ಉದ್ಯೋಗ ಉಳಿಸಿಕೊಂಡವರು ನಿರ್ವಾಹವಿಲ್ಲದೆ ಈ ಗೋಳುಗಳನ್ನು ಸಹಿಸಿಕೊಳ್ಳಬೇಕಾದ 'ಒಳ್ಳೆಯ ದಿನ'ಗಳನ್ನು ಕಾಣ ಬೇಕಾಗಿದೆ.

ಇದರ ಉದಾಹರಣೆಗಳನ್ನು ದೇಶದ ರಾಜಧಾನಿಯಲ್ಲಿಯೇ ಕಂಡಿರುವ ಅಭಿಷೇಕ್ ಡೇ (ಸ್ಕ್ರಾಲ್.ಇನ್, ಫೆ.6) ಎಂಬ ಪತ್ರಕರ್ತರು ಈ ಸುಗ್ರೀವಾಜ್ಞೆ ಕೈಗಾರಿಕಾ ಕಾರ್ಮಿಕರಿಗೆ ಪರಿಹಾರ ನೀಡುವ ಬದಲು ಇನ್ನಷ್ಟು ಸಂಕಟಗಳನ್ನು ತಂದಿದೆ ಎನ್ನುತ್ತಾರೆ.

ಈಗ ದಿಲ್ಲಿಯಲ್ಲಿ 90ಶೇ.ದಷ್ಟು ಮಾಲಕರು ಚೆಕ್ ಮೂಲಕ ಸಂಬಳ ಕೊಡುತ್ತಿದ್ದಾರೆ. ಆದರೆ ಈ ಚೆಕ್‌ಗಳು ಪ್ರತಿ ತಿಂಗಳ 7ನೇ ತಆರಿಖಿನ ಒಳಗೆ ಸುಗುತ್ತಿಲ್ಲ. ಉದಾ: ಇಂಜಿನಿಯರಿಂಗ್ ಉದ್ದಿಮೆಯಲ್ಲಿ ಕೆಲಸ ಮಾಡುವ 45 ವರ್ಷದ ರಮಾಕಾಂತ್ ಯಾದವ್‌ಗೆ ಡಿಸೆಂಬರ್ ತಿಂಗಳ ಸಂಬಳಕ್ಕೆ ಚೆಕ್ ಜನವರಿ 25ರಂದು ಸಿಕ್ಕಿತು. ಆಗಲೂ ಒಂದು ಶರತ್ತು–ಅದನ್ನು ತ್ಷಣವೇ ಬ್ಯಾಂಕಿಗೆ ಹಾಕಬಾರದು, ಹಾಕುವ ಮೊದಲು ಪರವಾನಿಗೆ ಮಾಲಕರ ಪರವಾನಿಗೆ ಪಡೆಯಬೇಕಂತೆ. ಬ್ರೆಡ್, ಹಾಲಿಗಾದರೂ ಹಣ ಬೇಕಲ್ಲ, ಆದರೂ ಈ ಕೆಲಸ ಬಿಡುವಂತಿಲ್ಲ, ಏಕೆಂದರೆ ಬೇರೆ ಕೆಲಸ ಸಿಗುವಂತಿಲ್ಲ ಎನ್ನುತ್ತಾರೆ ಯಾದವ್.

ನಗದುರಹಿತ ಪಾವತಿ ತಂದಿರುವ ಮತ್ತೊಂದು ಸಮಸ್ಯೆ–ಮಾಲಕರು ತಮ್ಮ ಕಾರ್ಮಿಕರಿಗೆ ಸಾಮಾನ್ಯವಾಗಿ ಕಾನೂನು ಪ್ರಕಾರ ಕೊಡಬೇಕಾದ ಕನಿಷ್ಟ ಕೂಲಿಯನ್ನು ಕೊಡುವುದಿಲ್ಲ. ಆದರೆ ಚೆಕ್ ಮೂಲಕ ಹಾಗೆ ಮಾಡುವಂತಿಲ್ಲ. ಅದಕ್ಕೆ ಮಾಲಕರು ಕಂಡುಕೊಂಡ 'ಪರಿಹಾರ' ಎಂದರೆ, ಕಾನೂನಿನ ಮತ್ತೊಂದು ಉಲ್ಲಂಘನೆ–ಓವರ್‌ಟೈಂ ಸಂಬಳ ಕೊಡದೆ ದುಡಿಸಿಕೊಳ್ಳುವುದು. ಒಟ್ಟಿನಲ್ಲಿ 12 ಗಂಟೆ ದುಡಿಸಿಕೊಂಡು, ಅದನ್ನು ದಾಖಲಿಸದೆ 8 ಗಂಟೆಯೇ ಕೆಲಸ ಮಾಡಿದ್ದೆಂದು ಸಂಬಳ ಕೊಡುವುದು. ಹೇಗಿದ್ದರೂ ಕಾರ್ಮಿಕ ಕಾನೂನುಗಳನ್ನು ಸಡಿಲಗೊಳಿಸುವ 'ಒಳ್ಳೆಯ ದಿನ'ಗಳು ಮಾಲಕರಿಗೆ ಬಂದೇ ಬಿಟ್ಟಿದೆ ತಾನೇ? ಅಲ್ಲದೆ ಈ ಕಾರ್ಮಿಕರು ಕೆಲಸ ಬಿಟ್ಟು ಹೋಗುವಂತಿಲ್ಲ.

ಪಶ್ಚಿಮ ಬಂಗಾಲದ ಬರ್ಧಮಾನ್‌ನಿಂದ ದಿಲ್ಲಿಗೆ ಕೆಲಸ ಅರಸಿಕೊಂಡು ಬಂದ ಅಬ್ದುಲ್ ಕರೀಮ್ ಶೇಖ್‌ನದ್ದು ಮತ್ತೊಮದು ಸಮಸ್ಯೆ. ಇದುವರೆಗೂ ನಗದಿನಲ್ಲಿ ಸಂಬಳ ಪಡೆಯುತ್ತಿರುವ ಕೆಲವೇ ಕಾರ್ಮಿಕರಲ್ಲಿ ಇವರೊಬ್ಬರು. ಈಗ ಆತನಿಗೆ ಮಾಲಕ ಬ್ಯಾಂಕ್ ಖಾತೆ ತೆರೆಯಲು ಹೇಳಿದ್ದಾನೆ. ಆದರೆ ಖಾತೆ ತೆರೆಯಲು ಆಗುತ್ತಿಲ್ಲ. ಏಕೆಂದರೆ ಆತ ಬಾಡಿಗೆಗಿರುವ ಮನೆಯ ಮಾಲಕ ಆತನಿಗೆ ಬಾಡಿಗೆಗೆ ಇರುವ ಬಗ್ಗೆ ಮನೆಯೊಡೆಯ ಲಿಖಿತವಾಗಿ ಏನನ್ನೂ ಕೊಡಲು ಸಿದ್ಧನಿಲ್ಲ.

ಈ ನಡುವೆ ಹಣಕಾಸು ಮಂತ್ರಿಗಳು ನಗದು ಎಲ್ಲೆಡೆಗಳಲ್ಲೂ ಸಿಗುತ್ತಿದೆ ಎನ್ನುತ್ತಿರುವಾಗಲೇ ಈಗ ಮತ್ತೆ 25 ಶೇಕಡಾದಷ್ಟು ಎಟಿಎಂಗಳಲ್ಲಿ ನಾದು ಇಲ್ಲ ಎಂಬ ಬೋರ್ಡು ತಗಲಿದೆ ಎಂದು ಹಿಂದುಸ್ತಾನ್ ಟೈಮ್ಸ್ ವರದಿ ಮಾಡಿದೆ. ಏಕೆಂದರೆ ತಿಂಗಳ ಏಳನೇ ತಾರೀಕಿನ ವೇಳೆಗೆ ಸಂಬಳ ಕೊಡಲು ಸಾಕಷ್ಟು ನಗದು ಬ್ಯಾಂಕುಗಳಲ್ಲಿ ಇಲ್ಲವಂತೆ.

'ರಾಜಸ್ತಾನ ಮಾದರಿ ಕಾರ್ಮಿಕ ಸುಧಾರಣೆಗಳು ಬೇಡ' ಎನ್ನುತ್ತಾರೆ ಬಿಎಂಎಸ್ ಮುಖಂಡರೂ!

ಹೌದು, ರಾಜಸ್ತಾನ ಮಾದರಿ ಸುಧಾರಣೆ ಬಢೆ, ಏಕೆಂದರೆ ಆ ರಾಜ್ಯದಲ್ಲಿ ಉದ್ದಿಮೆಗಳ ಮೇಲೆ ಅದರ ಪರಿಣಾಮ ಕಾರ್ಮಿಕ ಕಾನೂನುಗಳನ್ನು ತಿದ್ದುಪಡಿ ಮಾಡಿದಾಗ ಕಂಡರಿಸಿದ ಬೆಳವಣಿಗೆಗಿಂತ ಭಿನ್ನವಾಗಿದೆ ಎಂದು ಸ್ವತಃ ಸಂಘ ಪರಿವಾರಕ್ಕೆ ಸೇರಿದ ಭಾರತೀಯ ಮಜ್ದೂರ್ ಸಂಘ(ಬಿಎಂಎಸ್)ದ ಪ್ರಧಾನ ಕಾರ್ಯದರ್ಶಿ ವೃಜೇಶ್ ಉಪಾಧ್ಯಾಯ ಹೇಳಿರುವುದಾಗಿ ವರದಿಯಾಗಿದೆ(ದಿ ಹಿಂದು, ಫೆ.4).

ಬಜೆಟ್ ಭಾಷಣದಲ್ಲಿ ಕಾರ್ಮಿಕ ಕಾನೂನುಗಳ ಸುಧಾರಣೆಯ ಪ್ರಸ್ತಾಪ ಏಕೆ ಎಂದು ಅವರು ಹಣಕಾಸು ಮಂತ್ರಿಗಳನ್ನು ಪ್ರಶ್ನಿಸಿದ್ದಾರಂತೆ. "ಕಾರ್ಮಿಕ ಕಾನೂನುಗಳ ಸುಧಾರಣೆಯ ಹೆಸರಲ್ಲಿ ಕಾರ್ಮಿಕರ ಹಕ್ಕುಗಳು ಮತ್ತು ಸೌಲಭ್ಯಗಳನ್ನು ಕಡಿತ ಮಾಡಲಾಗುತ್ತಿದೆ.. ಇದರ ವಿರುದ್ಧ ದೇಶದಲ್ಲಿ ಮುಷ್ಕರಗಳು, ಚಳುವಳಿಗಳು ನಡೆದಿವೆ" ಎಂದು ಸಪ್ಟಂಬರ್ 2ರ ಸಾರ್ವತ್ರಿಕ ಮುಷ್ಕರದಲ್ಲಿ ಸೇರಿಕೊಳ್ಳಲು ನಿರಾಕರಿಸಿದ ಬಿಎಂಎಸ್‌ನ ಈ ಮುಖಂಡರು ಹಣಕಾಸು ಮಂತ್ರಿಗಳಿಗೆ ಪ್ರಸಕ್ತ ಬಜೆಟ್ ಬಗ್ಗೆ ಅವರಿಗೆ ಬರೆದ ಪತ್ರದಲ್ಲಿ ಹೇಳಿದ್ದಾರೆಂದು ಈ ವರದಿ ಹೇಳುತ್ತದೆ.

ಈ ಮುಖಂಡರು ಸಾರ್ವಜನಿಕ ವಲಯದ ಶೇರುಗಳ ಮಾರಾಟದ ಪ್ರಸ್ತಾವದ ಬಗ್ಗೆಯೂ ಕಳವಳ ವ್ಯಕ್ತಪಡಿಸಿದ್ದಾರೆ. ಸಾಲದ್ದಕ್ಕೆ ವಾಜಪೇಯಿ ನೇತೃತ್ವದ ಹಿಂದಿನ ಎನ್‌ಡಿಎ ಸರಕಾರ ವಿದೇಶ ಸಂಚಾರ ನಿಗಮ್(ವಿಎಸ್‌ಎನ್‌ಎಲ್)ನ್ನು ಟಾಟಾ ಗಳಿಗೆ ಮತ್ತು ಬಾಲ್ಕೊವನ್ನು ಸ್ಟೆರ್ಲೈಟ್‌ಗೆ ಮಾರಿದ್ದರಿಂದ ಈ ಕಂಪನಿಗಳೇನೂ ಉದ್ಧಾರವಾಗಿಲ್ಲ, ಕಾರ್ಮಿಕರ ಪಾಡಂತೂ ಎಲ್ಲರಿಗೂ ಗೊತ್ತು ಎಂದು ಹೇಳಿರುವುದಾಗಿಯೂ ವರದಿಯಾಗಿದೆ. ವಿಚಿತ್ರವೆನಿಸುತ್ತದೆಯಲ್ಲವೇ? ಸಾರ್ವಜನಿಕ ವಲಯದ ಕಂಪನಿಗಳನ್ನು ವಿದೇಶಿ ಕಂಪನಿಗಳಿಗೆ ಮಾರಿ ಬಿಡಲು ಅನುಕೂಲವಾಗುವಂತೆ ಎಫ್‌ಐಪಿಬಿ(ವಿದೇಶಿ ಹೂಡಿಕೆ ಉತ್ತೇಜನ ಮಂಡಳಿ)ಯನ್ನು ರದ್ದು ಮಾಡುವ ಬಜೆಟ್ ಪ್ರಸ್ತಾವ ಇವರಿಗೂ ವಿಚಿತ್ರವೆನಿಸಿದೆಯಂತೆ!

ಆದರೆ ಇದನ್ನು ನಿಜವಾಗಿಯೂ ಒಳ್ಳೆಯ ದಿನಗಳ ಲಕ್ಷಣ ಎನ್ನುವಂತಿಲ್ಲ. ಏಕೆಂದರೆ ಈಗಲೂ ಇವರು ಪ್ರಧಾನ ಮಂತ್ರಿಗಳ ನೋಟು ರದ್ಧತಿ ಕಾರ್ಮಿಕ ಪರವಾದ ಕ್ರಮ ಎಂದು ನಂಬಿರುವಂತೆ ಕಾಣುತ್ತದೆ, ಬಹುಶಃ ರಾಜಸ್ತಾನದ ಕಾರ್ಮಿಕ ಸುಧಾರಣೆಗಳು ಕಾರ್ಮಿಕರಿಗೆ 'ಒಳ್ಳೆಯ ದಿನ'ಗಳನ್ನು ತರಲಿವೆ ಎಂದು 'ನಂಬಿದಂತೆ' ಇರಬಹುದೇ?


"ಬಡ ಮತ್ತು ದುಡಿಮೆಗಾರ ವರ್ಗ ಕೇಂದ್ರದ ಚಾರಿತ್ರಿಕ ನಿರ್ಧಾರವನ್ನು ಬೆಂಬಲಿಸಿದರು ಮತ್ತು ಅದೇ ಜನ ನೋವನ್ನು ,ಪ್ರತಿಕೂಲ ಪರಿಣಾಮಗಳನ್ನು ಎದುರಿಸಿದ್ದಾರೆ.....ಕೋಟ್ಯಂತರ ಕಾರ್ಮಿಕರು ಜೀವನಾಧಾರ ಕಳಕೊಂಡಿದ್ದಾರೆ. ...ಲಕ್ಷ ಕೋಟಿ ಕರೆನ್ಸಿಗಳು ಬ್ಯಾಂಕುಗಳಿಗೆ ಬಂದಿರುವುದರಿಂದ ಸರಕಾರ ಕೆಲಸ ಕಳಕೊಂಡವರಿಗೆ ಸ್ವಲ್ಪ ಪರಿಹಾರ ಕೊಡಬಹುದು, ಸಾಮಾಜಿಕ ಭದ್ರತೆ ಮತ್ತು ಬಡತನ ನಿವಾರಣೆ ಕಾರ್ಯಕ್ರಮಗಳಿಗೆ ಹೆಚ್ಚು ಹಣ ನೀಡಬಹುದು ಎಂದು ನಿರೀಕ್ಷಿಸಲಾಗಿತ್ತು" ಎಂದು ತಮ್ಮ ನಿರಾಸೆಯನ್ನು ಹಣಕಾಸು ಮಂತ್ರಿಗಳಿಗೆ ಬರೆದ ಪತ್ರದಲ್ಲಿ ಹೇಳಿರುವುದಾಗಿಯೂ ವರದಿಯಾಗಿದೆ. ಆದರೆ ಅದಾಗಲೇ ಇದೊಂದು 'ಉತ್ತಮ' ಬಜೆಟ್ ಎಂದು ಆ 'ಚಾರಿತ್ರಿಕ' ನಿರ್ಧಾರ ತಗೊಂಡವರೇ ಹೇಳಿದ್ದರಲ್ಲ, ಆ ಬಗ್ಗೆ ಈ ಬಿಎಂಎಸ್ ಮುಖಂಡರಿಗೆ ಏನನಿಸಿದೆಯೋ ಗೊತ್ತಾಗಿಲ್ಲ.

ಒಂದು ವಾರದ ನಂತರ ದೇಶದ ಆರ್ಥಿಕ ಆರೋಗ್ಯ ಚೆನ್ನಾಗಿದ್ದುದರಿಂದ ಸರಿಯಾದ ಸಮಯದಲ್ಲಿ ಸರಿಯಾದ ನಿರ್ಧಾರ ತಗೊಂಡಿದ್ದೇವೆ ಎಂದು ಅವರು ಸಮರ್ಥಿಸಿಕೊಂಡಿರುವ ಬಗ್ಗೆ ಈಗ ಈ ಮುಖಂಡರು ಏನು ಹೇಳುತ್ತಾರೋ ಎಂಬುದೂ ಗೊತ್ತಾಗಿಲ್ಲ.


ಇದು ಸಂಘ ಪರಿವಾರ ಸಮಾಜದ ಒಂದು ಕಡೆಗಣಿಸಲಾಗದಷ್ಟು ದೊಡ್ಡ ವಿಭಾಗವಾದ ಕಾರ್ಮಿಕ ವರ್ಗದ ನಡುವೆ ಕೆಲಸ ಮಾಡಲು ಕಳಿಸಿದವರ ನಾಟಕವೋ, ಅಥವ ಮುಜುಗರ ಮಾತ್ರವೋ ಅಥವ ಗೊಂದಲವೋ ಎಂಬ ಪ್ರಶ್ನೆ ಸಹಜ. ಆದರೆ ಸಂಘ ಪರಿವಾರದ ಸಿದ್ಧಾಂತ ಮತ್ತು ಕಾರ್ಮಿಕ ವರ್ಗದ ನೈಜ ಹಿತಾಸಕ್ತಿಗಳ ನಡುವಿನ ಮೂಲಭೂತ ವೈರುಧ್ಯವನ್ನಂತೂ ಇದು ತೋರಿಸುತ್ತದೆ ಎಂಬುದರಲ್ಲಿ ಸಂದೇಹವಿಲ್ಲ.

ಸಂಸತ್ತಿನಲ್ಲಿ ಪ್ರಧಾನ ಮಂತ್ರಿಗಳು ತಮ್ಮ ನೋಟುರದ್ಧತಿಯನ್ನು 'ಬಲವಾಗಿ' ಸಮರ್ಥಿಸಿಕೊಂಡಿದ್ದಾರೆ. ದೇಹ ಆರೋಗ್ಯಕರವಾಗಿ ಇರುವಾಗಲೇ ಶಸ್ತ್ರಕ್ರಿಯೆ ನಡೆಸಬೇಕು, ನಮ್ಮ ಆರ್ಥಿಕ ವ್ಯವಸ್ಥೆ ಆರೋಗ್ಯಕರವಾಗಿತ್ತು, ಆದ್ದರಿಂದಲೇ ನಮ್ಮ ನಿರ್ಧಾರ ಸರಿಯಾದ ಸಮಯದಲ್ಲೇ ಇತ್ತು ಎಂದು ಪ್ರಧಾನ ಮಂತ್ರಿಗಳು ಹೇಳಿದ್ದಾರೆ.

– ಸುದ್ದಿ



– ಕೃಪೆ: ನ್ಯೂಸ್‌ಕ್ಲಿಕ್.ಇನ್



ಸಂಸತ್ತಿನ ಒಳಗೂ ಕೇಸರಿ ಕುಟಿಲತೆಯ ಪ್ರದರ್ಶನ

ಸಂಸತ್ತಿನ ಸದನಗಳಲ್ಲಿ ಸದಸ್ಯರು ಮಾಡುವ ಭಾಷಣಗಳನ್ನು ಅಕ್ಷರಶಃ ದಾಖಲಿಸಲಾಗುತ್ತದೆ. ಅವುಗಳಲ್ಲಿ 'ಅಸಂಸದೀಯ'ವೆನಿಸುವ ಅಥವ ಬೇರೆ ಸದಸ್ಯರು ಆಕ್ಷೇಪಿಸಿದ ಪದಗಳನ್ನು ಸಭಾಧ್ಯಕ್ಷರು ಹೇಳಿದರೆ ಮಾತ್ರ ತೆಗೆದು ಹಾಕಬಹುದು. ಆದ್ರೆ ಈಗ ಈ ಸಂಪದಾಯಕ್ಕೂ ಕತ್ತರಿ ಬಿದ್ದಿದೆ ಎಂಬುದನ್ನು ರಾಜ್ಯಸಭಾ ಸದಸ್ಯರೂ ಆಗಿರುವ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚೂರಿ ಬಯಲಿಗೆಳೆದಿದ್ದಾರೆ.

ಫೆಬ್ರುವರಿ 6ರಂದು ರಾಷ್ಟ್ರಪತಿಗಳ ಭಾಷಣಕ್ಕೆ ವಂದನೆ ಸೂಚಿಸುವ ನಿರ್ಣಯದ ಮೇಲೆ ಮಾತನಾಡಿದ ಯೆಚೂರಿಯವರ ಭಾಷಣ ಅತಿ ಕಡಿಮೆ ಅಡೆತಡೆಗಳಿದ್ದಂತದ್ದು. ಅವರು ಬಳಸಿದ ಪದಗಳ ಬಗ್ಗೆ ಇತರ ಸದಸ್ಯರಿಂದಾಗಲೀ ಸಭಾಧ್ಯಕ್ಷ ಸ್ಥಾನದಲ್ಲಿದ್ದವರಿಂದಾಗಲೀ ಒಂದೂ ಆಕ್ಷೇಪ ಬಂದಿರಲಿಲ್ಲ. ಆದರೆ ಅವರ ಭಾಷಣದ ಮುದ್ರಿತ ಆವೃತ್ತಿಯಲ್ಲಿ ಆರು ಸಣ್ಣ ಭಾಗಗಳನ್ನು ಮತ್ತು ಪದಗಳನ್ನು ತೆಗೆದು ಹಾಕಲಾಗಿತ್ತು. ಸಭಾಧ್ಯಕ್ಷರ ಆದೇಶದಂತೆ ತೆಗೆದು ಹಾಕಲಾಗಿದೆ ಎಂದು ಬರೆಯಲಾಗಿತ್ತು. ಇದನ್ನು ಯೆಚೂರಿಯವರು ಸಭಾಧ್ಯಕ್ಷರ ಗಮನಕ್ಕೆ ತಂದರು, ಒಂದು ಲಿಖಿತ ದೂರನ್ನೂ ನೀಡಿದರು. ಮರುದಿನ ಅದನ್ನು ಸರಿಪಡಿಸಲಾಯಿತು.

ಹೀಗೆ ಮತ್ತೆ ಸೇರಿಸಿದ ಪದಗಳೆಂದರೆ 'ಡಿಸೆಪ್ಶನ್(ವಂಚನೆ)', ಡಿಸ್ರಪ್ಶನ್'(ಛಿದ್ರಗೊಳಿಸುವುದು) 'ಡೈವರ್ಶನ್'(ಕಾಲಹರಣ) ಮತ್ತು 'ಡಯಬೋಲಿಕ್'(ಕುಟಿಲ).

ಆಳುವ ಪಕ್ಷಕ್ಕೆ ಕಸಿವಿಸಿ ಉಂಟುಮಾಡುವುದನ್ನು ತೆಗೆದು ಹಾಕಲಾಗುತ್ತದೆ. ಇದು ಪ್ರಸಕ್ತ ಆಳ್ವಿಕೆಯಲ್ಲಿ ಸಂಸತ್ತಿನ ಸದಸ್ಯರ ದನಿಯನ್ನು ಎಷ್ಟರ ಮಟ್ಟಿಗೆ ಅದುಮಲಾಗುತ್ತಿದೆ ಎಂಬುದನ್ನು ತೋರಿಸುತ್ತದೆ ಎಂಬುದನ್ನು ತೋರಿಸುತ್ತದೆ ಎಂದು ಯೆಚೂರಿ ಟಿಪ್ಪಣಿ ಮಾಡಿದ್ದಾರೆ.

ಕಳೆದ ವರ್ಷ ಇನ್ನೊಬ್ಬ ಸಿಪಿಐ(ಎಂ) ಸದಸ್ಯ ಎಂ.ಬಿ.ರಾಜೇಶ್ ಅವರ ಭಾಷಣದಲ್ಲಿ ಆರೆಸ್ಸೆಸ್ ಕುರಿತ ಒಂದು ಟೀಕೆಯನ್ನು ಹೀಗೆಯೇ ತೆಗೆದು ಹಾಕಲಾಗಿತ್ತು. ಅದು ಜೆಎನ್‌ಯುನಲ್ಲಿ ವಿದ್ಯಾರ್ಥಿಗಳ ಚಳುವಳಿಯ ಸಂದರ್ಭದಲ್ಲಿ ಮಾಡಿದ್ದಾಗಿತ್ತು. ಆ ಬಗ್ಗೆ ವಿಚಾರಿಸಿದಾಗ ಆ ಭಾಗದ ಧ್ವನಿಮುದ್ರಣ ಸರಿಯಾಗಿ ಕೇಳಿಸುತ್ತಿರಲಿಲ್ಲ ಎಂದು ಸಮಜಾಯಿಷಿ ನೀಡಲು ಪ್ರಯತ್ನಿಸಲಾಯಿತು. ಆದರೆ ಧ್ವನಿಮುದ್ರಣವನ್ನು ಪರೀಕ್ಷಿಸಿದಾಗ ಅದು ಸ್ಪಷ್ಟವಾಗಿದ್ದುದು ಕಂಡು ಬಂತು. ದಾಖಲೆಯನ್ನು ಸರಿಪಡಿಸಲಾಯಿತು.


ಚುನಾವಣಾ ಪ್ರಚಾರದಲ್ಲಿ ನೋಟುರದ್ಧತಿ ಕೈಬಿಟ್ಟ ಬಿಜೆಪಿ

ಉತ್ತರ ಪ್ರದೇಶದಲ್ಲಿ ಪ್ರಧಾನ ಮಂತ್ರಿಗಳ, ಬಿಜೆಪಿ ಅಧ್ಯಕ್ಷರ ಮತ್ತು ಅಭ್ಯರ್ಥಿಗಳ ಚುನಾವಣಾ ಪ್ರಚಾರದಲ್ಲಿ ನೋಟು ರದ್ಧತಿಯ ಪ್ರಸ್ತಾಪ ಮಾಯವಾಗಿಯೇ ಬಿಟ್ಟಿದೆ ಎಂದು ಪತ್ರಿಕೆಗಳು ವರದಿ ಮಾಡಿವೆ. ಒಂದು ತಿಂಗಳ ಹಿಂದೆ ಹೀಗಿರಲಿಲ್ಲ. ಪ್ರಧಾನ ಮಂತ್ರಿಗಳು ಈ ರಾಜ್ಯದಲ್ಲೇ ನೋಟು ರದ್ಧತಿಯನ್ನು ಸಮರ್ಥಿಸಿಕೊಳ್ಳಲು ಅರ್ಧ ಡಜನ್ ರ‍್ಯಾಲಿಗಳಲ್ಲಿ ಮಾತಾಡಿದರು. 50 ದಿನಗಳ 'ನೋವಿನ ಅವಧಿ'ಯ ಕೊನೆಗೆ ನಡೆದ ರ‍್ಯಾಲಿ ಇದೇ ರಾಜ್ಯದ ರಾಜಧಾನಿಯಲ್ಲಿ ನಡೆದಿತ್ತು.

ಚಂಡೀಗಡದ ನಗರಸಭಾ ಚುನಾವಣೆಗಳು, ಮಹಾರಾಷ್ಟ್ರ, ಗುಜರಾತ್ ಮತ್ತು ಮಧ್ಯಪ್ರದೇಶದ ಪಂಚಾಯತು ಚುನಾವಣೆಗಳಲ್ಲಿ ಬಿಜೆಪಿಯ ಗೆಲುವು ಈ ಕ್ರಮಕ್ಕೆ ದೊರೆತಿರುವ ಸಮ್ಮತಿ ಎಂದಿದ್ದರು ಬಿಜೆಪಿ ಅಧ್ಯಕ್ಷರು. ಆದರೆ ಉತ್ತರ ಪ್ರದೇಶ ಚುನಾವಣೆಗಳ ಬಗ್ಗೆ ಹಾಗೆ ಹೇಳುವ ಧೈರ್ಯ ಅವರಿಗೆ ಈಗ ಉಳಿದಂತಿಲ್ಲ. ಇದು ನೋಟುರದ್ಧತಿಯ ಬಗ್ಗೆ ಜನಮತಗಣನೆ ಅಲ್ಲ ಎಂದು ಹೇಳುತ್ತಿದ್ದಾರೆ!

ಮನಮೋಹನ್ ಸಿಂಗ್‌ರವರ ಸುತ್ತ ಹಲವು ಹಗರಣಗಳು ನಡೆದರೂ ಅವರ ಮೇಲೆ ಒಂದು ಕಪ್ಪು ಚುಕ್ಕೆಯೂ ಬಿದ್ದಿಲ್ಲ. ಬಾತ್‌ರೂಮ್‌ನಲ್ಲಿ ರೈನ್ ಕೋಟ್ ಹಾಕ್ಕೊಂಡು ಸ್ನಾನ ಮಾಡುವುದು ಈ ಡಾಕ್ಟರ್ ಸಾಹೇಬರಿಗೆ ಮಾತ್ರ ಗೊತ್ತು' ಎಂದು ಹಾಲಿ ಪ್ರಧಾನಿಗಳು ಮಾಜಿ ಪ್ರಧಾನಿಗಳ ಬಗ್ಗೆ ರಾಜ್ಯಸಭೆಯಲ್ಲಿ ವ್ಯಂಗ್ಯವಾಡಿದರು –ಸುದ್ದಿ

ರೈನ್‌ಕೋಟ್ ಆಳರಸರು



ವ್ಯಂಗ್ಯಚಿತ್ರ: ಸತೀಶ್ ಆಚಾರ್ಯ, ಸಿಫಿ. ಕಾಂ



ಕೆ.ಎಂ.ನಾಗರಾಜ್

2017ರ ಬಜೆಟ್ ಮೋದಿ ಸರ್ಕಾರದ ಅವಿವೇಕವನ್ನು ಮತ್ತಷ್ಟು ವಿಸ್ತರಿಸಿದೆ

ಎನ್ನುತ್ತಾರೆ ಪ್ರಖ್ಯಾತ ಅರ್ಥಶಾಸ್ತ್ರಜ್ಞ **ಪ್ರೊ.ಪ್ರಭಾತ್ ಪಟ್ನಾಯಕ್**. ಭಾರಿ ಮೊತ್ತದಲ್ಲಿ ಶೇಖರಣೆಯಾಗಿರುವ ಜನಗಳಂದ ಕಿತ್ತುಕೊಂಡ ಠೇವಣಿ ಹಣ ಬ್ಯಾಂಕುಗಳಲ್ಲಿ ಕೊಳೆಯುತ್ತಿದೆ. ಅದನ್ನು ಬಳಸಿ ನೋಟು ರದ್ದತಿಯ ಕೇಡುಗಳ ಪ್ರಭಾವವನ್ನು ಸ್ವಲ್ಪ ಮಟ್ಟಗಾದರೂ ಕಡಿಮೆ ಮಾಡಬಹುದಿತ್ತು. ಆದರೆ, ತನ್ನ ಈ ದುಸ್ಸಾಹಸದ ಪರಿಣಾಮಗಳಂದ ಅರ್ಥವ್ಯವಸ್ಥೆಯನ್ನು ಬಚಾವು ಮಾಡುವುದಕ್ಕಿಂತಲೂ ಜಾಗತಿಕ ಹಣಕಾಸು ಬಂಡವಾಳವನ್ನು ಓಲೈಸುವ ಸರ್ಕಾರದ ಬಯಕೆಯೇ ತೀವ್ರವಾಗಿದೆ ಎನ್ನುತ್ತಾರೆ ಅವರು.

ಮುಖ್ಯವಾದ ಎರಡು ಕಾರಣಗಳಿಂದಾಗಿ 2017-18ರ ಬಜೆಟ್‌ನಲ್ಲಿ ಮಾಡಿರುವ ಪ್ರಸ್ತಾಪಗಳು ಅರ್ಥಶೂನ್ಯವಾಗಿವೆ.

ಮೊದಲನೆಯದು, ಇಲ್ಲಿಯವರೆಗೆ ರೂಢಿಯಲ್ಲಿದ್ದ ಪದ್ಧತಿಯನ್ನು ಕೈ ಬಿಟ್ಟು, ಅವಧಿಗಿಂತಲೂ ಮುಂಚಿತವಾಗಿ ಬಜೆಟ್ ಮಂಡನೆ ಮಾಡಿರುವುದರಿಂದ, ಅದರಲ್ಲಿರುವ ಅಂಕಿ ಅಂಶಗಳು ನಿಖರವಲ್ಲ. ಈ ವರ್ಷಕ್ಕೆ ಸಂಬಂಧಿಸಿದ ಅಂಕಿ ಅಂಶಗಳ ನಿಖರ ಮಾಹಿತಿ ನಿಗದಿತ ಸಮಯದಲ್ಲಿ ದೊರಕುತ್ತದೆ. ಮಾಹಿತಿ ದೊರೆಯುವ ಮೊದಲೇ ಈ ವರ್ಷದ ಬಜೆಟ್ ಮಂಡನೆಯಾಗಿರುವುದರಿಂದ ಅಷ್ಟು ಮಟ್ಟಿಗೆ ಕಡಿಮೆ ಅಂಕಿ ಅಂಶಗಳನ್ನು ಈ ಬಜೆಟ್ ಆಧರಿಸಿದೆ.

ಎರಡನೆಯದು, ನೋಟು ರದ್ದತಿಯಂತಹ ಉಗ್ರ ಕ್ರಮ ಕೈಗೊಳ್ಳಲಾಗಿದೆ. ಅದರ ಪರಿಣಾಮ ಜಿಡಿಪಿಯ ಮೇಲೆ ಬಿದ್ದಿರುವುದು ನಿಶ್ಚಿತ. ಈ ಬಗ್ಗೆ ಮಾಹಿತಿ ಲಭ್ಯವಿಲ್ಲ. ಆದ್ದರಿಂದ, ಅದು ಎಷ್ಟರಮಟ್ಟಿಗೆ ಜಿಡಿಪಿ ಬೆಳವಣಿಗೆಯನ್ನು ಹಿಂದಕ್ಕೆ ಎಳೆದಿದೆ ಎಂದು ಹೇಳುವುದು ಅಸಾಧ್ಯ.

ಆದ್ದರಿಂದ, ಬಜೆಟ್ ಅಂಕಿ ಅಂಶಗಳ ಗೊಡವೆಗೆ ಹೋಗದೆ, ಅದರ ಗೊತ್ತು ಗುರಿಗಳ ಬಗ್ಗೆ ಗಮನಹರಿಸುವುದು ಮೇಲು.

ಬಜೆಟ್ ಒಂದು ಅಂಶವನ್ನು ಸ್ಪಷ್ಟಪಡಿಸಿದೆ. ಅದೇನೆಂದರೆ, ಕೇಂದ್ರ ಸರ್ಕಾರದ ತೆರಿಗೆ ಆದಾಯ ಮತ್ತು ಜಿಡಿಪಿಯ ಅನುಪಾತದಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ ಮತ್ತು ವಿತ್ತೀಯ ಕೊರತೆ ಮತ್ತು ಜಿಡಿಪಿಯ ಅನುಪಾತದಲ್ಲಿಯೂ ಯಾವುದೇ ಬದಲಾವಣೆ ಇರುವುದಿಲ್ಲ ಎಂದು ನಿರೀಕ್ಷಿಸಬಹುದು. ಅಂದರೆ, ತನ್ನ ಖರ್ಚು ವೆಚ್ಚಗಳು ಮತ್ತು ಜಿಡಿಪಿಯ ಅನುಪಾತದಲ್ಲಿ ಬದಲಾವಣೆ ಮಾಡುವುದಿಲ್ಲ ಎಂದು ಕೇಂದ್ರ ಸರ್ಕಾರವು ನಿರ್ಧರಿಸಿರುವುದು ಕಂಡುಬರುತ್ತದೆ. ಈ "ವಿತ್ತೀಯ ವಿವೇಕ"(fiscal prudence) ಕ್ಕೆ ಬದ್ಧತೆಯೇ ಈ ಸರ್ಕಾರದ ಬಜೆಟ್ ಕಾರ್ಯವ್ಯೂಹದ ಕೂಡುಗಲ್ಲಿನಂತಿದೆ. ನೋಟು ರದ್ದತಿಯ ಹಿನ್ನೆಲೆಯಲ್ಲಿ ಅದರ ಈ ಕೃತ್ಯವು ನಿಬ್ಬೆರಗಾಗುವಷ್ಟು ಬುದ್ಧಿಹೀನವಾಗಿದೆ ಹಾಗೂ ನೋಟು ರದ್ದತಿಯು ಉಂಟುಮಾಡಿದ ಅಡ್ಡ ಪರಿಣಾಮಗಳನ್ನು ಮತ್ತಷ್ಟು ಜಟಿಲಗೊಳಿಸಿದೆ. ಯಾವ ಪುರುಷಾರ್ಥವನ್ನೂ ಸಾಧಿಸದ ನೋಟು ರದ್ದತಿಯಿಂದಾಗಿ ಉತ್ಪಾದನೆ ತಗ್ಗಿದೆ ಮತ್ತು ಉದ್ಯೋಗಗಳು ಕುಗ್ಗಿವೆ. ಬಜೆಟ್ ಮೂಲಕ ಈ ಹಾನಿಯನ್ನು ಸ್ವಲ್ಪವಾದರೂ ತೊಡೆದುಹಾಕುವ ಅವಕಾಶವನ್ನು ಸರ್ಕಾರ ಕಳೆದುಕೊಂಡಿದೆ.

ಖರ್ಚು ವೆಚ್ಚಗಳು ಮತ್ತು ಜಿಡಿಪಿಯ ಅನುಪಾತವನ್ನು ಬದಲಿಸಿ, ನೋಟು ರದ್ದತಿಯಿಂದಾಗಿ ಹೇಳತೀರದ ಕಷ್ಟ ಕಾರ್ಪಣ್ಯಗಳಿಗೆ ಒಳಗಾದವರಿಗೆ ಅಲ್ಪ ಸ್ವಲ್ಪ ನೆರವು ನೀಡುವಂತಹ ಕಾರ್ಯಗಳಿಗೆ ಹೆಚ್ಚು ಹಣ ಖರ್ಚುಮಾಡಬಹುದಿತ್ತು. ಬಜೆಟ್ ಘೋಷಣೆಯಾಗುವ ಮೊದಲು, ಎಲ್ಲರಿಗೂ ಸಿಗಬಹುದಾದ ಮೂಲ ಕನಿಷ್ಠ ವರಮಾನದ ಒಂದು ಸ್ಕೀಂ ಜಾರಿ ಸೇರಿದಂತೆ ಅನೇಕ ವದಂತಿಗಳು ಹರಡಿದ್ದವು. ಬಜೆಟ್ ಘೋಷಣೆಯ ಹಿಂದಿನ ದಿನ ಪ್ರಕಟವಾದ ಆರ್ಥಿಕ ಸಮೀಕ್ಷೆಯಲ್ಲೂ ಈ ಅಂಶ ಪ್ರಸ್ತಾಪವಾಗಿತ್ತು. ಸಾಮಾನ್ಯ ಜನತೆಗೆ ನೆರವು ನೀಡುವ ಇಂತಹ ಒಂದು ಕಾರ್ಯಕ್ರಮವನ್ನು ಎಡ ಪರ ವಾಲುವ ಸರ್ಕಾರಗಳು ಆಚರಣೆಗೆ ತಂದಿವೆ. ಬ್ರೆಜಿಲ್‌ನ ವರ್ಕರ್ಸ್ ಪಾರ್ಟಿಯ ನೇತೃತ್ವದ ಸರ್ಕಾರ ಇದಕ್ಕೆ ಒಂದು ಉದಾಹರಣೆಯಾಗಿದೆ.

ಆದರೆ, ಹೇಳಿ ಕೇಳಿ ಬಿಜೆಪಿಯಂತಹ ಒಂದು ಬಲ ಪಂಥಿಯ ಪಕ್ಷವು ಬಡ ಜನತೆಗೆ ನೆರವು ನೀಡುವ ಇಂತಹ ಒಂದು ಕಾರ್ಯಕ್ರಮವನ್ನು ಜಾರಿಮಾಡುವುದು ಅದರ ಗುಣ ಸ್ವಭಾವಕ್ಕೆ ಹೊಂದುವುದಿಲ್ಲ. ನೋಟು ರದ್ದತಿಯಿಂದಾದ ಹಾವಳಿಯ ಹಿನ್ನೆಲೆ ಮತ್ತು ಐದು ರಾಜ್ಯಗಳಲ್ಲಿ ನಡೆಯುವ ವಿಧಾನ ಸಭಾ ಚುನಾವಣೆಗಳ ಸಂದರ್ಭದಲ್ಲಿ ತೇಲಿ ಬಂದ ಇಂತಹ ಊಹಾ ಪೋಹಗಳು ಸ್ವಲ್ಪ ಮಟ್ಟಿನ ಕುತೂಹಲ ಕೆರಳಿಸಿದ್ದವು. ಕೊನೆಗೆ ನೋಡಿದರೆ, ಬಜೆಟ್‌ನಲ್ಲಿ ಅದರ ಬಗ್ಗೆ ಮಾತೇ ಇಲ್ಲ. ಬಿಜೆಪಿಯ ಹುಟ್ಟು ಗುಣ ಬಿಟ್ಟು ಹೋಗುವುದುಂಟೇ?

ನೋಟು ರದ್ದತಿಯಿಂದ ಜನಸಾಮಾನ್ಯರಿಗೆ, ಅದರಲ್ಲೂ ಮುಖ್ಯವಾಗಿ ಬಡ ಜನತೆಗೆ ಉಂಟಾದ ಯಾವ ಕಷ್ಟ ನಷ್ಟಗಳಿಗೂ ಬಜೆಟ್‌ನಲ್ಲಿ ಯಾವ ಪರಿಹಾರವನ್ನೂ ಸೂಚಿಸಿಲ್ಲ. ಆದಾಯ ತೆರಿಗೆ ದರಗಳಲ್ಲಿ ತೋರಿಸಿರುವ ರಿಯಾಯ್ತಿ ಈ ದೃಷ್ಟಿಯಿಂದ ನೋಡಿದರೆ, ಏನೇನೂ ಸಾಲದು. ನೋಟು ರದ್ದತಿಯು ಕೆಲವು ಅವಕಾಶಗಳನ್ನು ಒದಗಿಸಿತ್ತು. ಸರ್ಕಾರ ಅಂತಹ ಯಾವ ಅವಕಾಶಗಳನ್ನೂ ಬಳಸಿಕೊಳ್ಳಲಿಲ್ಲ. ಈ ಮಾತು ಹಿಂತಿರುಗಿ ಬಾರದ ಕರೆನ್ಸಿಗೆ ಸಂಬಂಧಿಸಿದ್ದಲ್ಲ. ಭಾರಿ ದೊಡ್ಡ ಮೊತ್ತದ ಕರೆನ್ಸಿ ಹಿಂದಿರುಗಿ ಬರುವುದಿಲ್ಲವೆಂದು ಸರ್ಕಾರ ಭಾವಿಸಿತ್ತು. ಅದು ಸಂಪೂರ್ಣವಾಗಿ ಹುಸಿಯಾಯಿತು. ರದ್ದಾದ ಕರೆನ್ಸಿ ನೋಟುಗಳ ಪೈಕಿ ಸುಮಾರು 97% ಕರೆನ್ಸಿ ನೋಟುಗಳು ಬ್ಯಾಂಕ್‌ಗಳಲ್ಲಿ ಠೇವಣಿಯಾಗಿವೆ. ಸರ್ಕಾರ ಅವಕಾಶ ಉಪಯೋಗಿಸಿಕೊಳ್ಳುವ ಮಾತು ಬ್ಯಾಂಕ್‌ಗಳಲ್ಲಿ ಠೇವಣಿಯಾಗಿರುವ ಭಾರಿ ಮೊತ್ತದ ಈ ಹಣಕ್ಕೆ ಸಂಬಂಧಿಸಿದೆ.

ಭಾರಿ ಮೊತ್ತದಲ್ಲಿ ಶೇಖರಣೆಯಾಗಿರುವ ಈ ಠೇವಣಿ ಹಣ ಬ್ಯಾಂಕುಗಳಲ್ಲಿ ಕೊಳೆಯುತ್ತಿದೆ. ಏಕೆಂದರೆ, ಬ್ಯಾಂಕ್‌ಗಳು 'ಸಾಲ-ಯೋಗ್ಯ' ಎಂದು ಪರಿಗಣಿಸುವ ಸಾಲಗಾರರ ಸಂಖ್ಯೆ ಬಹಳ ಕಡಿಮೆ ಇದೆ. ಉಳಿದವರಿಗೆ ಸಾಲ ಕೊಡಲು ಬ್ಯಾಂಕುಗಳು ಹಿಂಜರಿಯುತ್ತವೆ. ಹಾಗಾಗಿ, ಈ ಠೇವಣಿಗಳಿಂದ ಬ್ಯಾಂಕುಗಳಿಗೆ ಯಾವುದೇ ಆದಾಯ ಬರುತ್ತಿಲ್ಲ. ಆದರೆ, ಆದಾಯವಿಲ್ಲದಿದ್ದರೂ ಬ್ಯಾಂಕುಗಳು ಠೇವಣಿದಾರರಿಗೆ ಬಡ್ಡಿ ತೆರಬೇಕಾಗಿದೆ. ಭದ್ರತಾ ಪತ್ರಗಳ ನೀಡಿಕೆಯ ಮೂಲಕ ಸರ್ಕಾರ ಈ ಹಣವನ್ನು ಸಾಲ ಪಡೆದು ಜನೋಪಯೋಗಿ ಕಾರ್ಯಗಳಿಗೆ ಖರ್ಚುಮಾಡಬಹುದಿತ್ತು. ಹಾಗೆ ಮಾಡಿದ್ದರೆ, ಬ್ಯಾಂಕುಗಳಲ್ಲಿರುವ ಹಣ ಚಲಾವಣೆಗೆ ಬಾರದೇ ಇರುವುದರಿಂದ ಉಂಟಾಗಿರುವ ಹಿಂಜರಿಕೆಯ ಪರಿಸ್ಥಿತಿಯನ್ನು ಸುಧಾರಿಸಬಹುದಿತ್ತು, ಅದರಿಂದ ಬ್ಯಾಂಕುಗಳಿಗೂ ಸ್ವಲ್ಪ ಆದಾಯ ಸಿಗುತ್ತಿತ್ತು.

ಬ್ಯಾಂಕುಗಳಲ್ಲಿ ನಿರರ್ಥಕವಾಗಿರುವ ಹಣವನ್ನು ಸರ್ಕಾರವು ಜನೋಪಯೋಗಿ ಕಾರ್ಯಗಳಿಗೆ ಖರ್ಚು ಮಾಡುವ ಸಲುವಾಗಿ ಸಾಲ ಪಡೆಯುವ ಅಂದಾಜಿನಲ್ಲಿದ್ದರೆ ಆ ಅಂಶವು ವಿತ್ತೀಯ ಕೊರತೆಯಾಗಿ ಕಾಣಿಸಿಕೊಳ್ಳುತ್ತಿತ್ತು. ವಿತ್ತೀಯ ಕೊರತೆಯ ಅಂಶವು ಜಾಗತಿಕ ಹಣಕಾಸು ಬಂಡವಾಳಕ್ಕೆ ಬಹಳ ನೋವು ತರುತ್ತಿತ್ತು. ಆದರೆ, ವಿತ್ತೀಯ ಕೊರತೆಯಿಂದ ಅರ್ಥವ್ಯವಸ್ಥೆಗೆ ಯಾವ ರೀತಿಯಿಂದಲೂ ತೊಂದರೆಯಾಗುತ್ತಿರಲಿಲ್ಲ. ಬದಲಾಗಿ, ಸಾರ್ವಜನಿಕರಿಂದ ಎತ್ತಿದ ಸಾಲವು ನೋಟು ರದ್ದತಿಯಿಂದ ಉಂಟಾಗಿರುವ ಆರ್ಥಿಕ ಹಿಂಜರಿತವನ್ನು ಹಿಮ್ಮೆಟ್ಟಿಸುತ್ತಿತ್ತು. ಅದರಿಂದ ಹಣದುಬ್ಬರದ ಬಾಧೆಯೂ ಇರುತ್ತಿರಲಿಲ್ಲ ಮತ್ತು ಅದರಿಂದ ಬ್ಯಾಂಕುಗಳಿಗೆ ವರಮಾನವೂ ಒದಗುತ್ತಿತ್ತು.

ರದ್ದಾದ ನೋಟುಗಳಿಗೆ ಬದಲಾಗಿ ಹೊಸ ನೋಟುಗಳ ಚಲಾವಣೆ ಏರುತ್ತಿದ್ದಂತೆಯೇ, ಬ್ಯಾಂಕುಗಳಲ್ಲಿರುವ ತಮ್ಮ ಹಣವನ್ನು ಜನರು ಹಿಂಪಡೆಯುತ್ತಾರೆ. ಆಗ ಠೇವಣಿಗಳ ಮೊತ್ತವೂ ಇಳಿಯುತ್ತದೆ. ಆದರೆ, ರದ್ದಾದ ಒಟ್ಟು ಕರೆನ್ಸಿಯ ಮೌಲ್ಯಕ್ಕೆ ಸಮನಾದ ಮೌಲ್ಯದ ನೋಟುಗಳನ್ನು ಚಲಾವಣೆಗೆ ಬಿಡುವುದಿಲ್ಲವೆಂದು ಸರ್ಕಾರ ಘೋಷಿಸಿದೆ. ಈ ಎರಡು ಪರಿಸ್ಥಿತಿಗಳ ನಡುವಿನ ಅಂತರವನ್ನು ಉಳಿಸಿಕೊಳ್ಳುವ ಸರ್ಕಾರದ ಉದ್ದೇಶವು ಜನರನ್ನು ಬಲವಂತವಾಗಿ ನಗದು ರಹಿತ ವ್ಯವಹಾರಗಳತ್ತ ತಳ್ಳುವುದೇ ಆಗಿರುತ್ತದೆ. ಈ ಅಂತರದ ಮೊತ್ತದ ಹಣವು ಬ್ಯಾಂಕುಗಳಿಗೆ ಹೊರೆಯಾಗಿದೆ. ಈ ಹಣವನ್ನು ಸರ್ಕಾರ ನಿರ್ಭಯವಾಗಿ ಸಾಲವಾಗಿ ಪಡೆದಿದ್ದರೆ, ಅದರಿಂದ ನೋಟು ರದ್ದತಿಯ ಕೇಡುಗಳ ಪ್ರಭಾವವನ್ನು ಸ್ವಲ್ಪ ಮಟ್ಟಿಗಾದರೂ ಕಡಿಮೆ ಮಾಡಬಹುದಿತ್ತು. ಆದರೆ, ನೋಟು ರದ್ದತಿಯಂತಹ ತನ್ನ ದುಸ್ಸಾಹಸದ ಪರಿಣಾಮಗಳಿಂದ ಅರ್ಥವ್ಯವಸ್ಥೆಯನ್ನು ಬಚಾವು ಮಾಡುವುದಕ್ಕಿಂತಲೂ ಜಾಗತಿಕ ಹಣಕಾಸು ಬಂಡವಾಳವನ್ನು ಓಲೈಸುವ ಸರ್ಕಾರದ ಬಯಕೆಯೇ ತೀವ್ರವಾಗಿದೆ.

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕಾಯ್ದೆಯಡಿಯಲ್ಲಿ ಅತಿ ಹೆಚ್ಚು ಹಣ ಒದಗಿಸಲಾಗಿದೆ ಎಂಬ ಬಜೆಟ್ ಪ್ರಸ್ತಾಪವು ಜನರನ್ನು ದಿಕ್ಕು ತಪ್ಪಿಸುವ ಪ್ರಯತ್ನವಾಗಿದೆ. 2017-18 ವರ್ಷದಲ್ಲಿ ಉದ್ಯೋಗ ಬಾಬ್ತು ಒದಗಿಸಿರುವ 48,000 ಕೋಟಿ ರೂಪಾಯಿ ಮೊತ್ತವು ಹಿಂದಿನ ವರ್ಷದ 47,500 ಕೋಟಿ ರೂ ಗಿಂತ ತುಸು ಅಧಿಕವಾಗಿದೆ. ಬಡ ಜನರಿಗೆ ಇದೊಂದು ಅತ್ಯವಶ್ಯಕವಾಗಿರುವ ಕಾರ್ಯಕ್ರಮ. ಪರಿಸ್ಥಿತಿಗನುಗುಣವಾಗಿ ಇನ್ನೂ ಹೆಚ್ಚು ಹಣ ಬಿಡುಗಡೆ ಮಾಡಿದರೂ ಒಳ್ಳೆಯದೇ. ಆದರೆ, ಕೆಲಸ ಮಾಡಿದವರಿಗೆ ಕೂಲಿ ಕೊಡುವಲ್ಲಿ ವಿಳಂಬ ಮಾಡುವುದು, ಆಧಾರ್ ಕಾರ್ಡ್ ಕಡ್ಡಾಯಗೊಳಿಸುವುದು, ಸುಪ್ರೀಂ ಕೋರ್ಟಿನ ನಿರ್ದೇಶನಗಳಿಗೆ ವಿರುದ್ಧವಾಗಿದೆ ಮತ್ತು ಈ ಯೋಜನೆಯನ್ನು ಜಾರಿಗೊಳಿಸುವ ಸರ್ಕಾರದ ಉದ್ದೇಶವೇ ಅನುಮಾನಾಸ್ಪದವಾಗಿದೆ.

(ಇದು 'The Wire' ಪತ್ರಿಕೆ ಪ್ರಕಟಿಸಿರುವ ಪ್ರೊ. ಪ್ರಭಾತ್ ಪಟ್ನಾಯಕ್ ಅವರ In the 2017 Budget, the Modi Government Has Compounded Its Folly ಲೇಖನದ ಭಾವಾನುವಾದ)

"ರೈತಪರ ಎಂಬ ಸುಳ್ಳಿನೊಂದಿಗೆ ರೈತಾಪಿ ಜನಗಳಿಗೆ ವಿಶ್ವಾಸಘಾತ ಬಗೆದಿರುವ ಬಜೆಟ್"

ತೀವ್ರ ಕೃಷಿ ಬಿಕ್ಕಟ್ಟನ್ನು ನೋಟುರದ್ದತಿ ಮತ್ತಷ್ಟು ಉಲ್ಬಣಗೊಳಿಸಿರುವ ಸನ್ನಿವೇಶದಲ್ಲಿ ಕೇಂದ್ರ ಹಣಕಾಸು ಮಂತ್ರಿಗಳು ಸಲ್ಲಿಸಿರುವ ಬಜೆಟ್ ಕೃಷಿಗೆ ಭಾರೀ ಉತ್ತೇಜನೆ ಕೊಡುವ ರೈತ-ಪರ ಬಜೆಟ್ ಎಂದು ಕಾರ್ಪೊರೇಟ್ ಮಾಧ್ಯಮಗಳು ಬೊಬ್ಬಿಡುತ್ತಿದ್ದರೂ, ವಾಸ್ತವವಾಗಿ ಅದು ರೈತರು ಮತ್ತು ಕೃಷಿ ಕೂಲಿಕಾರರಿಗೆ ಮತ್ತಷ್ಟು ಕೇಡು ತರುವಂತಹದ್ದು, ರೈತಾಪಿ ಜನಗಳಿಗೆ ಮಾಡಿರುವ ವಿಶ್ವಾಸಘಾತ ಎಂದು ಅಖಿಲ ಭಾರತ ಕಿಸಾನ್ ಸಭಾ(ಎಐಕೆಎಸ್) ಬಲವಾಗಿ ಖಂಡಿಸಿದೆ.

ಸ್ವಾಮಿನಾಥನ್ ಆಯೋಗದ ಶಿಫಾರಸಿನಂತೆ ಕನಿಷ್ಟ ಬೆಂಬಲ ಬೆಲೆ ಕೊಡುವ ಭರವಸೆ ಮತ್ತೆ ಹುಸಿಯಾಗಿದೆ. ಆದರೆ ಭಾರತದ ರೈತರಿಗೆ ಕೊಡಲು ನಿರಾಕರಿಸಿರುವುದನ್ನು ಅತ್ತ ಮೊಜಾಂಬಿಕ್ ರೈತರಿಗೆ ಕೊಡಲು ಅದು ಸಿದ್ಧವಾಗಿದೆ.

ಅದೇ ರೀತಿಯಲ್ಲಿ ಆಮದು ಸುಂಕರಹಿತವಾಗಿ ಗೋದಿಯನ್ನು ಆಮದು ಮಾಡಿಕೊಳ್ಳುವ ಸರಕಾರದ ನಿರ್ಧಾರ ಭಾರತದ ರೈತರಿಗೆ ಸಿಗುವ ಮೊತ್ತ ಮತ್ತಷ್ಟು ಕುಸಿಯುವಂತೆ ಮಾಡುತ್ತದೆ.

ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿಗೆ ಹಿಂದೆಂದೂ ಕೊಡದಷ್ಟು ಕೊಟ್ಟಿದ್ದೇನೆ ಎಂಬ ಹಣ ವಾಸ್ತವವಾಗಿ ಸುಪ್ರಿಂಕೋರ್ಟಿನ ಮಧ್ಯಪ್ರವೇಶದಿಂದಾಗಿ ಕಳೆದ ವರ್ಷ ಖರ್ಚು ಮಾಡಿರುವ ಹಣಕ್ಕಿಂತ ಕೇವಲ 1.1ಶೇ. ಹೆಚ್ಚು, ಈಗಾಗಲೇ ಮಾಡಿರುವ ಕೆಲಸಗಳಿಗೆ 14,000 ಕೋಟಿ ರೂ.ಗಳ ಕೂಲಿ ಬಾಕಿಯಿರುವಾಗ ವಾಸ್ತವವಾಗಿ ಈ ವರ್ಷ 80,000 ಕೋಟಿ ರೂ.ಗಳನ್ನು ಕೊಡಬೇಕಾಗಿತ್ತು ಎಂಬುದನ್ನು ಈ ಸರಕಾರ ಮತ್ತು ಅದರ ತುತ್ತೂರಿ ಮಾಧ್ಯಮಗಳು ಮರೆಮಾಚಿವೆ.

ರಸಗೊಬ್ಬರಗಳ ಬೆಲೆಗಳು ತೀವ್ರವಾಗಿ ಏರುತ್ತಿವೆ. ಆದರೆ ಅವಕ್ಕೆ ಸರಕಾರದ ಸಬ್ಸಿಡಿಗಳನ್ನು ಹೆಚ್ಚಿಸಿಲ್ಲ.

ಸಣ್ಣ ನೀರಾವರಿಗೆ 5000 ಕೋಟಿ ರೂ. ಮತ್ತು ದೀರ್ಘಾವಧಿ ನೀರಾವರಿಗೆ ಇನ್ನೂ 20,000 ಕೋಟಿ ರೂ. ಕೊಡುವುದಾಗಿ ಹೇಳಿದ್ದರೂ, ಈ ಗಾಗಲೇ ಇದಕ್ಕೆ ಮಾಡಿರುವ ಹೂಡಿಕೆ ಎಷ್ಟು, ಕಳೆದ ವರ್ಷ ಅಭಿವೃದ್ಧಿ ಪಡಿಸಿದ ನೀರಾವರಿ ಎಷ್ಟು ಎಂದು ಹೇಳಿಲ್ಲ. 11ನೇ ಪಂಚವಾರ್ಷಿಕ ಯೋಜನೆಯ ಪ್ರಕಾರ 4.7ಕೋಟಿ ಹೆಕ್ಟೇರ್ ಭೂಮಿಗೆ ಇನ್ನೂ ನೀರಾವರಿ ಸಿಕ್ಕಿಲ್ಲ ಎಂಬುದನ್ನು ಗಮನಿಸಿದರೆ ಈಗ ಕೊಟ್ಟಿರುವ ಹಣ ಹೆಕ್ಟೇರಿಗೆ 10,000 ರೂ. ಕ್ಕೂ ಆಗುವುದಿಲ್ಲ ಎಂಬ ಸಂಗತಿಯತ್ತ ಎಐಕೆಎಸ್ ಗಮನ ಸೆಳೆದಿದೆ.

ಪ್ರಧಾನ ಮಂತ್ರಿ ಬೆಳೆ ವಿಮಾ ಯೋಜನೆಯನ್ನು ವಿಸ್ತರಿಸಿ 40ಶೇ. ರೈತರನ್ನು ಒಳಗೊಳ್ಳಲಾಗುವುದು ಎನ್ನುತ್ತಲೇ ಇದಕ್ಕೆ ನೀಡಿರುವ ಹಣವನ್ನು ಕಳೆದ ವರ್ಷದ 13,240 ಕೋಟಿ ರೂ.ಗಳಿಂದ 9000 ಕೋಟಿ ರೂ.ಗಳಿಗೆ ಇಳಿಸಲಾಗಿದೆ! ಈ ಹಣದಲ್ಲೂ ಬಹಳಷ್ಟು ಖಾಸಗಿ ವಿಮಾಕಂಪನಿಗಳಿಗೆ ಹೋಗುತ್ತದೆಯೇ ವಿನಹ ರೈತರಿಗಲ್ಲ.

ನೋಟು ರದ್ದತಿ ಗ್ರಾಮೀಣ ಕೃಷಿ ಸಾಲಗಳ ಬೆನ್ನೆಲುಬಾಗಿದ್ದ ಸಹಕಾರಿ ವಲಯವನ್ನು ಹಾಳುಗೆಡವಿತು. ಈ ಬಜೆಟ್ ಕಂಗಾಲಾದ ರೈತರಿಗೆ ಸಾಲ ಮನ್ನಾ ಪ್ರಕಟಿಸುವ ಬದಲು 10ಲಕ್ಷ ಕೋಟಿ ರೂ.ಗಳ ಕೃಷಿ ಸಾಲ ಒದಗಿಸುವುದಾಗಿ ಹೇಳಿದೆ. ಇದು ಕೇವಲ ಮಾತಿನಮಂಟಪ ಮಾತ್ರ, ಏಕೆಂದರೆ ಇದರಲ್ಲಿ ಬಹುಪಾಲು ಕೃಷಿವ್ಯಾಪಾರಕ್ಕೆ ಮತ್ತು ನಗರಪ್ರದೇಶಗಳಿಗೆ ಹೋಗುತ್ತದೆಯೇ ವಿನಹ ಬಡ ಮತ್ತು ಭೂಹೀನ ರೈತರು ಮತ್ತು ಕೃಷಿಕೂಲಿಕಾರರ ಸಾಲ ಅಗತ್ಯಗಳನ್ನು ಪೂರೈಸುವುದಿಲ್ಲ ಎಂದು ಟೀಕಿಸಿರುವ ಎಐಕೆಎಸ್ ಬಿಜೆಪಿ ಸರಕಾರದ ಈ ಎಲ್ಲ ಸುಳ್ಳುಗಳನ್ನು ಬಯಲಿಗೆಳೆಯಬೇಕು ಎಂದು ತನ್ನ ಎಲ್ಲ ಘಟಕಗಳಿಗೆ ಕರೆ ನೀಡಿದೆ.



ತಮಿಳುನಾಡು: ರೈತರಿಗೆ ಹೆಚ್ಚಿನ ಬರ ಪರಿಹಾರಕ್ಕಾಗಿ ರಾಜ್ಯವ್ಯಾಪಿ ಹೋರಾಟ

ತಮಿಳುನಾಡು ಸೇರಿದಂತೆ ಇಡೀ ದಕ್ಷಿಣ ಬಾರತ ಬರದ ಭೀತಿಗೆ ಒಳಗಾಗಿದೆ. ಆದ-ರೆ ರಾಜ್ಯಸರಕಾರಗಳು ರೈತರಿಗೆ ಸಂಕಟಗಳಿಗೆ ಸ್ಪಂದಿಸುತ್ತಿಲ್ಲ. ತಮಿಳುನಾಡು ಸಿಪಿಐ(ಎಂ) ಈ ಬೇಡಿಕೆಯ ಮೇಲೆ ರಾಜ್ಯವ್ಯಾಪಿ ಹೋರಾಟವನ್ನು ಆರಂಭಿಸಿದೆ. ಈ ಸಂಕಟಗಳಿಗೆ ಬಲಿಯಾದ ರೈತರ ಕುಟುಂಬಗಳಿಗೆ 10ಲಕ್ ರೂ. ಪರಿಹಾರ ನೀಡಬೇಕು ಮತ್ತು ಮಹಾತ್ಮ ಗಾಂಧಿ ಗ್ರಾಮಿನ ಉದ್ಯೋಗ ಖಾತ್ರಿ ಯೋಜನೆಯಲ್ಲಿ 200 ದಿನಗಳ ಕೆಲಸ ಕೊಡಿಸಬೇಕೆಂದು ಒತ್ತಾಯಿಸಿ ರಾಜ್ಯಾದ್ಯಂತ ರಾಸ್ತಾ ರೋಕೋ ಮತ್ತಿತರ ಚಳುವಳಿಗಳು ನಡೆದಿವೆ. ಇದರಲ್ಲಿ ಸಾವಿರಾರು ಮಂದಿ ಭಾಗವಹಿಸಿದ್ದಾರೆ. ಹಲವರನ್ನು ತಮಿಳುನಾಡು ಸರಕಾರದ ಪೋಲಿಸರು ಬಂಧಿಸಿದ್ದಾರೆ.

ಸಿಪಿಐ(ಎಂ)ನ ಪೊಲಿಟ್‌ಬ್ಯುರೊ ಸದಸ್ಯರೂ, ತಮಿಳುನಾಡು ರಾಜ್ಯ ಕಾರ್ಯದರ್ಶಿಗಳೂ ಆಗಿರುವ ಜಿ.ರಾಮಕೃಷ್ಣನ್ ಪತ್ರಿಕಾ ಸಮ್ಮೇಳನವೊಂದನ್ನು ಉದ್ದೇಶಿಸಿ ಮಾತಾಡುತ್ತ ತಮಿಳುನಾಡು ಸರಕಾರ ಇಡೀ ರಾಜ್ಯ ಬರ ಪೀಡಿತ ಎಂದಿದ್ದರೂ ಅದು ಪ್ರಕಟಿಸಿರುವ ಪರಿಹಾರಗಳನ್ನು ಇನ್ನೂ ಕೊಟ್ಟಿಲ್ಲ ಎಂದರು. ಯಾವ ಕೃಷಿ ಕಾರ್ಮಿಕನಿಗೂ ಕೆಲಸ ಸಿಕ್ಕಿಲ್ಲ. ನೋಟು ರದ್ಧತಿ ಈ ಸಂಕಟವನ್ನು ಮತ್ತಷ್ಟು ಹೆಚ್ಚಿಸಿದೆ. ರಾಜ್ಯ ಸರಕಾರ ಪರಿಹಾರಗಳನ್ನು ಹೆಚ್ಚಿಸಬೇಕು ಮತ್ತು ಈ ನಿಟ್ಟಿನಲ್ಲಿ ತಕ್ಷಣವೇ ಕಾರ್ಯ ಪ್ರವೃತ್ತಗೊಳ್ಳಬೇಕು ಎಂದು ಅವರು ಆಗ್ರಹಿಸಿದರು.

ಲೈಂಗಿಕ ಕಿರುಕುಳದ ಆಪಾದನೆಯ ಮೇಘಾಲಯ ರಾಜ್ಯಪಾಲ ರಾಜಿನಾಮೆ

ಮಹಿಳಾ ಉದ್ಯೋಗಾರ್ಥಿಯ ಮೇಲೆ ಲೈಂಗಿಕ ಕಿರುಕುಳ ಎಸಗಿದ್ದಾರೆ ಎನ್ನುವ ಆಪಾದನೆಗೆ ಗುರಿಯಾಗಿರುವ ಮೇಘಾಲಯದ ರಾಜ್ಯಪಾಲ ವಿ.ಷನ್ಮುಘನಾತನ್‌ಅವರು ಜನವರಿ 26ರಾತ್ರಿ ತಮ್ಮ ಸ್ಥಾನಕ್ಕೆ ರಾಜಿನಾಮೆ ನೀಡಿದ್ದಾರೆ.

ಏಕಕಾಲದಲ್ಲಿ ಮೇಘಾಲಯ ಮತ್ತು ಅರುಣಾಚಲ ಪ್ರದೇಶದ ರಾಜ್ಯಪಾಲರಾಗಿದ್ದ ಅವರ ವಿರುದ್ಧ ಈ ಆಪಾದನೆ ಹಾಕಿರುವ 80 ಜನ ರಾಜಭವನದ ನೌಕರರು ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರಿಗೆ ಮತ್ತು ರಾಷ್ಟ್ರಪತಿಗಳಿಗೆ, ಅವರನ್ನು ಕೆಲಸದಿಂದ ವಜಾಗೋಳಿಸಲು ಆಗ್ರಹಿಸಿ ಪತ್ರ ಬರೆದಿದ್ದರು.

ಜನವರಿ 26ರಂದು ಎರಡು ಪ್ರಮುಖ ರಾಜಭವನದ ಮುಮದೆ ಪ್ರತಿಭಟನೆ ನಡೆದೀ ಬಗ್ಗೆ ತನಿಖೆ ನಡೆಸಿ ಈತನ ಮೇಲೆ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು.

ಆದರೆ ಕೇಂದ್ರ ಸರಕಾರ ಸಾಮಾನ್ಯವಾಗಿ ಮಾಡುವಂತೆ ಯಾವುದೇ ತನಿಖೆ ನಡೆಸಲಿಲ್ಲ, ಕೇಂದ್ರ ಮುಖಂಡರ ಸಲಹೆಯ ಮೇರೆಗೆ ಆತ ರಾಜೀನಾಮೆ ನೀಡಿ ತಪ್ಪಿಸಿಕೊಳ್ಳುವಂತೆ ಮಾಡಿದರು ಎನ್ನಲಾಗುತ್ತಿದೆ.

ಷನ್ಮುಘನಾತನ್ ಆರ್‌ಎಸ್‌ಎಸ್‌ನ ಹಿರಿಯ ಮುಖಂಡರಲ್ಲಿ ಒಬ್ಬರು , ಅದರಿಂದಾಗಿಯೇ ಅವರನ್ನು ರಾಜ್ಯಪಾಲರ ಹುದ್ದೆಗೆ ನೇಮಿಸಲಾಗಿತ್ತು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. 2015 ಮೆ ತಿಂಗಳಿನಲ್ಲಿ ರಾಜ್ಯಪಾಲರಾಗಿ ನೇಮಕಗೊಂಡಿದ್ದರು. ಸೆಪ್ಟೆಂಬರ್ 2015ರಿಂದ ಅಗಸ್ಟ 2016ರವರೆಗೆ ಮಣಿಪುರದ ರಾಜ್ಯಪಾಲರಾಗಿ ಕಾರ್ಯ ನಿರ್ವಹಿಸಿದ್ದರು, ಈ ಸಂಧರ್ಭದಲ್ಲಿಯೇ ಅವರು ಕಲಾವಿದರಿಗೆ ಸಂಸ್ಕೃತಿಯ ಬಗ್ಗೆ ಪ್ರಬಂದ ಬರೆಯಲು ಹೇಳಿ ಗೆದ್ದವರಿಗೆ ರಾಜಭವನದಲ್ಲಿ ತನ್ನೊಂದಿಗೆ ಚಹ ಕುಡಿಯುವ ಅವಕಾಶ ದೊರಕುವದೆಂದು ಹೇಳಿ ವಿವಾದಕ್ಕೆ ತುತ್ತಾಗಿದ್ದರು.

ಅವರ ರಾಜೀನಾಮೆಯ ನಂತರ ಕಿರುಕುಳದ ಆರೋಪ ಹೊರಿಸಿ ತನಿಖೆ ನಡೆಸಲು ಯಾವುದೇ ಆಧಾರಗಳಿಲ್ಲ ಎಂದು ಗೃಹ ರಾಜ್ಯ ಸಚಿವ ಕಿರಣ್ ರಿಜ್ಜು ಹೇಳಿದ್ದಾರೆ.

ಈ ನಂತರ ತಮಿಳುನಾಡಿನ ಬಿಜೆಪಿ ಮುಖಂಡರು ಮತಾಂತರದ ವಿರುದ್ಧ ಅವರ ಅವಿರತ ಹೋರಾಟದ ಕಾರಣಕ್ಕೆ ಅವರು ತಮ್ಮ ಸ್ಥಾನ ಕಳೆದುಕೊಂಡಿದ್ದಾರೆ ಎಂದು ಅವರನ್ನು ಸಮರ್ಥಿಸಿಕೊಳ್ಳಲು ಪ್ರಯತ್ನಿಸಿದೆ.

ಉತ್ತರಪ್ರದೇಶ ವಿಧಾನಸಭಾ ಚುನಾವಣೆಗಳು

ಆಳುವ ಪಕ್ಷವಾಗಬೇಕೆಂದಿರುವ ಬಿಜೆಪಿಯ ದಾಖಲೆಗಳು

ಉತ್ತರ ಪ್ರದೇಶದ ವಿಧಾನಸಭಾ ಚುನಾವಣೆಗಳ ಮೊದಲ ಸುತ್ತಿನ ಪ್ರಚಾರ ಕಾರ್ಯ ಭರದಿಂದ ಸಾಗುತ್ತಿದೆ. ಒಟ್ಟು 839 ಮಂದಿ ನಾಮಪತ್ರಗಳನ್ನು ಸಲ್ಲಿಸಿದ್ದಾರೆ. ಇವರಲ್ಲಿ 836 ಅಭ್ಯರ್ಥಿಗಳು ಸಲ್ಲಿಸಿರುವ ವಿವರಗಳಆಧಾರದಲ್ಲಿ ಉತ್ತರಪ್ರದೇಶ ಎಲೆಕ್ಷನ್ ವಾಚ್ ಸಂಘಟನೆ ಕಲೆಹಾಕಿರುವ ಮಾಹಿತಿಗಳು ಬಹಳ ಕುತೂಹಲಕಾರಿಯಾಗಿವೆ.

ಈ 836 ಅಭ್ಯರ್ಥಿಗಳಲ್ಲಿ 302 ಮಂದಿ, ಅಂದರೆ 36ಶೇ. ಮಂದಿ ಕೋಟ್ಯಾಧೀಶರು. ಇವರಲ್ಲಿ ಮೊದಲ ಮೂರು ಸ್ಥಾನಗಳಲ್ಲಿರುವವರು ಒಬ್ಬರು ಕಾಂಗ್ರಸ್ ಅಭ್ಯರ್ಥಿ(ಆಸ್ತಿ ಮೊತ್ತ 211 ಕೋಟಿರೂ.) ಮತ್ತು ಇಬ್ಬರು ಬಿಜೆಪಿಯವರು (114 ಮತ್ತು 58 ಕೋಟಿ ರೂ.)

ಕ್ರಿಮಿನಲ್ ದಾಖಲೆಗಳಿರುವ ಅಭ್ಯರ್ಥಿಗಳ ಸಂಖ್ಯೆ 168, ಅಂದರೆ 20% , ಇವರಲ್ಲಿ ಅತಿ ಗಂಭೀರ ಆಪಾದನೆಗಳಿರುವವರ ಸಮಖ್ಯೆಯೇ 143! ಕ್ರಿಮಿನಲ್ ಕೇಸುಗಳಿರುವವರಲ್ಲಿ ಮೊದಲ ಸ್ಥಾನವನ್ನು ಬಿಜಪಿ ಪಡೆದಿದೆ! 73ರಲ್ಲಿ 29, ನಂತರದ ಸ್ಥಾನ ಬಿಎಸ್‌ಪಿಯದ್ದು, 73ರಲ್ಲಿ 28, ಸಮಾಜವಾದಿ ಪಕ್ಷದ 51 ಅಭ್ಯರ್ಥಿಗಳಲ್ಲಿ 15 ಮಂದಿ ಮತ್ತು ಕಾಂಗ್ರೆಸಿನ 24 ಮಂದಿಯಲ್ಲಿ 6 ಈ ಕೆಟಗರಿಯಲ್ಲಿದ್ದಾರೆ.

ಅತಿ ಗಂಭೀರ ಕೇಸುಗಳು ಇರುವವರಲ್ಲಿಯೂ ಬಿಜೆಪಿಯದ್ದೇ ಮೇಲುಗೈ! ಮೇಲೆ ಹೇಳಿದ 29ರಲ್ಲಿ 26ಮಂದಿ, ಅಂದರೆ 36ಶೇ.!

'ಒಳ್ಳೆಯ ದಿನ'ಗಳನ್ನು ತರುವ ಪಕ್ಷದ ಇನ್ನೊಂದು ದಾಖಲೆಯಂದರೆ ಸ್ಪರ್ಧೆಯಲ್ಲಿರುವ ಪಕ್ಷಾಂತರಿಗಳಲ್ಲಿಯೂ ಅದರದ್ದೇ ಮೇಲುಗೈ. ಈ ಪಕ್ಷಾಂತರಿಗಳಲ್ಲಿ ಈ ಹಿಂದೆ ರಾಜ್ಯ ಕಾಂಗ್ರೆಸ್ ಅಧ್ಯಕ್ಷರು ಮತ್ತು ಬಿಎಸ್‌ಪಿಯ ಇಬ್ಬರು ಪ್ರಮುಖರಿದ್ದಾರೆ ಎಂದು ಬಿಜೆಪಿ ಹೆಮ್ಮೆ ಪಟ್ಟುಕೊಳ್ಳಬಹುದು!

ಬಿಜೆಪಿ ಪಟ್ಟಿಯಲ್ಲಿ ಒಬ್ಬರೇ ಒಬ್ಬರು ಮುಸ್ಲಿಮ್ ಅಭ್ಯರ್ಥಿ ಕೂಡ ಇಲ್ಲದಿರುವುದು ಆಶ್ಚರ್ಯದ ಸಂಗತಿಯೇನಲ್ಲ. ಗೆಲ್ಲಹುದಾದ ಮುಸ್ಲಿಮ್ ಅಭ್ಯರ್ಥಿಯಿಲ್ಲದಿರುವುದೇ ಇದ-ಕ್ಕೆ ಕಾರಣ ಎಂಬುದು ಬಿಜೆಪಿ ಮುಖಂಡ ಶಾನವಾಜ್ ಹುಸೇನ್ ಸಮಜಾಯಿಷಿ.

ವರದಕ್ಷಿಣೆಗೆ ಕುರೂಪ ಕಾರಣ


ಎನ್ನುತ್ತದೆ ಮಹಾರಾಷ್ಟ್ರದ ಪಠ್ಯಪುಸ್ತಕ!

ಹೌದು, ಮಹಾರಾಷ್ಟ್ರ ರಾಜ್ಯ ಮಾಧ್ಯಮಿಕ ಮತ್ತು ಉನ್ನತ ಮಾಧ್ಯಮಿಕ ಶಿಕ್ಷಣ ಮಂಡಳಿಯ 12ನೇ ತರಗತಿಯ ಸಮಾಜಶಾಸ್ತ್ರ ಪಠ್ಯಪುಸ್ತಕದ 'ಭಾರತದ ಪ್ರಮುಖ ಸಾಮಾಜಿಕ ಸಮಸ್ಯೆಗಳು' ಅಧ್ಯಾಯದಲ್ಲಿ ದೇಸದಲ್ಲಿ ವರದಕ್ಷಿಣೆಯ ಸಮಸ್ಯೆಗೆ ಹುಡುಗಿಯ ಕುರೂಪ ಮತ್ತು ಅಂಗನ್ಯೂನತೆಗಳು ಕಾರಣ ಎನ್ನುತ್ತದೆಯಂತೆ. ಧರ್ಮ, ಜಾತಿ, ಸಾಮಾಜಿಕ ಪ್ರತಿಷ್ಠೆ ಮತ್ತು 'ಪರಿಹಾರ'ದ ನೀತಿಯೊಂದಿಗೆ ಈ ಕಾರಣದಿಂದಾಗಿ ಕೆಲವು ಕುಟುಂಬಗಳು ವರದಕ್ಷಿಣೆ ಕೊಡಬೇಕಾಗಿದೆ ಎಮದು ಹೇಳಲಾಗಿದೆ.

ಕುರೂಪಿ ಮತ್ತು ಅಂಗವಿಕಲ ಹೆಣ್ಣುಮಕ್ಕಳಿಗೆ ಗಂಡಿನ ಕಡೆಯವರು ಹೆಚ್ಚು ವರದಕ್ಷಿಣೆಯ ಪರಿಹಾರ ಕೇಳುತ್ತಾರೆ, ಅಸಹಾಯಕ ಪೋಷಕರು ಅದನ್ನು ತೆರಬೇಕಾಗುತ್ತದೆ , ಇದು ವರದಕ್ಷಿಣೆಯ ಪದ್ಧತಿ ಬೆಳೆಯಲು ಕಾರಣವಾಗುತ್ತದೆ ಎಮದು ಈ ಪಠ್ಯ ಹೇಳುತ್ತದೆ.

ಅದೃಷ್ಟವಶಾತ್ ಈ ಅಂಶವನ್ನು ಮಂಡಳಿಯ ಅಧ್ಯಕ್ಷರ ಗಮನಕ್ಕೆ ತಂದಾಗ ಅವರು ಅದನ್ನು ಸಮರ್ಥಿಸಲಿಲ್ಲ, ಈ ಬಗ್ಗೆ ಅಧ್ಯಯನ ಮಂಡಳಿಯೊಂದಿಗೆ ಚರ್ಚಿಸುವುದಾಗಿ ಹೇಳಿದರು.

ರಾಜಸ್ತಾನದ ಸಿಕಾರ್‌ನಲ್ಲಿ ಫೆಬ್ರುವರಿ 2ರಂದು ಬಿಜೆಪಿ ರಾಜ್ಯಸರಕಾರ ವಿದ್ಯುತ್ ದರಗಳನ್ನು ಹೆಚ್ಚಿಸಿರುವುದು ಮತ್ತು ಇತರ ರೈತ-ವಿರೋಧಿ ಧೋರಣೆಗಳ ವಿರುದ್ಧ ಬೃಹತ್ ಪ್ರತಿಭಟನೆಯಲ್ಲಿ ಒಂದುಲಕ್ಷಕ್ಕೂ ಹೆಚ್ಚು ಮಂದಿ ಭಾಗವಹಿಸಿದ್ದರು. ರಾಜ್ಯ ರೈತಸಂಗದ ಕರೆಯ ಮೇರೆಗೆ ರಾಜ್ಯದ ಇತರೆಡೆಗಳಲ್ಲೂ ಭಾರೀ ಪ್ರತಿಭಟನೆಗಳು ನಡೆಯುತ್ತಿವೆ.



'ಸಮುದಾಯ'ದ "ಕಾವ್ಯರಂಗ" ತಿರುಗಾಟ -2017

ಕನ್ನಡದಕಾವ್ಯ ಪರಂಪರಯನ್ನು ಕಾಲೇಜು ವಿಧ್ಯಾರ್ಥಿಗಳ ಮುಂದೆ ಬಿಚ್ಚಿಡುವ ಪ್ರಯತ್ನ



ಯುವಕರ ದನಿ ಇಂದು ಕರ್ಕಶವಾಗುತ್ತಿರುವ ಹೊತ್ತಿನಲ್ಲಿ ಅವರ ದೇಹಕ್ಕೆ ಕಾವ್ಯದ ಸಾಹಚರ್ಯ ಒದಗಿಸುವ ಸಾಮಾಜಿಕ ಉದ್ದೇಶದಿಂದ, ಶಾಸನ ಪದ್ಯಗಳಿಂದ ಹಿಡಿದು ಇದುವರೆಗಿನ ಕಾವ್ಯ ಕಥನಗಳ ಆಯ್ದ ಬರಹಗಳ ತುಣುಕನ್ನು ಸಂಬಂಧಗಳ ಪರಿಕಲ್ಪನೆಯ ಆಧಾರದಲ್ಲಿ ಹೆಣೆದು ಕಾವ್ಯರಂಗ ರೂಪಕವಾಗಿಸಲಾಗಿದೆ. ಕನ್ನಡದ ಲೋಕಗ್ರಹಿಕೆ, ಕನ್ನಡದ ವಿವೇಕ ಇವನ್ನು ಇಂದಿನ ಯುವಕರಿಗಾಗಿ ಮರುನಿರೂಪಿಸುವ ಒಂದು ಪ್ರಯತ್ನದ ಭಾಗವಾಗಿ 'ಸಮುದಾಯ'ದ ನಟ ನಟಿಯರು ಈ ಕಾವ್ಯಗಳನ್ನು ಆಡುತ್ತಾರೆ, ಹಾಡುತ್ತಾರೆ, ಕೆಲವನ್ನು ಅಭಿನಯಿಸುತ್ತಾರೆ. ಒಂದೂ ಕಾಲುಗಂಟೆ ಕಾಲದ ಅವಧಿಯಲ್ಲಿ ಸುಮಾರು 31 ಸಾಹಿತ್ಯಿಕ ಬರಹವನ್ನು ಇಲ್ಲಿ ರಂಗಕ್ಕೆ ತರಲಾಗಿದೆ. ಸಾಹಿತ್ಯ ಕಥನಗಳ ರಂಗ ಓದು ಇದು. ವಿದ್ಯಾರ್ಥಿಗಳಿಗೂ, ಅಧ್ಯಾಪಕರಿಗೂ ಅನುಕೂಲವಾಗುವುದೆಂಬ ಶೈಕ್ಷಣಿಕ ಉದ್ದೇಶವು ಇದೆ.

"ಹಣತೆಹಚ್ಚುತ್ತೇವೆ,ನಾವುಕತ್ತಲನ್ನುಗೆಲ್ಲುತ್ತೇವೆಂಬ ಜಿದ್ದಿನಿಂದಲ್ಲ, ಇರುವಷ್ಟು ಹೊತ್ತು ನಿಮ್ಮ ಮುಖ ನಾವು ನಮ್ಮ ಮುಖ ನೀವು, ನೋಡಬಹುದೆಂಬ ಆಶೆಯಿಂದ" ಎಂಬ ಜಿ.ಎಸ್.ಶಿವರುದ್ರಪ್ಪ ಅವರ ಪದ್ಯದಿಂದ ಆರಂಭವಾಗುವ ಈ ಕಾವ್ಯರಂಗ, ಕನ್ನಡ ನಾಡು ರೂಪಿಸಿಕೊಂಡು ಬಂದ ಸಂಬಂಧಗಳ ಜಾಲವನ್ನು ಹೆಣೆಯುವ ಕೆಲವು ನುಡಿಗಳನ್ನು ಕವಿರಾಜ ಮಾರ್ಗದಿಂದ ಮತ್ತು ದೂರದ ಬನವಾಸಿ ಕುರಿತು ಪಂಪನು ಹೇಳುವ "ಚಾಗದ ಭೋಗದ" ಸಾಲುಗಳನ್ನು ಒಳಗೊಂಡು, ಮನುಷ್ಯರಲ್ಲಿರುವ ಜಾತಿಸೂತಕ, ಕರ್ಮಸೂತಕವನ್ನು ಕಿತ್ತಿ ಅವರೆಲ್ಲರನ್ನು ಒಂದು ಮಾಡಲು ಹೊರಟ ಶರಣ ಪರಂಪರೆಯನ್ನು ನೆನೆಯುತ್ತಾ, ಕುವೆಂಪುರವರ "ರಾಮಾಯಣದರ್ಶನಂ" ಹಾಗೂ ಶಿವರಾಮ ಕಾರಂತರ "ಚೋಮ" ಹಾಗೂ ಪ್ರಕೃತಿ ಸಂಬಂಧಗಳ ಕಲ್ಪನಾ ಸ್ವರೂಪ ಸಾರುವ ಬೇಂದ್ರೆಯವರ "ಭೃಂಗದ ಬೆನ್ನೇರಿಬಂತು" ಹಾಗೂ ವರ್ಗ ಅಸಮಾನತೆ, ಧರ್ಮದ ಹೆಸರಿನಲ್ಲಿ ನಡೆಯುವ ಢೋಂಗಿತನ ಸಾರುವ ಜಾನಪದ ಹಾಗೂ ತತ್ವಪದದ ಕೆಲವು ಸಾಲುಗಳನ್ನು ಧ್ವನಿಪೂರ್ವಕವಾಗಿ ಇಲ್ಲಿ ನಿರೂಪಿಸಲಾಗಿದೆ. ಸ್ತ್ರೀ ಸಂಬಂದಗಳ ಕುರಿತು ಹೇಳುವ ಪ್ರತಿಭಾ ನಂದಕುಮಾರ ಹಾಗೂ ವೈದೇಹಿಯವರ ಕವನದ ಸಾಲುಗಳು ಇಲ್ಲಿ ಹೆಣ್ಣಿನ ಶೋಷಣೆಯ ಮುಖಗಳನ್ನು ಅನಾವರಣ ಮಾಡಿವೆ ದೇವನೂರರ "ಒಡಲಾಳ" ಸಿದ್ದಲಿಂಗಯ್ಯನವರ "ನಿನ್ನೆ ದಿನ ನನ್ನಜನ" ಕವನಗಳು ಇವತ್ತಿನ ಶೋಷಣೆಯನ್ನು ಸಾರುತ್ತವೆ. ಕೊನೆಗೆ ಸು,ರಂ ಎಕ್ಕುಂಡಿಯವರ "ಮೂಡಲದೀಪ' ದೊಂದಿಗೆ ಕಾವ್ಯರಂಗ ಮುಕ್ತಾಯವಾಗುತ್ತದೆ.

ಒಟ್ಟಾರೆಯಾಗಿ 'ಕಾವ್ಯರಂಗ' ಕಾಲೇಜಿನ ವಿದ್ಯಾರ್ಥಿಗಳಿಗೆ ಹಾಗು ಉಪನ್ಯಾಸಕರಿಗೆ ಮೆಚ್ಚಿಗೆಯಾಗುವ ರೀತಿಯಲ್ಲಿ ಕಲಾವಿದರಾದ ರಂಜಿತಾ ಜಾಧವ. ಶೃತಿ ತಿಪಟೂರ. ಧೀರಜ್, ಯಲ್ಲಪ್ಪ ಗಾಣಗೇರ, ಚಿದಂಬರ ಕುಲಕರ್ಣಿ, ಮಹಾಂತೇಶ ದೊಡ್ಡಮನಿ, ಪ್ರಶಾಂತ, ಪ್ರಮೋದ, ವಿನಾಯಕ ಈಳಗೇರ, ಬಸವರಾಜ ಕಮ್ಮಾರ, ಕುಮಾರ ಬದಾಮಿ, ಚಂದ್ರಶೇಖರ ಕಿಲ್ಲೇದಾರ, ಪ್ರಶಾಂತ, ಶಿವಕುಮಾರ ಒಳಗೊಂಡ ಕಲಾತಂಡ ಎಲ್ಲರನ್ನು ಮಂತ್ರಮುಗ್ದರನ್ನಾಗಿಸುವ ಹಾಗೆ ಅಭಿನಯಿಸಿದರು. ಈ "ಕಾವ್ಯರಂಗ"ದ ಯಶಸ್ಸಿನ ಹಿಂದೆ ನಿರ್ದೇಕರಾದ ಡಾ.ಶ್ರೀಪಾದ ಭಟ್ ಹಾಗೂ ರಂಗಪಠ್ಯ ಸಿದ್ದಪಡಿಸಿದ ಡಾ.ಎಂ.ಜಿ.ಹೆಗಡೆಯವರ ಶ್ರಮವಿದೆ. ಇವರೆಲ್ಲರ ಶ್ರಮ ಸಾರ್ಥಕಗೊಂಡದ್ದು 'ಸಮುದಾಯದ ಕಾವ್ಯರಂಗ ತಿರುಗಾಟ'ದಿಂದ.

'ಕಾವ್ಯರಂಗ' ಹಾವೇರಿಜಿಲ್ಲೆಯ ಶೇಷಗಿರಿಯಲ್ಲಿ ಜನವರಿ 21 ರಿಂದ 15 ದಿನಗಳ ಕಾಲ ಡಾ.ಶ್ರೀಪಾದ ಭಟ್‌ರವರ ನಿರ್ದೇಶನದಲ್ಲಿ ತರಬೇತಿ ಹೊಂದಿ, ದಿನಾಂಕ; ಫೆಬ್ರುವರಿ 3ರಂದು ಧಾರವಾಡದ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ನಾಡಿನ ಪ್ರಸಿದ್ಧ ರಂಗ ನಿರ್ದೇಶಕರಾದ ಶ್ರೀಚಿದಂಬರರಾವ ಜಂಬೆ ಯವರಿಂದ ಉದ್ಘಾಟನೆಗೊಂಡು ಧಾರವಾಡ, ಬೆಳಗಾಂ, ಗದಗ ಜಿಲ್ಲೆಗಳ ಕಾಲೇಜುಗಳಲ್ಲಿ ಪ್ರದರ್ಶನ ನೀಡಿದೆ.

ರಂಗ ಪಠ್ಯ: ಡಾ.ಎಂ.ಜಿ.ಹೆಗಡೆ ಮತ್ತು ಡಾ.ಶ್ರೀಪಾದ ಭಟ್ ರಂಗಸಜ್ಜಿಕೆ: ದಾಮೋದರ ನಾಯ್ಕ, ಹೊನ್ನಾವರ;

ವಿನ್ಯಾಸ, ಸಂಗೀತ, ನಿರ್ದೇಶನ: ಡಾ.ಶ್ರೀಪಾದ ಭಟ್ ಸಹ ನಿರ್ದೇಶನ; ಸೂರಜ್ ಬಿ.ಆರ್

ಸಮತೆಗಾಗಿ ಸಹಪಯಣ.......... ಪುಟ 16 ರಿಂದ

ಪರಿಸ್ಥಿತಿಯನ್ನು ಬದಲಾಯಿಸಲು ಹೆಣ್ಣಿಗೆ ಮಾತ್ರ ಸಾಧ್ಯ ಎಂದರು.

ಮುಖ್ಯ ಅತಿಥಿಯಾಗಿ ಕರ್ನಾಟಕ ಮಹಿಳಾ ಆಯೋಗದ ಮಾಜಿ ಅಧ್ಯಕ್ಷೆ ಮಂಜುಳ ಮಾನಸರವರು ಮಾತನಾಡಿ "ಮಹಿಳೆಯರು ಆರ್ಥಿಕ ಚಟುವಟಿಕೆಗಳಲ್ಲಿ ಮುಂಚೂಣಿಯಲ್ಲಿದ್ದರೂ, ಅವರ ಶ್ರಮಕ್ಕೆ ಬೆಲೆ ಕೊಡದೆ ಅವಳನ್ನು ದೇವತೆಯ ಸ್ಥಾನ ಕೊಟ್ಟು ಶೋಷಣೆ ಮಾಡುವ ಪ್ರವೃತ್ತಿಯನ್ನು" ಬಿಡಿಸಿಟ್ಟರು.

ಗರ್ಭದಿಂದಲೇ ಮಹಿಳೆಯನ್ನು ಸರಕನ್ನಾಗಿ ನೋಡುತ್ತಿರುವ ಮಾರುಕಟ್ಟೆ ಆಧಾರಿತ ಆರ್ಥಿಕತೆ–ಯು ನಮ್ಮ ಶ್ರಮದ ಫಲವನ್ನು ಉಳ್ಳವರ ಮನೆಯ ಮುಂದಿನ ಚಿನ್ನದ ರಂಗೋಲಿಯಾಗಲು ಬಿಡಬಾರದೆಂದು ಹೇಳಿದರು.

ಚಿಂತನೆ ಮತ್ತು ಚಳುವಳಿಗಳನ್ನು ಒಟ್ಟಿಗೆ ಬೆಸೆಯುವ ನಿಟ್ಟಿನಲ್ಲಿ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಮತ್ತು ಕನ್ನಡ ಪುಸ್ತಕ ಪ್ರಾಧಿಕಾರ ಸಹಯೋಗದಲ್ಲಿ ಮಂಡ್ಯದಲ್ಲಿ ನಡೆದ ಎರಡು ದಿನಗಳ ಸಮಾವೇಶದ ಮೊದಲ "ನುಡಿಯೊಡನಾಟ – ಮಹಿಳೆಯ ಭಿನ್ನ ಅನುಭವ ಲೋಕದೊಂದಿಗೆ" ಸಂವಾದ ಗೋಷ್ಠಿಯಲ್ಲಿ ಎಚ್.ಎಲ್. ಪುಷ್ಪ, ಮಾಳಮ್ಮ, ದೇವಿ ಮಳವಳ್ಳಿ, ಚಾಂದನಿ, ಅನುರಾಧಾ, ಇಸಾ ಬೇಗಂ ಮಾತನಾಡಿದರು.

ಎರಡನೇ "ನುಡಿಯ ನಡೆ – ಕಲೆಗಳಲ್ಲಿ ಹೆಣ್ಣು ತುಳಿದ ಪ್ರತಿರೋಧದ ಹಾದಿಗಳು" ಗೋಷ್ಠಿಯಲ್ಲಿ ಸಾಹಿತ್ಯ, ರತಿರಾವ್, ರೂಪಾ ಹಾಸನ, ಆರ್. ಚಲಪತಿ ರವರು ಮಾತನಾಡಿದರು.

ಮೂರನೇ "ಹೊಸ ನಡೆಯ ನುಡಿ – ಹಲವು ದಾರಿಗಳ ಹೊಸ ಸಾಧ್ಯತೆಗಳು" ಗೋಷ್ಠಿಯಲ್ಲಿ ಧರಣೀದೇವಿ ಮಾಲಗತ್ತಿ, ಮಾಧವಿ ಎಂ.ಕೆ., ಕಿರಣ ಗಾಜನೂರು ಮಾತನಾಡಿದರು.

ನಾಲ್ಕನೇ "ನುಡಿ ನಡೆಯ ಸಹಪಯಣ – ಮಹಿಳಾ ಸಾಹಿತ್ಯ, ಕಲೆ ಮತ್ತು ಚಳುವಳಿಗಳ ಒಡನಾಟದ ರೂಪುರೇಷೆ" ಗೋಷ್ಠಿಯಲ್ಲಿ ನೀಲಾ ಕೆ. ಶಾರದಾ ಗೋಪಾಲ, ಚೇತನಾ ತೀರ್ಥಹಳ್ಳಿ, ಮಲ್ಲಿಕಾ ಬಸವರಾಜ, ರಂಗನಾಥ ಕಂಠನಕುಂಟೆ, ರೂಪ. ಕೆ.ಮತ್ತಿಕೆರೆ, ಬಿ. ಪೀರ್ ಬಾಷಾ ಮಾತನಾಡಿದರು. ಸ್ಥಳೀಯ ಕಾಲೇಜುಗಳ ಮಹಿಳಾ ಅಧ್ಯಯನ, ಪತ್ರಿಕೋದ್ಯಮ ಮತ್ತು ಭಾಷಾ ಶಾಸ್ತ್ರ ವಿದ್ಯಾರ್ಥಿಗಳೂ ದೊಡ್ಡ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು.

ಅಮರಣಾಂತ ಉಪವಾಸ ಸತ್ಯಾಗ್ರಹ....... ಪುಟ 5 ರಿಂದ

ಮಾಡುವ ದಲಿತ ವಿಭಾಗದ ಈ ಕಾರ್ಮಿಕರು ಒಳ್ಳೆಯ ಬಟ್ಟೆ ಹಾಕುವುದನ್ನೂ ಸಹಿಸಲಾರದ ಸ್ಥಿತಿ ನಗರಸಭೆಯಲ್ಲಿದೆ. ಕಾರ್ಮಿಕರ ನಿರಂತರವಾದ ಹೋರಾಟದ ಫಲವಾಗಿ ಸರ್ಕಾರ ಗುತ್ತಿಗೆ ಪೌರ ಕಾರ್ಮಿಕರಿಗೆ 14 ಸಾವಿರ ರೂಪಾಯಿ ಕನಿಷ್ಟ ವೇತನ ನಿಗದಿಗೊಳಿಸಿ ಆದೇಶ ಹೊರಡಿಸಿದೆ. ಆದರೆ, ಹಾಸನದ ನಗರಸಭೆಯ ಅಧ್ಯಕ್ಷರು ಇದನ್ನು ನಾನು ಮಾಡಿಸಿಕೊಂಡು ಬಂದಿರುವುದು ಹಾಗಾಗಿ ನೀವು ನನ್ನ ಮಾತು ಕೇಳಬೇಕು ಎನ್ನುತ್ತಾರೆ.

ಹಾಸನ ನಗರಸಭೆಯಲ್ಲಿ ಕಳೆದ ಹತ್ತಾರು ವರ್ಷಗಳಿಂದ ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿರುವ 13 ಕಾರ್ಮಿಕರನ್ನು ನಗರಸಭೆ ಮತ್ತು ಗುತ್ತಿಗೆದಾರರು ಕಾರ್ಮಿಕರಿಗೆ ಯಾವುದೇ ತಿಳುವಳಿಕೆ ನೀಡದೆ ಹಾಗೂ ಅವರಿಂದ ಯಾವುದೇ ಸ್ಪಷ್ಟೀಕರಣವನ್ನೂ ಪಡೆಯದೆ ಏಕಾಏಕಿಯಾಗಿ ನಗರಸಭೆಯ ಅಧ್ಯಕ್ಷರ ಸೂಚನೆಯಂತೆ ನವೆಂಬರ್ 6ರಿಂದ ಅವರಿಗೆ ಅಕ್ರಮವಾಗಿ ಕೆಲಸ ನಿರಾಕರಿಸಿ, ಹಾಜರಾತಿ ಹಾಗೂ ವೇತನ ನೀಡದೆ ಬಡ ಹಾಗೂ ದಲಿತ ಕಾರ್ಮಿಕರಿಗೆ ಅನ್ಯಾಯ ಮಾಡಲಾಗಿದೆ.

ಕಾರ್ಮಿಕರಿಗೆ ಕೆಲಸ ಸ್ಥಗಿತಗೊಳಿಸಿರುವ ಬಗ್ಗೆ ಅಥವಾ ಕೆಲಸದಿಂದ ವಜಾ ಮಾಡಿರುವ ಬಗ್ಗೆಯಾಗಲೀ ನಗರಸಭೆಯ ಆಯುಕ್ತರು ಅಥವಾ ಗುತ್ತಿಗೆದಾರರಿಂದ ಇದುವರೆಗೂ ಯಾವುದೇ ರೀತಿಯಲ್ಲಿಯೂ ಲಿಖಿತ ಸೂಚನೆ ಬಂದಿರುವುದಿಲ್ಲ. ಈ ಬಗ್ಗೆ ಹಲವು ಬಾರಿ ನಗರಸಭೆ ಆಯುಕ್ತರನ್ನು ಮನವಿ ಮಾಡಿಕೊಂಡಾಗ ನಾವು ಯಾವುದೇ ಕಾರ್ಮಿಕರಿಗೂ ಕೆಲಸ ಸ್ಥಗಿತಗೊಳಿಸಿರುವುದಿಲ್ಲ ಅವರು ಕೆಲಸ ಮಾಡಲಿ ಅವರಿಗೆ ಹಾಜರಾತಿ ಹಾಕಿಸಿ ವೇತನ ಕೊಡಿಸಲಾಗುವುದು ಎಂದು ಮೌಖಿಕವಾಗಿ ತಿಳಿಸಿರುತ್ತಾರೆ. ಆದರೆ ಗುತ್ತಿಗೆದಾರರು ನಗರಸಭೆಯ ಅಧ್ಯಕ್ಷರ ಸೂಚನೆಯ ಆಧಾರದಲ್ಲಿಯೇ ಸದರಿ ಕಾರ್ಮಿಕರನ್ನು ಕೆಲಸದಿಂದ ಕೈಬಿಡಲಾಗಿದೆ ಎಂದು ತಿಳಿಸಿರುತ್ತಾರೆ. ಆದರೆ ಈ ಸಂಬಂಧ ಇದುವರೆಗೂ ಆಯುಕ್ತರು ಅಥವಾ ಗುತ್ತಿಗೆದಾರರಿಂದ ಕಾರ್ಮಿಕರಿಗೆ ಯಾವುದೇ ರೀತಿಯಲ್ಲಿಯೂ ಲಿಖಿತವಾಗಿ ಮಾಹಿತಿ ಅಥವಾ ಸೂಚನೆ ಇದುವರೆಗೂ ಬಂದಿರುವುದಿಲ್ಲ. ಕಾರ್ಮಿಕರು ಈಗಲೂ ಪ್ರತೀ ದಿನ ಕೆಲಸಕ್ಕೆ ಹಾಜರಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಆದರೆ ಸದರಿ ಕಾರ್ಮಿಕರಿಗೆ ಹಾಜರಾತಿ ಹಾಗೂ ವೇತನ ನೀಡುತ್ತಿಲ್ಲ.

ಪೌರ ಕಾರ್ಮಿಕರಿಗೆ ಸರ್ಕಾರದ ಅಧಿಸೂಚನೆಯಂತೆ ಕನಿಷ್ಟ ವೇತನ, 7 ತಿಂಗಳ ಬಾಕಿ ವೇತನ ಹಾಗೂ ಗುತ್ತಿಗೆ ಕಾರ್ಮಿಕ ಕಾಯ್ದೆಯನ್ವಯ ಸೇವಾ ಸೌಲಭ್ಯಗಳನ್ನು ನೀಡಬೇಕೆಂದು ಹಾಗೂ ಕಾರ್ಮಿಕರಿಗೆ ಇಎಸ್‌ಐ ಮತ್ತು ಇಪಿಎಫ್(ಭವಿಷ್ಯನಿಧಿ) ಸೌಲಭ್ಯ ನೀಡುವಲ್ಲಿ ಅಕ್ರಮ ನಡೆದಿದ್ದು ನಷ್ಟಕ್ಕೊಳಗಾದ ಕಾರ್ಮಿಕರಿಗೆ ಪರಿಹಾರ ನೀಡುವಂತೆ ಹಾಗೂ ತಪ್ಪಿತಸ್ಥ ಅಧಿಕಾರಿಗಳು ಮತ್ತು ಗುತ್ತಿಗೆದಾರರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿ ಕಾರ್ಮಿಕರು ಕಾನೂನುಬದ್ಧವಾಗಿಯೇ ನವೆಂಬರ್ 2ರಿಂದ 5ರವರೆಗ ಮುಷ್ಕರ ನಡೆಸಿದ್ದರು. ನಗರಸಭೆಯವರು ಕಾರ್ಮಿಕರಿಗೆ ಬಾಕಿ ಸಹಿತ ವೇತನ ಪಾವತಿಸಿದ ನಂತರ ಕಾರ್ಮಿಕರು ಮುಷ್ಕರ ಹಿಂಪಡೆದು ನವೆಂಬರ್ 6 ರಿಂದ ಕೆಲಸಕ್ಕೆ ಹಾಜರಾದರು.

ಶಾಸನಬದ್ಧವಾದ ಬೇಡಿಕೆಗಳ ಈಡೇರಿ–ಕೆಗಾಗಿ ಕಾರ್ಮಿಕರು ಮುಷ್ಕರ ನಡೆಸಿ ವೇತನ ಪಡೆದುಕೊಂಡದ್ದುನ್ನು ಮತ್ತು ಇಎಸ್‌ಐ ಮತ್ತು ಭವಿಷ್ಯನಿಧಿಯಲ್ಲಿ ಆಗಿರುವ ಅನ್ಯಾಯ ಮತ್ತು ಅಕ್ರಮದ ಬಗ್ಗೆ ಹಾಗೂ ನಗರಸಭೆಯಲ್ಲಿ ಗುತ್ತಿಗೆ ಕಾರ್ಮಿಕ ಕಾಯ್ದೆ ಹಾಗೂ ಇತರೆ ಕಾರ್ಮಿಕ ಕಾನೂನುಗಳು ಉಲ್ಲಂಘನೆಯಾಗಿರುವುದರ ವಿರುದ್ಧ ಪ್ರಜಾಸತ್ತಾತ್ಮಕವಾಗಿಯೇ ನಡೆಸಿದ ಕಾರ್ಮಿಕರ ಮುಷ್ಕರವನ್ನು ವಯಕ್ತಿಕವಾಗಿ ಪರಿಗಣಿಸಿದ ಹಾಸನ ನಗರಸಭೆಯ ಅಧ್ಯಕ್ಷರಾದ ಎಚ್.ಎಸ್. ಅನಿಲ್‌ಕುಮಾರ್‌ರವರು ಕಾರ್ಮಿಕರ ಕಾನೂನುಬದ್ಧ ಮುಷ್ಕರಕ್ಕೆ ಮುಂದಾಳಾಗಿ ನಿಂತಿದ್ದ ಕಾರ್ಮಿಕರನ್ನು ಗುರಿಯಾಗಿಸಿ ಅವರ ಮೇಲಿನ ಸೇಡಿನ ಕ್ರಮದ ಭಾಗವಾಗಿ ಅವರನ್ನು ಕೆಲಸದಿಂದ ಅಕ್ರಮವಾಗಿ ವಜಾ ಮಾಡಿರುತ್ತಾರೆ. ಯಾವುದೇ ಕಾರ್ಮಿಕರು ತಮ್ಮ ಕಾನೂನಾತ್ಮಕವಾದ ಬೇಡಿಕೆಗಳಿಗಾಗಿ ಕಾನೂನಾತ್ಮಕವಾಗಿ ಮುಷ್ಕರಕ್ಕಿಳಿಯುವುದನ್ನು ವಯಕ್ತಿಕವಾಗಿ ತೆಗೆದುಕೊಂಡಿರುವ ನಗರಸಭೆಯ ಅಧ್ಯಕ್ಷರು ಕಾರ್ಮಿಕರ ಮೇಲೆ ವಯಕ್ತಿಕವಾಗಿ ಸೇಡು ತೀರಿಸಿಕೊಳ್ಳುವುದರ ಮುಖಾಂತರ ಕಾರ್ಮಿಕರ ಹಕ್ಕುಗಳನ್ನು ಉಲ್ಲಂಘಿಸಿರುವುದಲ್ಲದೆ ಬಡ ಹಾಗೂ ಅತ್ಯಂತ ಕೆಳಸ್ಥರದ ದಲಿತ ಕಾರ್ಮಿಕರ ಮೇಲೆ ದೌರ್ಜನ್ಯ ಎಸಗಿದ್ದಾರೆ.

ಅನ್ಯಾಕ್ಕೊಳಗಾದ ಕಾರ್ಮಿಕರಿಗೆ ಕೆಲಸ ನೀಡುವಂತೆ ಬಹುತೇಕ ಎಲ್ಲಾ ನಗರಸಭಾ ಸದಸ್ಯರು ಅಧ್ಯಕ್ಷರಿಗೆ ಹಾಗೂ ಪೌರಾಯುಕ್ತರಿಗೆ ಆಗ್ರಹಪಡಿಸಿರುತ್ತಾರೆ. ರಾಜ್ಯ ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷರು, ಜಿಲ್ಲಾಧಿಕಾರಿಗಳು, ಕಾರ್ಮಿಕ ಇಲಾಖೆ, ರಾಜ್ಯ ಪೌರಾಡಳಿತ ನಿರ್ದೇಶನಾಲಯ ಕೆಲಸ ನಿರಾಕರಿಸಲ್ಪಟ್ಟಿರುವ ಕಾರ್ಮಿಕರಿಗೆ ಕೆಲಸ ನೀಡಬೇಕೆಂದು ಸೂಚಿಸಿದ್ದರೂ ಪೌರಾರಾಯುಕ್ತರು ಅದನ್ನು ಜಾರಿ ಮಾಡುತ್ತಿಲ್ಲ. ಆದರೆ, ಈ ಹಿಂದೆ ನಗರಸಭೆಯಲ್ಲಿ ಅನಧಿಕೃತವಾಗಿ ನಗರ ಸ್ವಚ್ಚತೆ–ಯ ಗುತ್ತಿಗೆ ನಿರ್ವಹಿಸಿ ಪೌರಕಾಮಿಕರಿಗೆ ಹಲವು ತಿಂಗಳ ವೇತನವನ್ನು ಬಾಕಿ ಉಳಿಸಿಕೊಂಡು ಇಎಸ್‌ಐ ಹಾಗೂ ಭವಿಷ್ಯನಿಧಿ ಪಾವತಿಯಲ್ಲಿ ಮೋಸ ಮಾಡಿದ್ದ ಕೆಲವು ನಗರಸಭಾ ಸದಸ್ಯರ ಮನೆ ಮುಂದೆ ನ್ಯಾಯ ಕೇಳಿ ಪೌರಕಾರ್ಮಿಕರು ಧರಣಿ ನಡೆಸಿದ್ದ ಕಾರಣವನ್ನು ಮುಂದಿಟ್ಟುಕೊಂಡು ಅಧ್ಯಕ್ಷರ ಮುಖಾಂತರ ಸೇಡು ತೀರಿಸಿಕೊಳ್ಳಲು ಅಧ್ಯಕ್ಷರೊಂದಿಗೆ ಸೇರಿ ದಲಿತ ಕಾರ್ಮಿಕರ ಮೇಲೆ ದೌರ್ಜನ್ಯ ನಡೆಸುತ್ತಿದ್ದಾರೆ. ಕಾರ್ಮಿಕರು ಯಾವ ತಪ್ಪು ಮಾಡದಿದ್ದರೂ ಅವರನ್ನು ನಗರಸಭೆಗೆ ಕರೆಸಿ ದಿನವಿಡೀ ನಿಲ್ಲಿಸಿ ಅಮಾನವೀಯವಾಗಿ ನಡೆಸಿಕೊಂಡು ಅವಮಾನಿಸಿ ಕಳುಹಿಸಿದ್ದಾರೆ.

ಕಾರ್ಮಿಕರು ಮತ್ತು ಕಾರ್ಮಿಕ ಸಂಘಗಳ ಸಂಘಟಿತ ಹೋರಾಟದಿಂದಾಗಿ ಹಾಗೂ ನ್ಯಾಯಾಲಯದ ಆದೇಶದಂತೆ ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿರುವ ಪೌರ ಕಾರ್ಮಿಕರನ್ನು ಖಾಯಂ ಮಾಡಲು ಉದ್ದೇಶಿಸಿರುವ ಮಾನ್ಯ ಕರ್ನಾಟಕ ಸರ್ಕಾರ ಪ್ರಕ್ರಿಯೆ ಆರಂಭಿಸಿರುವ ಸಂದರ್ಭದಲ್ಲಿ ಹತ್ತು ಹದಿನೈದು ವರ್ಷಗಳಿಂದ ಹಾಸನ ನಗರಸಭೆಯಲ್ಲಿ ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡಿರುವ ಈ ಬಡ ಹಾಗೂ ದಲಿತ ಕಾರ್ಮಿಕರ ಕೆಲಸ ಖಾಯಂ ಆಗಬಾರದು ಎನ್ನುವ ದುರುದ್ದೇಶದಿಂದಲೇ ಈ ಕಾರ್ಮಿಕರನ್ನು ಕೆಲಸದಿಂದ ಅಕ್ರಮವಾಗಿ ಕೈಬಿಟ್ಟು ಅವರಿಗೆ ಅನ್ಯಾಯ ಮಾಡಲಾಗುತ್ತಿದೆ.

ಧರ್ಮೇಶ್

ಕೇಳಿಸಿದ್ದು

"ವಿಶ್ವಾಸಾರ್ಹ ಪತ್ರಿಕೆ" ಎಂದು ಬೆನ್ನು ತಟ್ಟಿಕೊಂಡರೆ ಸಾಕಾ?

ಪ್ರಜಾವಾಣಿ ಕನ್ನಡದ ಹೆಸರಾಂತ ಪತ್ರಿಕೆ. ಆದರೆ... ಮೊದಿ ಸರಕಾರ ನೋಟು ರದ್ದತಿ ಬಳಿಕಾ Payment of wages act 1936 ಗೆ ತಿದ್ದುಪಡಿ ಮಾಡಿದೆ ಇದನ್ನು ಇದನ್ನು ಸರಿಯಾಗಿ ಅರ್ಥಮಾಡಿಕೊಳ್ಳದೆ 18 ಸಾವಿರ ಕನಿಷ್ಟ ವೇತನಕ್ಕೆ ಸಂಸತ್ತು ಒಪ್ಪಿಗೆ ನೀಡಿದೆ ಎಂದು ಮುದ್ರಿಸಿ ಲಕ್ಷಾಂತರ ಜನರ ಮಧ್ಯೆ ತಪ್ಪು ಸಂದೇಶ ರವಾನಿಸಿದೆ.

ಈ ತಪ್ಪನ್ನು ಅದು ಸರಿಪಡಿಸಿಕೊಳ್ಳುತ್ತದೆಯೋ? ಗೊತ್ತಿಲ್ಲ.?

– *ಮಹಾಂತೇಶ್*

JANASHAKTHI KANNADA VARA PATRIKE Feb 13-19, 2017 Price : Rs. 10/- Date of Publication : 10 February 2017 RNI No. KARKAN /2006/17926 Posted on every Satuarday
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026 Licensed to Post without prepayment License No. WPP-283

ಮಂಡ್ಯದಲ್ಲಿ ಮಹಿಳಾ ಕರ್ನಾಟಕ ಸಮಾವೇಶ
ಸಮತೆಗಾಗಿ ಸಹಪಯಣ



"ಸಾಹಿತ್ಯ ಮತ್ತು ಚಳುವಳಿಗಳೆರೆಡೂ ಕೂಡ ಸತ್ಯ ಅನ್ವೇಷಣೆಯ ವಿಭಿನ್ನ ಮಾರ್ಗಗಳು. ಕನ್ನಡ ಸಾಹಿತ್ಯದಲ್ಲಿ ಪಂಪ, ಕುಮಾರವ್ಯಾಸ, ಮುದ್ದಣ್ಣ, ಜನ್ನ ಮೊದಲಾದವರಿಂದಲೇ ಚಳುವಳಿಯ ಪ್ರಜ್ಞೆ ಇದೆ. ಸಾಹಿತ್ಯದಲ್ಲಿರುವ ಅಂತಹ ಚಳುವಳಿಯ ಪ್ರಜ್ಞೆಯನ್ನು ಉದ್ದೇಶ ಪೂರ್ವಕವಾಗಿ ಮರೆಮಾಚಲಾಗುತ್ತಿದೆ. ಇದು ಚಳುವಳಿಗಳನ್ನು ಕಡೆಗಣಿಸುವ ಹುನ್ನಾರ" ಎಂದು ನಾಡೋಜ ಬರಗೂರು ರಾಮಚಂದ್ರಪ್ಪ ಹೇಳಿದರು.

'ಸಮತೆಗಾಗಿ ಸಹಪಯಣ' ಮಹಿಳಾ ಕರ್ನಾಟಕ ಸಮಾವೇಶ–2017ನ್ನು ಮಂಡ್ಯದಲ್ಲಿ ಫೆ. 4 ರಂದು ಉದ್ಘಾಟಿಸಿ ಮಾತನಾಡಿದ ರಾಮಚಂದ್ರಪ್ಪರವರು 'ಸಾಹಿತ್ಯ ಮತ್ತು ಚಳುವಳಿಗೆ ಸಂಬಂಧ ಇರಬೇಕಿಲ್ಲ' ಎನ್ನುವುದೇ ಅಸಂಬದ್ಧವಾದ ಮಾತು. ಸಾಹಿತಿಗಳೆಲ್ಲರೂ ಚಳುವಳಿಗಾರರಾಗಬೇಕಿಲ್ಲ. ಆದರೆ ಚಳುವಳಿಯ ಪ್ರಜ್ಞೆ, ಚಳುವಳಿಯ ಮನಸ್ಥಿತಿ ಇರಬೇಕು. ಅಂತಹ ಪರಂಪರೆ ಕನ್ನಡ ಸಾಹಿತ್ಯದಲ್ಲಿದೆ. ಹಾಗಾಗಿಯೇ ಇಂದಿಗೂ ಪಂಪನ 'ಮನುಷ್ಯ ಜಾತಿ ತಾನೊಂದೇ ವಲಂ' ಎಂಬ ಮಾತು ಘೋಷಣೆಯಾಗಿ ಬಳಕೆಯಾಗುತ್ತಿದೆ ಎಂದರು.

ಎಲ್ಲ ಚಳುವಳಿಗಳಂತೆ ಮಹಿಳಾ ಚಳುವಳಿಗಳು ಸ್ವಲ್ಪ ಶಕ್ತಿಗುಂದಿವೆ. ಆದರೆ ಆರೋಪಿಸಲಾಗುತ್ತಿರುವಂತೆ 'ಚಳುವಳಿಗಳು ಸತ್ತಿಲ್ಲ' ಎಂದ ಅವರು ಮಹಿಳಾ ಚಳುವಳಿಗಳು ಬದಲಾದ ಕಾಲಕ್ಕೆ ತಕ್ಕಂತೆ ಸ್ವರೂಪ ಬದಲಿಸಿಕೊಂಡಿವೆ. ಇನ್ನೂ ಬದಲಿಸಿಕೊಳ್ಳಬೇಕಿದೆ ಎಂದರು.

ಸಾಹಿತ್ಯ–ಕಲೆ–ಚಳುವಳಿಯ ಸಹಪಯಣದಲ್ಲಿ ಸಮಾಜದ ಭಾಷೆ, ಪರಿಭಾಷೆಗಳು ಬದಲಾಗಬೇಕು. ಭಾಷೆ ಬದಲಾದರೆ ಚಳುವಳಿಯ ಸ್ವರೂಪಗಳು ಬದಲಾಗುತ್ತವೆ ಎಂದರು.

ಸಾಹಿತ್ಯ ಮತ್ತು ಚಳುವಳಿಯನ್ನು, ಕಲೆ ಮತ್ತು ಚಳುವಳಿಯನ್ನು ಪ್ರತ್ಯೇಕಿಸುವ ಪ್ರಯತ್ನಗಳ ಬಗ್ಗೆ ಗಂಭೀರವಾಗಿ ಆಕ್ಷೇಪಿಸಿದ ಅವರು ಮಾರುಕಟ್ಟೆ ಕೇಂದ್ರಿತ ಆರ್ಥಿಕತೆಯು ಸಮಾಜದಲ್ಲಿ ಉಂಟು ಮಾಡುತ್ತಿರುವ ವಿಘಟನೆಯ ಬಗ್ಗೆ, ಸೃಷ್ಟಿಸುತ್ತಿರುವ ಕೂಗುಮಾರಿಗಳ ಬಗ್ಗೆ ಎಚ್ಚರ ವಹಿಸಬೇಕು ಎಂದರು.

ಚಳುವಳಿಗಳ ಬಗ್ಗೆ ನಿಕೃಷ್ಠವಾಗಿ ಮಾತನಾಡುತ್ತಿರುವುದೇ ಚಳುವಳಿಯ ಶಕ್ತಿಯ ಬಗ್ಗೆ ಆಳುವವರಿಗೆ ಇರುವ ಭಯವನ್ನು ತೋರಿಸುತ್ತದೆ. ಕ್ಯಾಶ್–ಲೆಸ್ ಸಮಾಜ ಮಾಡಲು ಹೊರಟಿರುವ ಸರ್ಕಾರ ಕ್ಯಾಷ್ಟ್ ಮತ್ತು ಕ್ಲಾಸ್ ಬಗ್ಗೆ ಮೌನ ವಹಿಸುತ್ತದೆ. ಇದನ್ನು ಮೀರಲು ಸಾಧ್ಯವಾಗುವುದು ಚಳುವಳಿಯಿಂದ ಪ್ರೇರಿತವಾದ ಸಾಹಿತ್ಯ ರಚನೆಯಾದಾಗ ಹಾಗೂ ಸಾಹಿತ್ಯದಿಂದ ಪ್ರೇರಿತ ಚಳುವಳಿ ಮೂಡಿದಾಗ ಎಂದರು.

ಸಮಾವೇಶದ ಆಶಯ ಭಾಷಣ ಮಾಡಿದ ಉಪನ್ಯಾಸಕಿ ಸವಿತ ಬನ್ನಾಡಿರವರು "ಹೆಣ್ಣಿ ಕೈಯಲ್ಲಿರುವ ಬೆಂಕಿ ಒಲೆ ಉರಿಸಿ ಅನ್ನ ಕೊಡುತ್ತದೆ. ಆದರೆ ಗಂಡಿನ ಕೈಸೇರಿದ ಬೆಂಕಿ ಮನೆ, ಊರು, ದೇಶ ಸುಡುತ್ತದೆ. ಆದ್ದರಿಂದ ಹೆಣ್ಣಿನಿಂದ ಈ ಸಮಾಜ, ದೇಶ ಜಗತ್ತು ರಕ್ಷಿಸುವ ಕಲೆಯನ್ನು ಕಲಿಯಬೇಕು" ಎಂದು ಮಾರ್ಮಿಕವಾಗಿ ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಬಂಜಗೆರೆ ಜಯಪ್ರಕಾಶ್‌ರವರು ಜಗತ್ತಿನ ತಲ್ಲಣಗಳಿಗೆ ಉತ್ತರವಾಗಿ ಹೆಣ್ಣು ದೃಷ್ಟಿಕೋನ ಬೆಳೆಸಿಕೊಳ್ಳುವುದೊಂದೆ ಈಗಿರುವ ಮಾರ್ಗ ಎಂದರು.

"ಬಾಲ್ಯದಿಂದಲೇ ಸೌಂದರ್ಯ ಮತ್ತು ಸೇವೆ ಎಂಬ ಬಂಧನಗಳಲ್ಲಿ ಬಂಧಿಯಾಗುವ ಹೆಣ್ಣು ಅದನ್ನು ತೊಡೆಯುವತ್ತ ಹೆಜ್ಜೆ ಹಾಕಬೇಕು. ಹಾಗೆಯೇ ನಿಸರ್ಗ ಸಹಜವಾಗಿ ಮಾಡುವ ಪಾಲನೆ, ಪೋಷಣೆಯ ದೃಷ್ಟಿಕೋನವನ್ನೂ, ಮನೋಭಾವನ್ನೂ ಗಂಡಸರಲ್ಲಿ ಬೆಳೆಸಬೇಕು" ಎಂದು ಕರೆ ನೀಡಿದರು.

ಭಾರತದಲ್ಲಿ ಶೇಕಡ 60ರಷ್ಟು ಕುಟುಂಬಗಳು ಹೆಣ್ಣಿನ ನಿರ್ವಹಣೆಯಲ್ಲೇ ನಡೆಯುತ್ತಿದ್ದರೂ ಗಂಡು ಅಧಿಕಾರ, ಅಧೀನತೆ ಬಯಸುವ ನಾಚಿಕೆಗೇಡಿನ

ಪುಟ 15 ಕ್ಕೆ



ವಿಭಜಿತ ಸಮಾಜದ ಸಂದರ್ಭದಲ್ಲಿ ಮಹಿಳಾ ಚಳುವಳಿ ಇಡಿಯಾಗಿ ಏಕರೂಪವಾದುದ್ದಲ್ಲ. ಏಕರೂಪಿ ಮಹಿಳೆ, ಏಕರೂಪಿ ಪುರುಷ ಪರಿಕಲ್ಪನೆ ವಿಭಜಿತ ಸಮಾಜದಲ್ಲಿ ಅಪ್ರಸ್ತುತವಾಗಿರುವ ಈ ಸಂದರ್ಭದಲ್ಲಿ ಹೊಸಚಿಂತನೆ, ಹೊಸಕ್ರಮಗಳನ್ನು ಅಘೋಷಿಸಬೇಕಾಗಿದೆ. ಪುರುಷ ಪ್ರಧಾನ ಸಾಮಾಜಿಕ ವ್ಯವಸ್ತೇಯ ದಮನದ ಹಿನ್ನೆಲೆಯಲ್ಲೇ ಇಡೀ ಮಹಿಳಾ ಸಮೂಹವೇ ಏಕರೂಪವಾಗಿ ಗ್ರಹಿಸುವ ಕ್ರಮ ಆರಂಭದಲ್ಲಿ ಸರಿಯಾದುದ್ದೇ ಆಗಿದ್ದರೂ ಈಗ ವರ್ಗ ವರ್ಣ, ಜಾತಿ ಮುಂತಾದ ವಿಭಾಗಳಾದಿಯಾಗಿ ವಿಭಜಿಸಲ್ಪಟ್ಟು ಅದರ ಆದಾರದಲ್ಲೇ ಅದರದ್ದೇ ಆದ ನಿರ್ದಿಷ್ಟ ಸಮಸ್ಯೆ ಇರುವಾಗ ಮಹಿಳೆಯನ್ನು ಏಕರೂಪಿಯಾಗಿ ಗ್ರಹಿಸದೆ ವರ್ಗ, ವರ್ಣ, ಜಾತಿ, ಭಾಷೆ ಮುಂತಾದ ಹಿನ್ನೆಲೆಯಲ್ಲಿ ಮಹಿಳಾ ಸಮೂಹವನ್ನೂ ಗ್ರಹಿಸುವ ಅಗತ್ಯ ಇದೆ. ಇಂತಹ ತಿಳುವಳಿಕೆಯ ಫಲವಾಗಿಯೇ ಇಂತಹ ಸಮಾವೇಶ ಇಲ್ಲಿ ಜರುಗುತ್ತಿದೆ.

ಭಾಷೆ ಮತ್ತು ಪರಿಭಾಷೆಯನ್ನು ಬದಲಾಯಿಸಬೇಕು. ಅದು ಚಳುವಳಿಯ ಸಕ್ತಿ. ಭಾಷೆ ಪರಿಭಾಷೆ ಎರಡೂ ರೂಪಗೊಂಡದ್ದು ಪುರುಷ ಪ್ರಧಾನ ಸಾಮಾಜಿಕ ವ್ಯವಸ್ಥೆಯ ಹಿನ್ನೆಲೆಯಲ್ಲಿ ನಮ್ಮ ಭಾಷೆ ಪರಿಭಾಷೆ ಬದಲಾದರೆ ಚಳುವಳಿ, ಸೃಜನಶೀಲ, ಚಿಂತನಶೀಲ ಚಳುವಳಿಯಾಗಿದೆ ಅಂತ ಅರ್ಥ. ಸುಪ್ರಸಿದ್ಧ ಸಮಾಜವಿಜ್ಞಾನಿ, ಭಾಷಾ ವಿಜ್ಞಾನಿ ಭಾಷಾಶಾಸ್ತ್ರಜ್ಞ ನೋಮ್ ಚೋಮ್‌ಸ್ಕಿರವರು "ಸಾಹಿತಿಗಳು ಬಹಳ ಮುಖ್ಯವಾಗಿ ಜನಗಳಿಗೆ ಸತ್ಯವನ್ನು ಮಧ್ಯವರ್ತಿಯಾಗಿ ಹೇಳಬೇಕು. ಅಷ್ಟೇಏಕೆ ಪ್ರತಿಯೊಬ್ಬ ಮರ್ಯಾದಸ್ಥ ಮನುಷ್ಯನ ಕೆಲಸವೂ ಕೂಡ ಇದೆ ಆಗಿದೆ ಎನ್ನುತ್ತಾರೆ.

.. .. .. ಚಳುವಳಿಗಳ ಮನಸ್ಥಿತಿ ಸಾಹಿತಿಯಾದವನಿಗೆ ಇರಲೇಬೇಕಾಗುತ್ತದೆ. ಅದೇರೀತಿ ಚಳುವಳಿಗಳಲ್ಲಿ ಭಾಗವಹಿಸುವ ಅಥವಾ ಸಂಬಂಧ ಇಟ್ಟುಕೊಂಡಿರುವವರನ್ನು ಗುಮಾನಿಯಿಂದ ನೋಡುವ ಪ್ರವೃತ್ತಿಯನ್ನು ಬಿಡಬೇಕು.

.. .. ವಿವಿಧ ವರ್ಗವಲಯಗಳಿಗೆ ಸೇರಿದ ಮಹಿಳೆಯರನ್ನು ಗ್ರಹಿಸುವ, ಸಮಾನ ಆಸಕ್ತಿಗಾಗಿ ಒಗ್ಗೂಡಿಸುವ ಜೊತೆಗೆ ಎಲ್ಲ ಪ್ರಗತಿಪರರು ಒಂದಾಗಿ ಹೋಗುವುದು ಹೇಗೆ ಎಂಬುದು ಇವತ್ತಿನ ಸವಾಲಾಗಿದೆ. ಸ್ತ್ರೀ ಸಂವೇದನೆ,ಎಂಬುದು ಲಿಂಗಾಧಾರಿತವಲ್ಲ. ಲಿಂಗಾಧಾರಿತ ನೆಲೆಯನ್ನು ಮೀರಿದ್ದು.

– ಬರಗೂರು ರಾಮಚಂದ್ರಪ್ಪ

ನುಡಿಯೊಳಗಾಗಿ ನಡೆದವರ ಖಂಡಿಸುವ ದಿಟ್ಟತೆಯಲ್ಲಿ ತಮ್ಮ ಪಥ ಕಂಡುಕೊಡ ಶರಣೆಯರದ್ದು ಸಹಪಯಣದ ದಾರಿಯೇ ಹೊರತು ಯುದ್ಧದ ದಾರಿಯಲ್ಲ. ನುಡಿ–ನಡೆ ಒಂದಾಗಿರುವುದೇ ಇಲ್ಲಿ ಸೇರಿರುವ ನಮ್ಮೆಲ್ಲರ ಆಶಯ.

ಆದರೆ, ಯಾವಾಗಲೂ ಯುದ್ಧದ ಮಾತಿಗಿಂತ ಸಹಪಯಣದ ಮಾತು ಅಧಿಕಾರಸ್ಥರನ್ನು ಬೆಚ್ಚಿ ಬೀಳಿಸುತ್ತದೆ. ಅದರಲ್ಲೂ ದಮನಿತರು, ಮಹಿಳೆಯರು, ಸಂಘಟನೆಯ ಮಾತಾಡಿದರೆ. ಆ ಸಂಘಟನೆಗಳನ್ನು ಹಲವು ಚೂರುಗಳಾಗಿ ವಿಘಟಿಸಲು ಕಣ್ಣಿಗೆ ಕಾಣದ ಹಲವು ಮೊನೆಗಳು ಒಗ್ಗಟ್ಟಾಗಿ ಗುರಿಯಿಡುತ್ತವೆ. ಇದರಲ್ಲಿ ಮಾಯಾರೂಪಿಗಳು, ಕಾಮರೂಪಿಗಳು ಚಿತ್ತಾಕರ್ಷಕವಾಗಿ ನಮ್ಮ ಮುಂದೆ ಸುಳಿದಾಡತೊಡಗುತ್ತವೆ.

ಇಂತಹವುಗಳ ನಿಜ ಬಣ್ಣ ಬಯಲು ಮಾಡುತ್ತಾರೆ ಎಂಬ ಕಾರಣಕ್ಕಾಗಿಯೇ "ಬುದ್ಧಿಜೀವಿ"ಗಳ ಮೇಲೆ ದಾಳಿ ಮಾಡಲಾಗುತ್ತದೆ. ಅಷ್ಟೇ ಅಲ್ಲ ಈ ಕಣ್ಕಟ್ಟುಗಳನ್ನು ಎಲ್ಲರೂ ಅಪ್ಪಿಕೊಂಡು ಮುದ್ದಾಡುತ್ತಿರುವಾಗ ನಿಮ್ಮದೇನು ಸಮಸ್ಯೆ ಎಂಬ ಪ್ರಶ್ನೆಯನ್ನು ಮುಂದಿಡಲಾಗುತ್ತಿದೆ. ಇದು ಹಲವರಿಗೆ 'ಸರಿ'ಯಾದ ಪ್ರಶ್ನೆಯಾಗಿಯೇ ಗೋಚರಿಸುತ್ತಿದೆ. ಈ ರಂಗುರಂಗಿನ ಕಣ್ಕಟ್ಟುಗಳಿಗೆ ಸಾಮಾಜಿಕ ರಚನೆಯನ್ನು ಬದಲಾಯಿಸಿಕೊಂಡು ಬಿಟ್ಟಿದ್ದೇವೆ.

ಹೆಣ್ಣಿನ ಅಸಮಾನ ಸ್ಥಿತಿಗಳ ಒಳಸುಳಿಗಳನು ಗಂಭೀರವಾಗಿ ಬರೆದ ಸಾಹಿತ್ಯಗಳಾಗಲಿ ಕಲೆಗಳಾಗಲಿ, ಚಳುವಳಿಗಳಾಗಲಿ,ಇಂದು ಪ್ರಜ್ಞಾಪೂರ್ವಕ ಉಪೇಕ್ಷೆಗೆ ತುತ್ತಾಗುತ್ತಿವೆ.

– ಸಬಿತಾ ಬನ್ನಾಡಿ

ದಮನ, ಲೂಟಿ, ಶೋಷಣೆ ವ್ಯಾಪಕವಾಗಿದ್ದು ಜಗತ್ತಿನ ನಡೆ ಬಹಳ ವಿಕಾರವಾಗಿದೆ. ಯಾವುದನ್ನು ಸುಖ ಎಂದು ನಂಬಿದ್ದೇವೆಯೊ ಅದು ಭ್ರಾಂತಿಯಾಗಿದೆ. ಗಳಿಕೆ ಎಂದು ತಿಳಿದಿರುವುದು ಕಳ್ಳತನವಾಗಿದೆ. ಪ್ರತಿಯೊಬ್ಬರಿಗೂ ಹೆಣ್ಣು ನೋಟವನ್ನು ಕಲಿಸಬೇಕು. ಈ ಸಮಾವೇಶಕ್ಕೆ ಕೊಟ್ಟಿರುವ ಹೆಸರು ಬಹಳ ಉತ್ತಮವಾದುದಾಗಿದೆ. ಇದರಲ್ಲೇ ಹೆಣ್ಣಿನ ನೋಟ ಇದೆ. ಸಮತೆಗಾಗಿ ಸಹಪಯಣದಲ್ಲಿ ಸಹ ಪಯಣವೆಂಬುದನ್ನು ಹೆಣ್ಣು ಮಾತ್ರವೇ ಗುರುತಿಸಬಲ್ಲಳು. ಸಹ ಜೀವನದ ಮಾತನ್ನು ಹೆಣ್ಣಿನಿಂದಲೇ ಕಲಿಯಬೇಕು.

ಗಂಡು ತನ್ನಿಡಿ ಜೀವನವನ್ನು , ಹೆಣ್ಣಿನ ಮೇಲೆ ಅಧಿಕಾರ ಹೇರಲು ಮತ್ತು ತನ್ನ ಅಧಿಕಾರ ರಚನೆಯ ಬಿರುಕನ್ನು ಶೋಧಿಸಲು ವ್ಯಯಿಸುತ್ತಿದ್ದಾನೆ. ಕಾನೂನು , ಸಮಾಜ, ಆಡಳಿತಕ್ಕೆ ಹಲವು ಮುಖಗಳಿರಬಹುದು. ಆದರೆ ನಿಸರ್ಗಕ್ಕೆ ಇರುವುದು ಒಂದೇ ಸತ್ಯ. ಒಳತು–ಕೆಡುಕನ್ನು ನಿರ್ಧಾರ ಮಾಡುವರು ಯಾರು ಎಂಬ ಬಿಕ್ಕಟ್ಟಿನ ಸ್ತಿತಿಯಲ್ಲಿ ನಾವು ಇಂದು ಇದ್ದೇವೆ.

ಸಾವಿರ ವರ್ಷಗಳಿಂದ ಮಹಿಳೆಯನ್ನು ಮಕ್ಕಳು ಹೆರುವಿದಕ್ಕಾಗಿ ಸೀಮಿತಗೊಳಿಸಲಾಗಿತ್ತು. ಇನ್ನು ಮುಂದಿನ ಸಾವಿರ ವರ್ಷಗಳ ಕಾಲ ಕಾಮದ ವಸ್ತುವಾಗಿ ಕಟ್ಟಿ ಹಾಕುತ್ತಿದ್ದಾರೆ. ಝೀರೋ ಸೈಜಿ ಗಾಗಿ ವ್ಯಾಯಾಮ ಮಾಡಿಸಲಾಗುತ್ತದೆ.

– ಬಂಜಗೆರೆ ಜಯಪ್ರಕಾಶ

JANASHAKTHIKANNADAVARAPATRIKE: Printed, Published by **G.V.SRIRAMAREDDY**, EMS Bhavana, No.37/A, 8th Cross, Mahalakshmi Layout, BANGALORE-560086 Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**